ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 8 ಫೆಬ್ರವರಿ 15-21, 1999 ರೂ. 2.00

ಬಿಹಾರದಲ್ಲಿ ಕೊನೆಗೂ ರಾಷ್ಟ್ರಪತಿ ಆಳ್ವಿಕೆಯ ಹೇರಿಕೆ

ಬಿಜೆಪಿ ನೇತೃತ್ವದ ಸರಕಾರದ ಸರ್ವಾಧಿಕಾರಶಾಹಿ ಕ್ರಮಕ್ಕೆ ಪ್ರತಿಭಟನೆಗೆ ಸಿಪಿಐ-ಸಿಪಿಐ(ಎಂ) ಕರೆ

ಫೆಬ್ರವರಿ 10 ರ ರಾತ್ರಿ ಬಿಹಾರ ರಾಜ್ಯದ ಜಹಾನಾಬಾದ್ ಜಿಲ್ಲೆಯ ನಾರಾಯಣಪುರದಲ್ಲಿ ಭೂಮಾಲಕರ ದುಷ್ಟ ಗೂಂಡಾಗಳ ರಣವೀರ್ ಸೇನೆ ಮತ್ತೊಮ್ಮೆ ದಲಿತರ ಮೇಲೆರಗಿ ನಾಲ್ಕು ಮಹಿಳೆಯರು, ಒಬ್ಬ ಬಾಲಕಿಯೂ ಸೇರಿದಂತೆ 12 ಮಂದಿಯ ಕಗ್ಗೊಲೆ ಮಾಡಿದ್ದಾರೆ. ಇದರ ಬೆನ್ನ ಹಿಂದೆಯೇ ಯಾವುದಾದರೊಂದು ನೆವ ಸಿಗುತ್ತದೋ ಎಂದು ಕಾಯುತ್ತಿದ್ದ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ 5 ತಿಂಗಳ ಹಿಂದೆ ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂದು ಕಳಿಸಿದ್ದ ಹಾಗೂ ರಾಷ್ಟ್ರಪತಿಗಳು ಹಿಂದಿರುಗಿಸಿದ್ದ ಶಿಫಾರಸ್ಸನ್ನು ಮತ್ತೆ ಕಳಿಸಿತು. ಹೀಗೆ ಕೊನೆಗೂ ಸಂವಿಧಾನದ 356ನೇ ಕಲಮಿನ ದುರುಪಯೋಗ ಮಾಡಿ ರಾಬ್ಡಿದೇವಿ ಸರಕಾರವನ್ನು ವಜಾ ಮಾಡಿರುವುದನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿ ಎ.ಬಿ.ಬರ್ಧನ್ ಜಂಟಿ ಹೇಳಿಕೆಯೊಂದರಲ್ಲಿ ಬಲವಾಗಿ ಖಂಡಿಸಿದ್ದಾರೆ.

ರಣವೀರ್ ಸೇನೆ ಭೂ ಮಾಲಕರ ಹಿತಾಸಕ್ತಿಗಳನ್ನು ರಕ್ಷಿಸಲು, ಕೂಲಿ ಹೆಚ್ಚಳಕ್ಕಾಗಿ, ಭೂಸುಧಾರಣೆಗಳಿಗಾಗಿ ಕೃಷಿ ಕೂಲಿಕಾರರ ಆಂದೋಲನವನ್ನು ಎದುರಿಸಲು ರಚಿಸಿಕೊಂಡ ಸಂಘಟನೆ. ಎರಡು ದಶಕಗಳಿಗೂ ಹೆಚ್ಚಿನ ತನ್ನ ಚರಿತ್ರೆಯಲ್ಲಿ ಈ ಸಂಘಟನೆ ನಡೆಸಿದ ಕೊಲೆ-ಸುಲಿಗೆಗಳಲ್ಲಿ 487 ಕ್ಕಿಂತಲೂ ಹೆಚ್ಚು ಜೀವಗಳ ಬಲಿಯಾಗಿದೆ.

ಭೂಮಿ ಪ್ರಶ್ನೆಯನ್ನು ಪರಿಹರಿಸದಿರುವುದೇ ಬಿಹಾರದಲ್ಲಿನ ಗಂಭೀರ ಪರಿಸ್ಥಿತಿಯ ಮೂಲ ಕಾರಣ. ಭೂಮಾಲಕ ಹಿತಾಸಕ್ತಿಗಳ ಪಕ್ಷ ವಹಿಸುವ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಇಂತಹ ಪರಿಸ್ಥಿತಿಗೆ ಹೊಣೆಗಾರರು. ಈ ಎರಡೂ ಪಕ್ಷಗಳು ಸಂಸತ್ತಿನಲ್ಲಿ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ನೆನೆಗುದಿಗೆ ಬಿದ್ದಿರುವ ಕೃಷಿ ಕೂಲಿಕಾರರ ಶಾಸನ ಅಂಗೀಕಾರವಾಗದಂತೆ ಅಡ್ಡಿ ಪಡಿಸಿರುವ ಪಕ್ಷಗಳು. ಬಿಹಾರ ಒಂದು ಎಂತಹ ರಾಜ್ಯವೆಂದರೆ ಇಲ್ಲಿ ಭೂಸುಧಾರಣೆಗಳೂ ನಡೆದಿಲ್ಲ, ಭೂ ದಾಖಲೆಗಳನ್ನು ಸರಿಪಡಿಸಲೂ ಬಿಟ್ಟಿಲ್ಲ ಎಂದು ಸಿಪಿಐ(ಎಂ) ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿಗಳ ಜಂಟಿ ಹೇಳಿಕೆ ನೆನಪಿಸಿದೆ.

ಸಮತಾ ಪಕ್ಷ ಮತ್ತು ಬಿಜೆಪಿಯ ಆಂತರಿಕ ಸಮಸ್ಯೆಗಳೂ ಕೇಂದ್ರ ಸರ್ಕಾರದ ಈ ಶಿಫಾರಸಿನ ಮೇಲೆ ಪ್ರಭಾವ ಬೀರಿವೆ ಎಂದೂ ಈ ಹೇಳಿಕೆ ಅಭಿಪ್ರಾಯಪಟ್ಟಿದೆ. ಕೆಲವೇ ದಿನಗಳ ಹಿಂದೆ ರಾಬ್ಡಿದೇವಿ ಸರಕಾರವನ್ನು ವಜಾ ಮಾಡುವ ವಚನವನ್ನು ಈಡೇರಿಸಿಲ್ಲ ಎಂಬ ನೆವವೊಡ್ಡಿ ಸಮತಾ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ಸೇರಿದ್ದರು. ಇದೂ ಕೂಡಾ ರಣವೀರ ಸೇನೆಗೆ ತನ್ನ ಕ್ರಿಮಿನಲ್ ಚಟುವಟಿಕೆಗಳನ್ನು ಹೆಚ್ಚಿಸಲು ಪ್ರೋತ್ಸಾಹ ನೀಡಿದೆ ಎಂದು ಸಿಪಿಐ(ಎಂ) ಹಾಗೂ ಸಿಪಿಐ ಪ್ರಧಾನ ಕಾರ್ಯದರ್ಶಿಗಳು ಹೇಳಿದ್ದಾರೆ.

ಕೇಂದ್ರದಲ್ಲಿರುವ ಪಕ್ಷದ ಸಂಕುಚಿತ ಹಿತಾಸಕ್ತಿಗಳಿಗಾಗಿ 356ನೇ ಕಲಮಿನ ದುರುಪಯೋಗವನ್ನು ಸದಾ ವಿರೋಧಿಸಿಕೊಂಡು ಬಂದಿರುವ ಸಿಪಿಐ ಹಾಗೂ ಸಿಪಿಐ(ಎಂ) ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಈ ಪಕ್ಷಪಾತಪೂರ್ಣ ಹಾಗೂ ಸರ್ವಾಧಿಕಾರಶಾಹಿ ಕ್ರಮವನ್ನು ಬಲವಾಗಿ ಖಂಡಿಸುತ್ತಾ ಫೆಬ್ರವರಿ 14 ರಂದು ಎಲ್ಲಾ ರಾಜ್ಯ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗಳನ್ನು ನಡೆಸಲು ಕರೆ ನೀಡಿವೆ.

ರಾಜ್ಯ ಕಾರ್ಯದರ್ಶಿ ಮಂಡಳಿ ಖಂಡನೆ

ಚುನಾಯಿತ ರಾಬ್ಡಿದೇವಿ ಸರಕಾರವನ್ನು ಸಂವಿಧಾನದ 356ನೇ ವಿಧಿಯನ್ನು ಬಳಸಿ ವಜಾ ಗೊಳಿಸಿ ರಾಷ್ಟ್ರಪತಿ ಆಡಳಿತ ಹೇರಿದ ನಿರ್ಧಾರವನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟಾರಿಯಾಟ್ ಉಗ್ರವಾಗಿ ಖಂಡಿಸಿದೆ.

ಬಿಜೆಪಿಯದು ಇಬ್ಬಗೆಯ ಧೋರಣೆಯಾಗಿದೆ. ಸಂವಿಧಾನದ ಮೂಲ ತತ್ವಕ್ಕೆ ತಿಲಾಂಜಲಿ ನೀಡಿ ಕ್ರಿಶ್ಚಿಯನ್ನರ ಕೊಲೆ, ದಬ್ಬಾಳಿಕೆ ನಡೆಸಿದವರನ್ನು ರಕ್ಷಿಸಿದ ಗುಜರಾತ್ ಸರ್ಕಾರವನ್ನು ಉಳಿಸಲು ನಾಚಿಕೆಯಿಲ್ಲದೇ ಬಿಜೆಪಿ ಮುಂದಾಗಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ್ದು ಬರ್ಬರ ಕಾನೂನುಗಳ ಆಡಳಿತ ಎಂದು ಟೀಕಿಸಿರುವ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ರಾಬ್ಡಿದೇವಿ ಸರ್ಕಾರದ ತಪ್ಪು ಆಡಳಿತ ನೀತಿಗಳ ವಿರುದ್ಧ ರಾಜಕೀಯವಾಗಿ ಹೋರಾಡಬೇಕೇ ಹೊರತು ಸಂವಿಧಾನದ 356ನೇ ಕಲಮನ್ನು ದುರ್ಬಳಕೆ ಮಾಡಿ ಅಲ್ಲ ಎಂದಿದೆ.

ಕೇಂದ್ರದ ಬಿಜೆಪಿ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ಫೆಬ್ರವರಿ 13 ಮತ್ತು ಫೆಬ್ರವರಿ 14 ರಂದು ರಾಜ್ಯಾದ್ಯಂತ ಪ್ರತಿಭಟನಾ ಮೆರವಣಿಗೆ, ಬಿಜೆಪಿ, ಸಮತಾ ಮತ್ತು ರಣಬೀರ ಸೇನೆಗಳ ಭೂತದಹನ, ರಾಷ್ಟ್ರಪತಿಗಳಿಗೆ ತಂತಿ ಸಂದೇಶ, ಸಭೆಗಳನ್ನು ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಡೆಸಲು ಎಲ್ಲಾ ಘಟಕಗಳಿಗೆ ಸಿಪಿಐ(ಎಂ) ಕರೆ ನೀಡಿದೆ.

ಬೆಂಗಳೂರಿನಲ್ಲಿ ಫೆಬ್ರವರಿ 13 ರಂದು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನೂರಾರು ಜನರು ಭಾಗವಹಿಸಿದ್ದ ಪ್ರತಿಭಟನಾ ಮತಪ್ರದರ್ಶನದಲ್ಲಿ ಭೂತ ದಹನ ನಡೆಸಲಾಯಿತು. ರಾಜ್ಯ ಕಾರ್ಯದರ್ಶಿ ಸೂರ್ಯನಾರಾಯಣ ರಾವ್, ಗುರುಶಾಂತ್ ಹಾಗೂ ಪಿ.ಜಗನ್ನಾಥ್ ಮಾತನಾಡಿದರು.

ಫೆಬ್ರವರಿ 22: ಅಖಿಲ ಭಾರತ ಪ್ರತಿಭಟನಾ ದಿನ

ವಿಮಾ ಖಾಸಗೀಕರಣ, ಪೇಟೆಂಟ್ ತಿದ್ದುಪಡಿ ಮಸೂದೆಗಳನ್ನು ಪ್ರತಿಭಟಿಸಲು ರಾಷ್ಟ್ರೀಯ ಸಮಾವೇಶದ ಕರೆ

ನವದೆಹಲಿಯಲ್ಲಿ ಫೆಬ್ರವರಿ 6 ರಂದು ನಡೆದ ರಾಷ್ಟ್ರೀಯ ಸಮಾವೇಶ ವಿಮಾ ನಿಯಂತ್ರಣ ಪ್ರಾಧಿಕಾರ(ಐಆರ್‌ಎ) ಮಸೂದೆ ಮತ್ತು ಪೇಟೆಂಟ್ ತಿದ್ದುಪಡಿ ಮಸೂದೆಯ ವಿರುದ್ಧ ಫೆಬ್ರವರಿ 22 ರಂದು ಅಖಿಲ ಭಾರತ ಪ್ರತಿಭಟನಾ ದಿನವನ್ನು ಆಚರಿಸಲು ಕರೆ ನೀಡಿದೆ. ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗುವ ಆ ದಿನದಂದು ಸಂಸತ್ ಮಾರ್ಗದಲ್ಲಿ ಒಂದು ಬೃಹತ್ ರ್‍ಯಾಲಿಯೂ ನಡೆಯಲಿದೆ. ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಈ ಸಮಾವೇಶವನ್ನು ಏರ್ಪಡಿಸಿತ್ತು.

ಅರ್ಥಶಾಸ್ತ್ರಜ್ಞ ಡಾ. ಅರುಣ್ ಘೋಷ್, ಮಾಜಿ ಹಣಕಾಸು ಕಾರ್ಯದರ್ಶಿ ಎಸ್.ಪಿ.ಶುಕ್ಲಾ, ದಿಲ್ಲಿ ಸಾಯನ್ಸ್ ಫೋರಂನ ಅಮಿತ್ ಸೇನ್‌ಗುಪ್ತಾ, ಪೇಟೆಂಟ್ ಕಾನೂನು ಕಾರ್ಯತಂಡದ ಕೆಯಾಲಾ, ಸಿಐಟಿಯುನ ಎಂ.ಕೆ.ಪಂಧೆ, ಎಐಟಿಯುಸಿಯ ಕೆ.ಎಲ್.ಮಹೇಂದ್ರ, ಎಐಸಿಸಿಟಿಯುನ ದೀಪಂಕರ್ ಭಟ್ಟಾಚಾರ್ಯ, ಹೆಚ್.ಎಂ.ಎಸ್.ನ ಎ.ಡಿ.ನಾಗಪಾಲ್, ಯುಟಿಯುಸಿ-ಲೆನಿನ್ ಸರಣಿಯ ಅಶುತೋಷ್ ಬ್ಯಾನರ್ಜಿ, ಟಿಯುಸಿಸಿಯ ರಾಜೆಂದರ್ ಶಾಸ್ತ್ರಿ, ಪಿ.ಡಬ್ಲ್ಯ್.ಟಿ.ಯು. ಸಿ.ಯ ಅಶೋಕ ರಾವ್ ಅಖಿಲ ಭಾರತ ವಿಮಾ ನೌಕರರ ಸಂಘದ ಎನ್.ಎಂ. ಸುಂದರಂ ಮತ್ತಿತರರು ಮಾತನಾಡಿದರು.

ಈ ಸಮಾವೇಶ ಸರ್ವಾನುಮತದಿಂದ ಅಂಗೀಕರಿಸಿದ ಘೋಷಣೆ ಐ.ಆರ್.ಎ. ಮತ್ತು ಪೇಟೆಂಟ್ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು, ಸಂಬಂಧಪಟ್ಟ ಎಲ್ಲಾ ಪ್ರಯತ್ನಗಳನ್ನು ಕೈಬಿಡಬೇಕು ಎಂದು ಆಗ್ರಹಪಡಿಸಿದೆ. ಪ್ರತಿಪಕ್ಷದಲ್ಲಿದ್ದಾಗ ಇವೆರಡೂ ಮಸೂದೆಗಳನ್ನು ವಿರೋಧಿಸಿದ್ದ ಬಿಜೆಪಿ ಈಗ ವಿಶ್ವ ವ್ಯಾಪಾರ ಸಂಘಟನೆ ವ್ಯವಸ್ಥೆಯಡಿ ಇದು ಅನಿವಾರ್ಯವಾಗಿದೆ ಎನ್ನುತ್ತಿದೆ. ಇದು ರಾಷ್ಟ್ರೀಯ ಹಿತಾಸಕ್ತಿಗಳನ್ನು ಹೇಗೆ ಕ್ರಮೇಣವಾಗಿ ಬಿಟ್ಟುಕೊಡಲಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಸ್ಟ್ರೋಬ್ ಟಾಲ್ಬೋಟ್ ಮತ್ತು ಜಸ್ವಂತ್ ಸಿಂಗ್ ನಡುವಿನ ಗುಪ್ತ ಮಾತುಕತೆಗಳ ಫಲಶ್ರುತಿ ಇದು ಎಂದು ಸಮಾವೇಶ ಅಭಿಪ್ರಾಯ ಪಟ್ಟಿತು. ಕಾಂಗ್ರೆಸ್ ಪಕ್ಷ ಸರಕಾರದ ಈ ಆಟಕ್ಕೆ ಕುಮ್ಮಕ್ಕು ನೀಡುತ್ತಿದೆ ಎಂದೂ ಖಂಡಿಸಲಾಯಿತು. ಈ ಎರಡು ಮಸೂದೆಗಳು ವಿಮಾ, ಔಷಧಿ ಮತ್ತು ಕೃಷಿ ವಲಯಗಳನ್ನು ಖಾಸಗೀಕರಿಸುವುದು, ಅದರಲ್ಲಿ ಬಹುಪಾಲು ಬಹುರಾಷ್ಟ್ರೀಯ ಕಂಪನಿಗಳಿಗೆ ಹೆಬ್ಬಾಗಿಲು ತೆರೆದುಕೊಟ್ಟು ದೇಶದ ಹಾಗೂ ಕೋಟಿಗಟ್ಟಲೆ ರೈತರ ಹಿತಾಸಕ್ತಿಗಳನ್ನು ಗಂಡಾಂತರಕ್ಕೆ ಸಿಲುಕಿಸುತ್ತವೆ ಎಂದು ಸಮಾವೇಶ ಹೇಳಿದೆ.


ಬೆಂಗಳೂರಿನಲ್ಲಿ ಮೆರವಣಿಗೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಕರ್ನಾಟಕ ಘಟಕವೂ ಫೆಬ್ರವರಿ 22 ರಂದು ಎಲ್ಲಾ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ರ್‍ಯಾಲಿಗಳನ್ನು ಸಂಘಟಿಸುವುದರ ಮೂಲಕ ಪ್ರತಿಭಟನಾ ದಿನವಾಗಿ ಆಚರಿಸಲು ನಿರ್ಧರಿಸಿದೆ. ಬೆಂಗಳೂರಿನಲ್ಲಿ ಅಂದು ದೊಡ್ಡ ಮೆರವಣಿಗೆಯೊಂದನ್ನು ಬನಪ್ಪ ಪಾರ್ಕಿನಲ್ಲಿ ಸಂಘಟಿಸಲಾಗುತ್ತಿದೆ. ಇದಕ್ಕೆ ಮೆಡಿಕಲ್ ರೆಪ್ರೆಸೆಂಟೇಟಿವ್ ಹಾಗೂ ಅಖಿಲ ಭಾರತ ವಕೀಲರ ಸಂಘ ರಾಜ್ಯ ಮುಖಂಡರನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಕರಪತ್ರ, ಪೋಸ್ಟರ್‌ಗಳ ಮೂಲಕ ವ್ಯಾಪಕ ಪ್ರಚಾರ-ಪ್ರಕ್ಷೋಭೆ ನಡೆಸಲು ನಿರ್ಧರಿಸಲಾಗಿದೆ. ಅಂದು ಪೇಟೆಂಟ್ ತಿದ್ದುಪಡಿ ಮಸೂದೆ ಮತ್ತು ವಿಮಾ ಪ್ರಾಧಿಕಾರ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿ ಪ್ರಧಾನ ಮಂತ್ರಿಗಳಿಗೆ ತಂತಿ ಸಂದೇಶ ಕಳಿಸಬೇಕು ಎಂದೂ ವೇದಿಕೆಯ ಕರ್ನಾಟಕ ಘಟಕ ಕರೆ ನೀಡಿದೆ.



ಪಡಿತರ ಬೆಲೆ ಏರಿಕೆಗೆ ಎಲ್ಲೆಡೆ ಪ್ರತಿಭಟನೆ

ಕರ್ನಾಟಕದಲ್ಲಿ .... ಪುಟ 3



ಇತರೆಡೆ .... ಪುಟ 6

ಜೋಳದ ಬೆಲೆ ಇಳಿಸಿ - ಪಡಿತರ ವ್ಯವಸ್ಥೆ ಮೂಲಕ ಒದಗಿಸಿ

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳ ಜನರಿಗೆ ಜೋಳ ದೈನಂದಿನ ಬಳಕೆ ವಸ್ತು. ಗೋಧಿ ಮತ್ತು ಅಕ್ಕಿಗಿಂತ ಕಡಿಮೆ ಬೆಲೆಯಲ್ಲಿ ಸಿಗುತ್ತಿದ್ದ ಜೋಳ ಜನಸಾಮಾನ್ಯರ ಆಹಾರ ವಸ್ತು. ಕೆ.ಜಿ.ಗೆ ರೂ. 8 ರಿಂದ 11 ರ ವರೆಗೆ ಸಿಗುತ್ತಿದ್ದ ಜೋಳದ ಬೆಲೆ ಇದೀಗ ರೂ. 18 ರಿಂದ 20 ಕ್ಕೆ ಏರಿದೆ.

ಜೋಳ ಬೆಳೆಯುವ ಪ್ರದೇಶದ ಕೃಷಿ ಕೂಲಿಕಾರರಿಗೆ ಸಿಗುವ ದೈನಂದಿನ ಕೂಲಿ ರೂ. 10 ರಿಂದ 12 ಮಾತ್ರ. ಅಂದರೆ ದಿನವೆಲ್ಲಾ ದುಡಿದರೂ ಅರ್ಧ - ಮುಕ್ಕಾಲು ಕೆ.ಜಿ. ಜೋಳ ಮಾತ್ರ ಸಿಗುತ್ತದೆ. ಹೆಚ್ಚು ಕಡಿಮೆ ಅಕ್ಕಿಯಷ್ಟೆ ದರ. ಇದರಿಂದ ಬಡಜನರು, ಕೃಷಿಕೂಲಿಕಾರರು ತತ್ತರಿಸುವಂತಾಗಿದೆ. ಒಂದೆಡೆಯಲ್ಲಿ ಬರ ಮತ್ತು ನೆರೆ ಹಾವಳಿಯಿಂದ ಫಸಲು ನಾಶವಾಗಿ ಉದ್ಯೋಗ ಕಳಕೊಂಡ ರೈತರು, ಇನ್ನೊಂದೆಡೆ ಜೋಳ ಮತ್ತಿತರ ಆಹಾರ ವಸ್ತುಗಳ ಬೆಲೆ ಏರಿಕೆಯಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ದೊಡ್ಡ ವ್ಯಾಪಾರಸ್ಥರು, ದಾಸ್ತಾನುಗಾರರು ಜೋಳವನ್ನು ದಾಸ್ತಾನು ಮಾಡಿ ಹೆಚ್ಚಿನ ಬೆಲೆಯಲ್ಲಿ ಮಾರುತ್ತಿದ್ದಾರೆ. ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ತಮಗೆ ಯಾವುದೇ ಸಂಬಂಧ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

ಬಿ.ಜೆ.ಪಿ. ನೇತೃತ್ವದ ಕೇಂದ್ರ ಸರಕಾರವು ಈಗಾಗಲೇ ರೇಶನ್ ದರಗಳನ್ನು ಹೆಚ್ಚಿಸಿರುವುದರಿಂದ ಇದರ ಪರಿಣಾಮವೂ ಈ ಭಾಗದ ಕೂಲಿಕಾರರು, ಅಸಂಘಟಿತ ಕಾರ್ಮಿಕರು ಮಧ್ಯಮ ವರ್ಗದ ಜನರನ್ನು ಬಾಧಿಸಲಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ದರ ಹೆಚ್ಚಾಗಲಿದೆ.

ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

1. ಹೊರಗಡೆಯಿಂದ ಜೋಳವನ್ನು ತರಿಸಿಕೊಂಡು ಜೋಳದ ಕೊರತೆಯನ್ನು ತುಂಬುವುದು.
2. ಇಂದಿನ ಸಂದರ್ಭವನ್ನು ಬಳಸಿಕೊಂಡು ಬೆಲೆ ಏರಿಸುವ ಕಾಳಸಂತೆಕೋರರ ಮೇಲೆ ಅಗತ್ಯ ವಸ್ತುಗಳ ಕಾಯಿದೆಯಲ್ಲಿ ಕ್ರಮ ತೆಗೆದುಕೊಂಡು ಬೆಲೆಗಳನ್ನು ಇಳಿಸುವುದು.
3. ಪಡಿತರ ವ್ಯವಸ್ಥೆಯ ಮೂಲಕ ಜೋಳ ಮತ್ತು ರಾಗಿಯನ್ನು ನೀಡಬೇಕು. ಕೇಂದ್ರ ಸರಕಾರವು ಈಗಿರುವ ಅಕ್ಕಿ, ಗೋಧಿ ಜತೆಯಲ್ಲಿ ಕನಿಷ್ಟ 10 ಕೆ.ಜಿ.ಜೋಳ ನೀಡುವ ವ್ಯವಸ್ಥೆ ಮಾಡಬೇಕು. ಇದಕ್ಕೆ ಸಬ್ಸಿಡಿ ನೀಡಬೇಕು.
4. 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಜೋಳ ಮತ್ತು ಇತರ ಧಾನ್ಯಗಳನ್ನು ನೀಡಬೇಕು.

ಪತ್ರಿಕಾ ಸಮ್ಮೇಳನದಲ್ಲಿ ಈ ಬಗ್ಗೆ ಮಾತನಾಡುತ್ತಾ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್‌ರವರು 1983-84 ರಲ್ಲಿ ಜನತಾ ಸರಕಾರ ಬಂದಾಗ ಪಡಿತರ ವ್ಯವಸ್ಥೆಯಲ್ಲಿ ಜೋಳ ನೀಡುವ ವ್ಯವಸ್ಥೆ ತರಲಾಗಿತ್ತು ಎಂದು ನೆನಪಿಸಿದರು. ಜನತಾದಳ ಸರ್ಕಾರ ತಕ್ಷಣವೇ ಜೋಳದ ಬೆಲೆ ಇಳಿಸುವ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಸೂರಿಯವರು 15 ದಿನಗಳಲ್ಲಿ ರಾಜ್ಯ ಸರಕಾರದ ಪ್ರತಿಕ್ರಿಯೆ ಬಾರದಿದ್ದರೆ ಜೋಳ ಬಳಸುವ ಪ್ರದೇಶಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾ ಕಚೇರಿಗಳ ಪಿಕೆಟಿಂಗ್ ನಡೆಸಲಾಗುವುದು ಎಂದು ಎಚ್ಚರಿಸಿದರು. ಫೆಬ್ರವರಿ 20 ರಿಂದ ಜೋಳದ ದಾಸ್ತಾನುಗಳಿಗೆ ಲಗ್ಗೆ ಹಾಕಲು ರೈತರು ನಿರ್ಧರಿಸಿದ್ದಾರೆ.

ಧಣಿಯ ಆತ್ಮ ಸಾಕ್ಷಿ


ಐಎಂಎಫ್‌ಗೂ ಆತ್ಮ ಸಾಕ್ಷಿಯಿದೆ ಎಂದು ಅದರ ಡೆಪ್ಯುಟಿ ಮ್ಯಾನೇಜಿಂಗ್ ಡೈರೆಕ್ಟರ್ ಆದ ಸ್ಟಾನ್ಲಿ ಫಿಶರ್ ಹೇಳಿದ್ದಾನೆ. ಐಎಂಎಫ್ ತನ್ನ ಸಾಲದ ಸಾಮಾಜಿಕ ಪರಿಣಾಮಗಳನ್ನು ಗಮನಿಸುವುದಿಲ್ಲ ಎಂದು ಹೇಳುವುದು ಮೂರ್ಖತನ ಎಂದು ಆತ ಹೇಳಿದ್ದಾನೆ.

ಐ.ಎಂ.ಎಫ್.ನ ಪ್ರತಿಯೊಂದು ಯೋಜನೆಯ ಒಂದು ಭಾಗ ಕಷ್ಟಗಳನ್ನು ಕಡಿಮೆ ಮಾಡುವ ಸಲುವಾಗೇ ಇರುತ್ತದೆ ಎಂದೂ ಆತ ಹೇಳಿದ್ದಾನೆ. ಇದರ ಪಟ್ಟಿ ನೀಡಿರುವ ಆತ ದಕ್ಷಿಣ ಕೊರಿಯಾದ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮದಲ್ಲಿ ನಿರುದ್ಯೋಗಕ್ಕೆ ಮದ್ದಿತ್ತು, ಥ್ಯಾಲ್ಯಾಂಡಿನ ಕಾರ್ಯಕ್ರಮದಲ್ಲೂ ಇದು ಇತ್ತಂತೆ. ರಶಿಯಾದ ಯೋಜನೆಯಲ್ಲಿ ಪೆನ್ಶನ್ ನೀಡುವ ಒಂದು ಯೋಜನೆಯಿತ್ತಂತೆ.

ಫಂಡ್‌ಗೆ ತನ್ನ ಕ್ರಮಗಳ ಪರಿಣಾಮಗಳ ಬಗ್ಗೆ ಪೂರ್ಣ ಅರಿವಿದೆಯಂತೆ, ಫಂಡಿನಲ್ಲಿ ಕೆಲಸ ಮಾಡುವ ಜನಗಳಿಗೆ ಆತ್ಮಸಾಕ್ಷಿಯಿದೆ ಎಂದೂ ಈತ ಹೇಳಿದ್ದಾನೆ.

ಐಎಂಎಫ್ ಬಗ್ಗೆ ಇಂದು ಜನ ಸಾಮಾನ್ಯರಲ್ಲಿ ಎಂತಹ ತಿರಸ್ಕಾರದ ಭಾವನೆ ಬೆಳೆಯುತ್ತಿದೆ ಎಂಬುದಕ್ಕೆ ಇದು ಒಳ್ಳೆಯ ಸೂಚನೆ. ಐಎಂಎಫ್ ಇಂತಹ ಟೀಕೆಗಳಿಗೆ ಒಳಗಾಗಿರುವುದರಿಂದಲೇ ಈ ಮಹಾಶಯ ಇಂತಹ ವಿವರಣೆ ನೀಡುವ ಅವಶ್ಯಕತೆ ಬಂದಿದೆಯೆಂದಾದ ಮೇಲೆ ಐಎಂಎಫ್‌ನ ಜನಪ್ರಿಯತೆ ಎಷ್ಟಿದೆ ಎಂಬುದು ಒಂದು ಅಳತೆಗೋಲಾದರೆ ಐ.ಎಂ.ಎಫ್. ನಿಂದ ನೆರವು ಪಡೆದ ಪ್ರತಿಯೊಂದು ದೇಶವು ಇಂದು ಸಾಲದ ಬಲೆಯಲ್ಲಿ ಸಿಕ್ಕಿ ಒದ್ದಾಡುತ್ತಿರುವುದು ಇನ್ನೊಂದು ಅಳತೆಗೋಲು.

ಐಎಂಎಫ್‌ನದ್ದು ಸಾಮ್ರಾಜ್ಯ ಶಾಹಿ ಆತ್ಮಸಾಕ್ಷಿಯಲ್ಲವೆ?



ಕಳ್ಳರಿಗೆ 'ಸಮಾಧಾನ'- ಸರ್ಕಾರಕ್ಕೆ 2500 ಕೋಟಿ ರೂಪಾಯಿಗಳು

ಸರ್ಕಾರಕ್ಕೆ 2500 ಕೋಟಿ ರೂಪಾಯಿಗಳು ಸಂಗ್ರಹವಾದರೆ ಒಳ್ಳೆಯದಾಯಿತಲ್ಲವೆ ಎಂದು ಕೇಳಬಹುದು. ಹೌದು ಹಾಗೆ ಕೇಳಿದರೆ ಇದು ದೊಡ್ಡ ಮೊತ್ತವೇ. ಆದರೆ ಇದು ಕಾಳಸಂತೆಕೋರರು ಮಾಡಿಕೊಂಡ ಕಪ್ಪು ಹಣದ ಮೇಲೆ ನೀಡಿದ ತೆರಿಗೆ ಎಂಬುದನ್ನು ಗಮನಿಸಬೇಕು. ಸಮಾಧಾನ ಎಲ್ಲಿ ಆದಾಯ ತೆರಿಗೆ ಪಾವತಿಸದವರ ವಿರುದ್ಧ ಪ್ರಕರಣಗಳು ದಾಖಲೆಯಾಗಿ ದ್ದರೂ ಅಂತವರಿಗೆ ಒಂದು ಅವಕಾಶ ನೀಡಿ ಅವರ ಅಪರಾಧಗಳನ್ನು ಕ್ಷಮಿ ಸುವ ಹುನ್ನಾರದ ಯೋಜನೆ. ಹಿಂದೆ ವಿಡಿಐಎಸ್ ಎಂಬ ಯೋಜನೆ ಬಂದು ಕಪ್ಪುಹಣವಿರುವವರಿಗೆ ಕ್ಷಮೆ ನೀಡಲು ಅನುಕೂಲ ಮಾಡಿ ಕೊಡಲಾಗಿತ್ತು.

ಈಗ ಇದು ಇನ್ನೊಂದು ಅಂತಹದೇ ಯೋಜನೆ. ಪ್ರತಿವರ್ಷವೂ ಇಂತಹ ಒಂದೊಂದು ಯೋಜನೆ ಘೋಷಿಸಿದರೂ ಯಶಸ್ವಿಯಾಗುವಂತೆ ಕಾಣಿಸುತ್ತಿದೆ. ಯಾಕೆಂದರೆ ಆದಾಯ ತೆರಿಗೆ ಕಾನೂನು ಪಾಲನೆ ಅಷ್ಟು ಚೆನ್ನಾಗಿದೆ. ಶ್ರೀಮಂತರು ಕೊಟ್ಟಿದ್ದೇ ಲೆಕ್ಕ. ಅವರು ನೀಡಿದ್ದೇ ತೆರಿಗೆ. ಹೀಗಿರುವಾಗ ತೆರಿಗೆ ಕಾನೂನಿನ ಉಲ್ಲಂಘನೆ ದಿನ ನಿತ್ಯವೂ ಆಗುತ್ತಲೇ ಇದೆ. ಅದನ್ನು ತಪ್ಪಿಸಲು ಬಿಗಿ ಕ್ರಮಗಳನ್ನೇ ಕೈಗೊಳ್ಳದೇ ಆನಂತರ ಇಂತಹ ಯೋಜನೆಗಳನ್ನು ಘೋಷಿಸುವುದು ಸರ್ಕಾರಗಳಿಗೆ ಹವ್ಯಾಸವಾಗುತ್ತಿದೆ. ಕಾಳ ಸಂತೆಕೋರರಿಗೆ ಹೀಗೆ ಕ್ಷಮಾದಾನ ನೀಡಿದ ಬಿಜೆಪಿ ಸರ್ಕಾರ ಬಡವರ ಅಕ್ಕಿ, ಗೋಧಿ, ಸಕ್ಕರೆ ಬಡ ರೈತರ ಯೂರಿಯಾ ಬೆಲೆಗಳನ್ನು ಏರಿಸಿದೆ. ಕೃಷಿ, ಸಂಪರ್ಕ, ವಿದ್ಯುತ್, ಶಿಕ್ಷಣ, ಆರೋಗ್ಯ, ನೀರಾವರಿ ಇತ್ಯಾದಿ ಕ್ಷೇತ್ರಗಳ ವಿಷಯಗಳಲ್ಲಿ ಸರ್ಕಾರ ಏನೇನೂ ಮಾಡಲಾಗಿಲ್ಲ.

ಭಾರತೀಯ ರಿಝರ್ವ್ ಬ್ಯಾಂಕ್, ಐಡಿಬಿಐ, ಯುನಿಟ್ ಟ್ರಸ್ಟ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಇತರೆ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಡೈರೆಕ್ಟರ್‌ಗಳ ನೇಮಕ ಮಾಡಲಾಗಿಲ್ಲ. ಹಿಂದೆಈರುಳ್ಳಿಬಿಕ್ಕಟ್ಟು ಪರಿಹರಿಸಲಾಗಲಿಲ್ಲ.

ಬಜೆಟ್ ಪೂರ್ವದ ಉಡುಗೊರೆಗಳು

ಒಂದು ಸಾರಿ ಅವಕಾಶ ಕೊಟ್ಟು ನೋಡಿ ಎಂದು ಗೋಗರೆದು ಕೊನೆಗೂ ಅಧಿಕಾರಕ್ಕೆ ಬಂದ ಬಿಜೆಪಿ ಒಂದು ಸಾರಿ ಅಧಿಕಾರಕ್ಕೆ ಬಂದರೆ ತಾನು ಏನೇನು ಕೆಲಸ ಮಾಡಬಲ್ಲೆ ಎಂಬುದರ ಸೂಚನೆ, ಅನುಭವ ಎರಡನ್ನೂ ನೀಡಿದೆ. ಬಡವರ ಕನಿಷ್ಠ ಅವಶ್ಯಕತೆಗಳಾದ ಆಹಾರ ಪದಾರ್ಥಗಳ ಬೆಲೆ ಏರಿಸಿಯಾದ ಮೇಲೆ ಅಡುಗೆ ಅನಿಲದ ಬೆಲೆಯನ್ನು ಅದು ಏರಿಸಿದೆ. ತೀರ ಬಡವರೇನು ಅಡುಗೆ ಅನಿಲ ಉಪಯೋಗಿಸಲಾರರು, ಆದ್ದರಿಂದ ಬಡವರಿಗೇನು ಎಂದು ಯಾರಾದರೂ ಕೇಳಬಹುದು. ಆದರೆ ಹೊಟೆಲ್‌ನಲ್ಲಿ ತಿನ್ನುವವರಿಗೆ ಹಾಗೂ ಮಧ್ಯಮ ವರ್ಗದ ಜನಗಳಿಗೆ ಇದು ಹೊಡೆತವೇ.

ತನ್ನ ಮಿತ್ರ ಪಕ್ಷಗಳ ಒತ್ತಡಕ್ಕೆ ಮಣಿದು ಕೆಲವು ಪದಾರ್ಥಗಳ ಬೆಲೆ ಹೆಚ್ಚಳವನ್ನು ಅಲ್ಪ ಸ್ವಲ್ಪ ಕಡಿಮೆ ಮಾಡಿದೆ. ಪೆಟ್ರೋಲ್ ಮತ್ತು ಡಿಸೇಲ್‌ಗಳ ಮೇಲೆ ಹೆಚ್ಚುವರಿ ಸುಂಕ ಹೇರಿ ಆ ಮೂಲಕ ಹೆದ್ದಾರಿ ಯೋಜನೆಗಳಿಗೆ ಹಣ ಸಂಗ್ರಹಣೆ ಮಾಡುವ ವಿಚಾರವನ್ನು ಈ ಸರ್ಕಾರ ಹೊಂದಿದೆಯಂತೆ. ತೈಲದ ಬೆಲೆ ಹೆಚ್ಚಳವಾದರೆ ತೈಲವನ್ನು ಇಂಧನವನ್ನಾಗಿ ಉಪಯೋಗಿಸುವ ಎಲ್ಲ ಚಟುವಟಿಕೆಗಳ ಬೆಲೆ ಹೆಚ್ಚಳಕ್ಕೆ ಇಂಬು ಕೊಡುತ್ತವೆ. ಉದಾಹರಣೆಗೆ ಸಾಗಾಣಿಕೆ ಬೆಲೆ ಹೆಚ್ಚಳವಾಗುವುದರಿಂದ ಸಾಗಾಣಿಕೆಯಾಗುವ ಎಲ್ಲ ಪದಾರ್ಥಗಳ ಬೆಲೆಗಳೂ ಹೆಚ್ಚಾಗುತ್ತವೆ. ಇಂತಹ ಭಯಾನಕ ಉಡುಗೊರೆಗಳನ್ನು ನೀಡಿದ ಸರ್ಕಾರ ಸುಮ್ಮನಿಲ್ಲ. ಕೇಂದ್ರದ ಹಣಕಾಸು ಮಂತ್ರಿ ಯಶವಂತ ಸಿನ್ಹಾ ಅವರು ಬಜೆಟ್ಟಿನಲ್ಲಿ ಇನ್ನೂ ಕಠಿಣ ಕ್ರಮಗಳಿರುತ್ತವೆ ಎಂದು ಹೇಳಿದ್ದಾರೆ. ಅಂದರೆ ಇದಕ್ಕೂ ಹೆಚ್ಚು ಬೆಲೆ ಹೆಚ್ಚಳವಾಗಲಿವೆ ಎಂದರ್ಥ. ಈ ಎಲ್ಲ ಹೆಚ್ಚಳಗಳ ಉದ್ದೇಶವೊಂದೇ-ಬಡ ಜನ ಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆಯುವುದು. ಶ್ರೀಮಂತರಿಗೆ ಅವರ ಭೋಗ ಜೀವನಕ್ಕೆ ಅನುಕೂಲ ಮಾಡಿ ಕೊಡುವುದು.

ಈಗ ಸಂಪೂರ್ಣ ವಿದೇಶೀ ಬಂಡವಾಳದ ಡಿಟಿಹೆಚ್ ಸೌಲಭ್ಯ!

ವಿದೇಶಿ ಮಾಧ್ಯಮ ದೊರೆಗಳ ಒತ್ತಡ ಅಥವಾ ಕೆಲವರ ಕೈಬೆಚ್ಚಗೆ ಮಾಡಿದ್ದರಿಂದ?

ಬಿಜೆಪಿ ನೇತೃತ್ವದ ಸರಕಾರ 'ನೇರಮನೆಗೆ'(Direct to Home ಅಥವಾ ಡಿ.ಟಿ.ಹೆಚ್) ಪ್ರಸಾರ ವ್ಯವಸ್ಥೆ ಸಂಪೂರ್ಣ ವಿದೇಶೀ ಬಂಡವಾಳದೊಂದಿಗೆ ಭಾರತವನ್ನು ಪ್ರವೇಶಿಸಲು ಅವಕಾಶ ಮಾಡಕೊಡಲು ತೆರೆಯ ಮರೆಯಲ್ಲಿ ಪ್ರಯತ್ನ ನಡೆಸಿದೆ. ಇದು ಅತ್ಯಂತ ಬೇಸರದ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹಾಗೂ ಸಿಪಿಐನ ಕೇಂದ್ರ ಕಾರ್ಯದರ್ಶಿ ಮಂಡಳಿ ನೀಡಿದ ಜಂಟಿ ಹೇಳಿಕೆಯಲ್ಲಿ ಖೇದ ವ್ಯಕ್ತಪಡಿಸಿವೆ.

ಪ್ರಸಾರ ಪ್ರಾಧಿಕಾರದಂತಹ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸುವ ಮೊದಲೇ ನಮ್ಮ ದೇಶ, ರಾಷ್ಟ್ರೀಯ ಸಾಂಸ್ಕೃತಿಕ ಪರಂಪರೆ ಹಾಗೂ ಭದ್ರತೆಯ ಮೇಲೆ ಭಾರೀ ಪರಿಣಾಮ ಬೀರಲಿರುವ ಇಂತಹ ನಿರ್ಣಯವನ್ನು ಸರಕಾರ ಕೈಗೊಳ್ಳುತ್ತಿದೆ. ವಿದೇಶಿ ಮಾಧ್ಯಮ ದೊರೆಗಳ ಒತ್ತಡದಿಂದ ಅಥವಾ ಅವರು ಸರಕಾರದಲ್ಲಿರುವವರ ಕೈ ಬೆಚ್ಚಗೆ ಮಾಡಿದ್ದರಿಂದ ಈ ನಿರ್ಣಯ ಕೈಗೊಳ್ಳಲಾಗುತ್ತಿರಬಹುದು ಎಂದು ಜಂಟಿ ಹೇಳಿಕೆ ಶಂಕೆ ವ್ಯಕ್ತಪಡಿಸಿದೆ.

ಪ್ರಸಾರ ಪ್ರಾಧಿಕಾರ ಎಂಬ ಹೆಸರಲ್ಲಿ ಒಂದು ನಿಯಂತ್ರಣ ವ್ಯವಸ್ಥೆಯನ್ನು ರಚಿಸುವ ಬಗ್ಗೆ ಸಂಯುಕ್ತ ರಂಗ ಸರಕಾರ ಒಂದು ಮಸೂದೆಯನ್ನು ಮಂಡಿಸಿತ್ತು. ಅದನ್ನು ಜಂಟಿ ಸಂಸದೀಯ ಆಯ್ಕೆ ಸಮಿತಿಗೆ ವಹಿಸಲಾಗಿತ್ತು. ಕಾಂಗ್ರೆಸ್ ಮುಖಂಡ ಶರದ್ ಪವಾರ್ ನೇತೃತ್ವದ ಈ ಸಮಿತಿ ದೇಶದೆಲ್ಲೆಡೆ ಸುತ್ತಿ ಪರಿಣತರಿಂದ ಹಾಗೂ ಸಂಬಂಧಪಟ್ಟ ಎಲ್ಲರಿಂದ ಮಾಹಿತಿ ಕಲೆ ಹಾಕಿತ್ತು. ಈ ನಡುವೆ ಸಂಯುಕ್ತ ರಂಗ ಸರಕಾರ ಅಧಿಕಾರದಿಂದ ಹೊರಬಂದದ್ದರಿಂದ ಸಂಸತ್ತಿನಲ್ಲಿ ಇದನ್ನು ಪರಿಶೀಲಿಸಲಾಗಲಿಲ್ಲ. ಆದರೆ ಆ ಮಾಹಿತಿ ಸಂಸತ್ತಿಗೆ ಹಾಗೂ ಸರಕಾರಕ್ಕೆ ಈಗಲೂ ಲಭ್ಯವಿದೆ. ಇದನ್ನು ಒಂದು ಫಲಪ್ರದ ಚರ್ಚೆಗೆ ಬಳಸಲು ಸಾಧ್ಯವಿದೆ ಎಂದು ಸಿಪಿಐ(ಎಂ) - ಸಿಪಿಐ ಮುಖಂಡರು ಹೇಳಿದ್ದಾರೆ.

ಅದರ ಬದಲು ವಾರ್ತಾ ಮತ್ತು ಪ್ರಸಾರ ಇಲಾಖೆ ಅದೇಕೋ ಡಿ.ಟಿ.ಹೆಚ್ ಗೆ ಅವಕಾಶ ನೀಡುವ ತರಾತುರಿಯಲ್ಲಿದೆ ಎಂದಿರುವ ಈ ಜಂಟಿ ಹೇಳಿಕೆ ಇಲೆಕ್ಟ್ರಾನಿಕ್ ಮಾಧ್ಯಮದ ನಿಯಂತ್ರಣಕ್ಕೆ ಎಲ್ಲಾ ಅಭಿವೃದ್ಧಿಶೀಲ ದೇಶಗಳು ಅರೆ-ನ್ಯಾಯಾಂಗ ವ್ಯವಸ್ಥೆ ಹೊಂದಿವೆ ಎಂಬುದನ್ನು ಗಮನಿಸಬೇಕು ಎಂದಿವೆ. ಬ್ರಿಟನ್ನಿನಂತಹ ಮುಂದುವರೆದ ದೇಶಗಳಲ್ಲಿ ರಾಜಕೀಯ ಅಲ್ಲೋಲ ಕಲ್ಲೋಲ ಎಬ್ಬಿಸಿದ ಅಂತರ್ರಾಷ್ಟ್ರೀಯ ಮಾಧ್ಯಮ ದೊರೆ ರೂಪರ್ಟ್ ಮುರ್ಡೋಕ್ ಬಿಜೆಪಿ ನೇತೃತ್ವದ ಸರಕಾರದ ಕೈ ಹಿಸುಕುತ್ತಿರುವಂತೆ ಕಾಣುತ್ತಿದ್ದೆ, ಅದಕ್ಕೆ ವಾರ್ತಾ-ಪ್ರಸಾರ ಇಲಾಖೆ ತಲೆಬಾಗುತ್ತಿದೆ. ಸಂಸತ್ತು ಮುಂದಿನ ತಿಂಗಳು ಸೇರಲಿದೆ. ಅದರಲ್ಲಿ ಈ ವಿಷಯವನ್ನು ಆಮೂಲಾಗ್ರವಾಗಿ ಚರ್ಚಿಸಬೇಕು ಎಂದಿರುವ ಸಿಪಿಐ(ಎಂ) ಹಾಗೂ ಸಿಪಿಐ ಅದುವರೆಗೆ ಈ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳಬಾರದು ಎಂದಿದೆ. ಇಂತಹ ನಿರ್ಣಯ ಕೈಗೊಳ್ಳುವುದು ದೇಶಕ್ಕೆ ಬಗೆಯುವ ವಿಶ್ವಾಸಘಾತ ಮಾತ್ರವಲ್ಲ, ಈ ಸರಕಾರ ತನ್ನ ಪವಿತ್ರಗ್ರಂಥ ಎನ್ನುವಂತೆ ಮಾತನಾಡುವ 'ರಾಷ್ಟ್ರೀಯ ಅಜೆಂಡಾ' ವನ್ನು ಕೂಡಾ ಈ ಮೂಲಕ ಅದು ಉಲ್ಲಂಘಿಸಿದೆ. ಅಲ್ಲಿ ವಿದೇಶಿ ಬಂಡವಾಳವನ್ನು 20% ವನ್ನು ಮಿತಿಗೊಳಿಸಬೇಕು ಎಂದು ಅವರು ತಾವೇ ಹಾಕಿಕೊಂಡಿರುವ ಮಿತಿಯನ್ನು ತಪ್ಪಿಸಲು ಹೀಗೆ ಮಾಡಿರಬೇಕು ಎಂದಿರುವ ಸಿಪಿಐ(ಎಂ)-ಸಿಪಿಐ ಹೇಳಿಕೆ ಇಂತಹ ಅವಸರದ ನಿರ್ಧಾರಕ್ಕೆ ಬರದೆ ದೇಶದ ಜನಗಳನ್ನೂ, ಸಂಸತ್ತನ್ನೂ ವಿಶ್ವಾಸಕ್ಕೆ ತಗೊಳ್ಳಬೇಕು ಎಂದು ಆಗ್ರಹಪಡಿಸಿದೆ.

ಒಳಗಿನವರ ಸರ್ಟಿಫಿಕೇಟ್

ಬಿಜೆಪಿ ಎಲ್ಲರೂ ತನ್ನ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ. ಆದ್ದರಿಂದಲೇ ತನಗೆ ಕೆಟ್ಟ ಹೆಸರು ಬಂದಿದೆ, ಸರ್ಕಾರ ಅತ್ಯುತ್ತಮ ಕೆಲಸ ಮಾಡಿದ್ದರೂ ಈ ಅಪಪ್ರಚಾರದಿಂದಲೇ ಕೆಟ್ಟ ಹೆಸರು ಬಂದಿರುವುದು ಎಂದು ಹೇಳಿಕೊಳ್ಳುತ್ತಿದೆ. ಆದರೆ ಒಳಗಿನವರೆಲ್ಲ ಬಿಜೆಪಿಯ ಕೆಲಸಗಳಿಂದ ಸಂತುಷ್ಟರಾಗಿದ್ದಾರೆಯೇ?

ಹಣಕಾಸು ಮಂತ್ರಿಗಳಿಗೆ ಮೊಹನ್ ಗುರುಸ್ವಾಮಿ ಎಂಬ ಸಲಹೆಗಾರರು. ಈ ಸಲಹೆಗಾರ ಮೊನ್ನೆ ತಮ್ಮ ರಾಜಿನಾಮೆ ನೀಡಿದರು. ಸರ್ಕಾರ ಚುನಾವಣೆ ಸಮಯದಲ್ಲಿ ನೀಡಿದ ಭರವಸೆಗಳನ್ನೊಂದೂ ಈಡೇರಿಸಲಾಗಿಲ್ಲವಾದ್ದರಿಂದ ಅವರು ಇಂತಹ ಕ್ರಮ ಕೈಗೊಂಡಿದ್ದಾರಂತೆ. ಅವರ ಪ್ರಕಾರ ಹಣಕಾಸು ಮಂತ್ರಿ ಮತ್ತು ಸಲಹೆಗಾರರಿಬ್ಬರದೂ ಒಂದೇ ದೃಷ್ಟಿಕೋನವಿದ್ದರೂ ಹಲವು ವಿಷಯಗಳಲ್ಲಿ ಸರ್ಕಾರ ಕೆಲಸ ಮಾಡುವುದು ಸಾಧ್ಯವಾಗಿಲ್ಲ- ಎನ್ರಾನ್, ಜಿ.ಇ ಕ್ಯಾಪ್ಸ್, ಬಂಡವಾಳ ಮಾರುಕಟ್ಟೆ ಸುಧಾರಣೆ, ಮಾರುತಿ ಸುಝುಕಿ ಪ್ರಕರಣ ಬ್ಯಾಟ್ ಐಟಿಸಿ ಪ್ರಕರಣ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟ.

ಬಡವರನ್ನು ದಾರಿದ್ರ್ಯದ ದವಡೆಗೆ ತಳ್ಳುತ್ತಿರುವ ಬಿಜೆಪಿ ಸರಕಾರ

ಕೇಂದ್ರದ ಬಿಜೆಪಿ ಸರಕಾರವು ಪಡಿತರ ಅಕ್ಕಿ, ಗೋಧಿ, ಸಕ್ಕರೆ ಹಾಗೂ ಅಡುಗೆ ಅನಿಲದ ಬೆಲೆಗಳನ್ನು ವಿಪರೀತವಾಗಿ ಏರಿಸಿ ಮುಂದಿನ ಮುಂಗಡ ಪತ್ರದಲ್ಲಿ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳುವ ಸೂಚನೆ ನೀಡುವ ಮೂಲಕ ದೇಶದ ಕಾರ್ಮಿಕರನ್ನೂ ಬಡ ಜನ ಸಾಮಾನ್ಯರನ್ನೂ ದಾರಿದ್ರ್ಯದ ದವಡೆಗೆ ತಳ್ಳುತ್ತಿದೆ ಎಂದು ಸಿ.ಐ.ಟಿ.ಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಮಾಧವ ಅವರು ಹೇಳಿದ್ದಾರೆ. ಸರಕಾರವು ತನ್ನ ಬೆಂಬಲದ ನೆಲೆಯಾದ ದೊಡ್ಡ ವ್ಯಾಪಾರಿ ವರ್ಗಕ್ಕೆ ಸರ್ವರೀತಿಯ ಲಾಭ ದೊರಕುವಂತಹ ನೀತಿಗಳನ್ನೇ ಕಳೆದ ಹತ್ತು ತಿಂಗಳುಗಳಿಂದಲೂ ಅನುಸರಿಸುತ್ತಿದ್ದು ಜೀವನಾವಶ್ಯಕ ವಸ್ತುಗಳ ಅಭೂತ ಪೂರ್ವ ಬೆಲೆ ಏರಿಕೆಯು ಸರಕಾರ ಯಾರಿಗಾಗಿ ಆಡಳಿತ ನಡೆಸುತ್ತಿದೆ ಎಂಬುದನ್ನು ತೋರಿಸುತ್ತದೆ ಎಂದು ಅವರು ಹೇಳಿದರು. ಸಿಐಟಿಯು ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಕರೆಯಂತೆ ತಾ॥12.2.99 ರಂದು ಮಂಗಳೂರಿನ ನೆಹರೂ ಮೈದಾನದಲ್ಲಿ ಜರುಗಿದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಐ.ಎಂ.ಎಫ್. ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಯ ಒತ್ತಡಗಳಿಗೆ ಶರಣಾಗಿ ವಿಮಾ ಪ್ರಾಧಿಕಾರ ಮಸೂದೆ ಮತ್ತು ಪೇಟೆಂಟ್ ತಿದ್ದುಪಡಿ ಮಸೂದೆಗಳನ್ನು ಜಾರಿಗೊಳಿಸುವ ಮೂಲಕ ದೇಶದ ಸಾರ್ವಭೌಮತೆಯನ್ನೇ ಬಲಿಕೊಡುವ ಹುನ್ನಾರ ನಡೆಯುತ್ತಿದೆ ಎಂದು ಅವರು ಟೀಕಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳಲ್ಲೊಬ್ಬರಾದ ಕೆ. ವಸಂತ ಆಚಾರಿಯವರು ಮಾತನಾಡುತ್ತಾ ಬಿ.ಜೆ.ಪಿ. ಸರಕಾರವು ಕೋಮುವಾದಿ ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಜನತೆಯ ಐಕ್ಯತೆಯನ್ನು ಒಡೆಯುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಕೆ.ಆರ್ ಶ್ರೀಯಾನ್ ಅವರು ಮಾತನಾಡಿ ಬಿಜೆಪಿ ಸರಕಾರವು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಬಾಗಿಲು ತೆರೆದಿಟ್ಟು ನಮ್ಮ ದೇಶದ ಕೈಗಾರಿಕೆಗಳನ್ನೂ ಅವುಗಳಲ್ಲಿ ದುಡಿಯುವ ಕಾರ್ಮಿಕರನ್ನೂ ಅಪಾಯಕ್ಕೆ ತಳ್ಳಿದೆ ಎಂದು ಹೇಳಿದರು. ಪೇಟೆಂಟ್ ತಿದ್ದುಪಡಿ ಮಸೂದೆ ಮತ್ತು ವಿಮಾ ಮಸೂದೆಗೆ ಬೆಂಬಲ ನೀಡುವ ಕಾಂಗ್ರೆಸ್ ಪಕ್ಷವು ತನ್ನ ಈ ಹಿಂದಿನ ಸೋಲುಗಳಿಂದ ಪಾಠ ಕಲಿತಿಲ್ಲವೆಂದು ಹೇಳಿದ ಅವರು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲದೊಂದಿಗೆ ಕಾರ್ಮಿಕ ವರ್ಗವು ಸರಕಾರದ ವಿನಾಶಕಾರಿ ನೀತಿಗಳ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳಲ್ಲೊಬ್ಬರಾದ ಸುಕುಮಾರ್ ಸ್ವಾಗತಿಸಿದರು. ಇನ್ನೊಬ್ಬ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟರು ವಂದಿಸಿದರು.



ಮಾರ್ಚ್ 23 ರಂದು ದೇಶವ್ಯಾಪಿ ಮತಪ್ರದರ್ಶನ

ವಿನಾಶಕಾರಿ ಆರ್ಥಿಕ ನೀತಿಗಳು, ಕೋಮುವಾದದ ವಿರುದ್ಧ ಪ್ರಚಾರ-ಪ್ರಕ್ಷೋಭೆಗಳಿಗೆ ರಾಜ್ಯ ಸರಕಾರಿ ನೌಕರರ ಕರೆ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ವಿಪರೀತ ಖಾಸಗೀಕರಣದ ವಿನಾಶಕಾರಿ ಆರ್ಥಿಕ ನೀತಿಗಳು, ಬೇಕಾಬಿಟ್ಟಿ ಕಂಪ್ಯೂಟರೀಕರಣ, ರೋಗಗ್ರಸ್ತ ಘಟಕಗಳ ಮುಚ್ಚಿಕೆ, ವಿಪರೀತ ಬೆಲೆಯೇರಿಕೆ ಹಾಗೂ ನಿರುದ್ಯೋಗದಲ್ಲಿ ಭಾರೀ ಏರಿಕೆಯ ವಿರುದ್ಧ ತಮ್ಮ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ರಾಜ್ಯ ಸರ್ಕಾರಿ ನೌಕರರಿಗೆ ಕರೆ ನೀಡಿದೆ. ಜನವರಿ 28-29 ರಂದು ನಾಗಪುರದಲ್ಲಿ ಸಮಿತಿಯ ಸಭೆ ನಡೆಯಿತು.

ವಿಶ್ವಬ್ಯಾಂಕ್, ಐಎಂಎಫ್, ಡಬ್ಲ್ಯುಟಿಓ ನ ಶರತ್ತುಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡು ದೇಶದ ಸಾರ್ವಭೌಮತೆಯನ್ನು ನಾಶ ಮಾಡಲಾಗುತ್ತಿದೆ, ಪೇಟೆಂಟ್ ತಿದ್ದುಪಡಿ ಹಾಗೂ ವಿಮಾ ಪ್ರಾಧಿಕಾರ ಮಸೂದೆಯ ಭಾರತದ ಆರ್ಥಿಕ ಪರಾವಲಂಬನೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ. ಅದರ ಜೊತೆಗೆ ದೇಶದ ಐಕ್ಯತೆ ಹಾಗೂ ಜಾತ್ಯಾತೀತ ಹಂದರವನ್ನು ಹಾಳುಗೆಡಹುವ ರೀತಿಯಲ್ಲಿ ಹಿಂದುತ್ವದ ಹೆಸರಿನಲ್ಲಿ ಸಮಾಜದ ಕೋಮುವಾದೀಕರಣವಾಗುತ್ತಿದೆ. ಇವೆಲ್ಲದರ ವಿರುದ್ಧ ಸರ್ಕಾರಿ ನೌಕರರು ದೇಶಾದ್ಯಂತ ಐಕ್ಯ ಆಂದೋಲನ ಕಟ್ಟಬೇಕು ಎಂದು ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಕರೆ ನೀಡಿದೆ.

ಈ ಅಪಾಯಕಾರಿ ಆರ್ಥಿಕ ನೀತಿಗಳು, ಕೋಮುವಾದಿ ಶಕ್ತಿಗಳ ವಿರುದ್ಧ ಮಾರ್ಚ್ ತಿಂಗಳಲ್ಲಿ ಸಾಮೂಹಿಕ ಪ್ರಚಾರ-ಪ್ರಕ್ಷೋಭೆ ನಡೆಸಬೇಕು, ಮಾರ್ಚ್ 23 ರಂದು ದೇಶಾದ್ಯಂತ ರ್‍ಯಾಲಿಗಳನ್ನು, ಮತಪ್ರದರ್ಶನಗಳನ್ನು ನಡೆಸಬೇಕು ಎಂದು ಕರೆ ನೀಡಿದೆ.

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಏಪ್ರಿಲ್ 1999 ರಲ್ಲಿ ನಡೆಸುವ 'ಸಂಸತ್ ಚಲೋ' ಗೆ ಎಲ್ಲಾ ರಾಜ್ಯಗಳಿಂದ ಗರಿಷ್ಠ ಸಂಖ್ಯೆಯಲ್ಲಿ ಸರ್ಕಾರಿ ನೌಕರರು ಭಾಗವಹಿಸುವಂತಾಗಬೇಕು ಎಂದೂ ಅಖಿಲ ಭಾರತ ರಾಜ್ಯ ಸರಕಾರೀ ನೌಕರರ ಒಕ್ಕೂಟದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಹೇಳಿದೆ.

(ಐಎನ್ಎಸ್)

ಫೆಬ್ರವರಿ9: ಬೆಲೆ ಏರಿಕೆ ವಿರುದ್ಧ ರಾಜ್ಯಾದ್ಯಂತ ಎಡಪಕ್ಷಗಳ ತೀವ್ರ ಪ್ರತಿಭಟನೆ

ಕೇಂದ್ರದ ಬಿಜೆಪಿ ನೇತೃತ್ವದ ಸಮ್ಮಿಶ್ರ ಸರಕಾರವು ಇತ್ತೀಚೆಗೆ ಬಡವರಿಗೆ ಬಾಧಿಸುವ ಪಡಿತರ ಅಕ್ಕಿ, ಗೋಧಿ, ಸಕ್ಕರೆ ಬೆಲೆ, ರೈತರ ಧೈರ್ಯ ಕುಂದಿಸುವಂತೆ ಯೂರಿಯ ಬೆಲೆ ಹಾಗೂ ಮಧ್ಯಮ ವರ್ಗದವರಿಗೆ ದಿಕ್ಕೆಡಿಸುವಂತೆ ಅಡಿಗೆ ಅನಿಲದ ಬೆಲೆ ಏರಿಸಿರುವುದನ್ನು ವಿರೋಧಿಸಿ ದೇಶದ ಎಡಪಕ್ಷಗಳ ಕರೆಯ ಮೇರೆಗೆ ಫೆಬ್ರವರಿ 9 ರಂದು ರಾಜ್ಯದ ವಿವಿಧೆಡೆಗಳಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮಗಳ ವರದಿ.



ಬೆಂಗಳೂರಿನಲ್ಲಿ ರೈಲುತಡೆ

ಸಿಪಿಐ(ಎಂ),ಸಿಪಿಐ ನ ನೂರಾರು ಕಾರ್ಯಕರ್ತರು ಚೆನ್ನೈಗೆ ತೆರಳಬೇಕಾಗಿದ್ದ ಬೃಂದಾವನ್ ಎಕ್ಸ್‌ಪ್ರೆಸ್ ರೈಲನ್ನು 45 ನಿಮಿಷಗಳಿಗೂ ಹೆಚ್ಚು ಕಾಲ ನಗರ ರೈಲು ನಿಲ್ದಾಣದಲ್ಲಿ ತಡೆದರು.

ನೆರೆದ ಕಾರ್ಯಕತರನ್ನುದ್ದೇಶಿಸಿ ಸಿಪಿಐ(ಎಂ) ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಮಾತನಾಡಿ ಕೇಂದ್ರದ ಬಿಜೆಪಿಯ ಸಮ್ಮಿಶ್ರ ಸರ್ಕಾರ ಮುಂಗಡ ಪತ್ರ ಮಂಡನೆಗೆ ಮೊದಲೇ ಬೆಲೆ ಏರಿಕೆಯ ಮೂಲಕ ಬಡತನ ರೇಖೆಗಿಂತ ಕೆಳಗಿರುವ ಬಡ ಸಾಮಾನ್ಯರ ತಲೆ ದಂಡ ಕೇಳಿದೆ. ಮುಂದಿನಮುಂಗಡ ಪತ್ರ ಕಠಿಣವಾಗಿರುತ್ತದೆ ಎಂದು ಹೇಳಿರುವ ಹಣಕಾಸು ಸಚಿವ ಯಶವಂತ ಸಿನ್ಹಾರ ಹೇಳಿಕೆ ದುಡಿಯುವ ಜನತೆಯ ಜಂಘಾಬಲವನ್ನಡಗಿಸಿದೆ ಎಂದರು. ಮುಂದಿನ ದಿನಗಳಲ್ಲಿ ಬಿಜೆಪಿಯು ಈ ಅಮಾನವೀಯ ನೀತಿ ವಿರುದ್ಧ ಪ್ರಬಲ ಹೋರಾಟ ನಡೆಸುವಂತೆ ಕರೆ ನೀಡಿದರು.

ಸಿಪಿಐ ಕಾರ್ಯದರ್ಶಿ ಎಂ.ಸಿ. ವೆಂಕಟರಾಮ್ ಮಾತನಾಡಿ, ನಿರಂತರವಾಗಿ ಬೆಲೆ ಏರಿಸುತ್ತಿರುವ ಬಿಜೆಪಿ ಸರ್ಕಾರ, ಶ್ರೀಮಂತ ರಾಷ್ಟ್ರಗಳ ದಾಸ್ತಾನುಗಳಲ್ಲಿದ್ದ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಮೂಲಕ ದೇಶದ ರೈತರನ್ನು ನರಕಕ್ಕೆ ತಳ್ಳುತ್ತಿದೆ. ಆಹಾರ ಧಾನ್ಯ, ಪೆಟ್ರೋಲ್, ವಿದ್ಯುತ್, ಕೃಷಿರಂಗದ ಮೇಲಿನ ರಿಯಾಯಿತಿ ಕಡಿತಗೊಳಿಸಿ ದೇಶವನ್ನು ಆತಂಕದೆಡೆ ನೂಕುತ್ತಿದೆ ಎಂದರು.

ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಕೊಲ್ಲುವ ಈ ಸಂಚು ಬೆಲೆ ಏರಿಕೆ ಮುಖಾಂತರ ನಡೆಯುತ್ತಿದೆ ಎಂದ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಅಕ್ಕಿ ಬೆಲೆ, ಸಕ್ಕರೆ ಬೆಲೆ, ಗೋಧಿ ಬೆಲೆ ಹೆಚ್ಚಾದರೆ ಜೋಳದ ಬೆಲೆ ಏರಿಕೆಗೆ ಕಾರಣವೇನು ಎಂದು ಸರ್ಕಾರವನ್ನು ಪ್ರಶ್ನಿಸಿದರು.

ಸಿಪಿಐ ನ ಜಿಲ್ಲಾ ಕಾರ್ಯದರ್ಶಿ ಜಯತೀರ್ಥರು ಬೆಲೆ ಏರಿಕೆಯನ್ನು ಖಂಡಿಸಿದರು. ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಪಿ.ಜಗನ್ನಾಥ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರೆ, ಕೆ.ಪ್ರಕಾಶ್ ವಂದನೆ ಸಲ್ಲಿಸಿದರು. ರೈಲು ತಡೆಯಲ್ಲಿ ಮಹಿಳೆಯರು ಸೇರಿದಂತೆ 250 ಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮಂಗಳೂರು : ಸಿಪಿಐ(ಎಂ) ಮತ್ತು ಸಿಪಿಐ ದ.ಕನ್ನಡ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ನಗರ ಪ್ರಮುಖ ಬೀದಿಗಳಲ್ಲಿ ನೂರಾರು ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿ ನಂತರ ಬಹಿರಂಗ ಸಭೆ ನಡೆಸಿದರು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ಮಾತನಾಡಿದರು. ಕೇಂದ್ರ ಸರ್ಕಾರವು ಐಎಂಎಫ್ ಹಾಗೂ ವಿಶ್ವಬ್ಯಾಂಕ್ ಒತ್ತಡಗಳಿಗೆ ಮಣಿದು ಈ ಬೆಲೆ ಏರಿಕೆ ಕ್ರಮಕೈಗೊಂಡಿದೆ. ಸಮರ್ಥ ಸರ್ಕಾರ ನೀಡುವ ಭರವಸೆ ಮೇರೆಗೆ ಅಧಿಕಾರವನ್ನೇರಿದ ಬಿಜೆಪಿ ಬೆಲೆಗಳು ಸೇರಿದಂತೆ ಎಲ್ಲಾ ವಿಭಾಗಗಳಲ್ಲಿ ಅಸಮರ್ಥವಾಗಿದ್ದು ಕೂಡಲೇ ಅಧಿಕಾರದಿಂದ ನಿರ್ಗಮಿಸಬೇಕೆಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ.ಕೆ.ಕೃಷ್ಣಪ್ಪ ಬೆಲೆ ಏರಿಕೆಯನ್ನು ಖಂಡಿಸಿದರು. ಜೆ.ಬಾಲಕೃಷ್ಣ ಸ್ವಾಗತಕೋರಿ ಬೋಜ ಕೋಟ್ಯಾನ್ ವಂದಿಸಿದರು.

ಕುಂದಾಪುರ : ನಗರದ ಅಂಚೆ ಕಚೇರಿ ಎದುರು ಸಿಪಿಐ(ಎಂ)ನ ಕಾರ್ಯಕರ್ತರು ಹಾಗೂ ಕಾರ್ಮಿಕರು ಸೇರಿದಂತೆ ನೂರಾರು ಮಂದಿ ಪ್ರತಿಭಟನಾ ಧರಣಿ ನಡೆಸಿದರು.

ಇದೆ ಸಂದರ್ಭದಲ್ಲಿ ತಾಲ್ಲೂಕು ಕಾರ್ಯದರ್ಶಿ ಕೆ.ಶಂಕರ್, ಅಬ್ರಹಂ ಕರ್ಕಡ, ನಗರ ಸಭೆ ಅಧ್ಯಕ್ಷ ವಿ.ನರಸಿಂಹ ಮೊದಲಾದವರು ಬೆಲೆ ಏರಿಕೆ ಖಂಡಿಸಿ ಕೂಡಲೇ ಬೆಲೆ ಏರಿಕೆ ಕೈ ಬಿಡುವಂತೆ ಒತ್ತಾಯಿಸಿದರು.

ನಂತರ ಅಂಚೆಕಚೇರಿ ಮುಖ್ಯಸ್ತರ ಮೂಲಕ ಬೆಲೆ ಇಳಿಸುವಂತೆ ಪ್ರಧಾನಿಗಳಿಗೆ ಮನವಿ ಸಲ್ಲಿಸಿದರು. ಸಿ.ನಾರಾಯಣ, ಹೆಚ್.ನರಸಿಂಹ ಮತ್ತು ಮಹಾಬಲ ಒಡೇರ ಹೋಬಳಿ ಮುಂತಾದವರು ಮುಂಚೂಣಿಯಲ್ಲಿದ್ದರು.

ಬಂಟ್ವಾಳ : ಸಿಪಿಐ(ಎಂ) ಮತ್ತು ಸಿಪಿಐನ ತಾಲ್ಲೂಕು ಸಮಿತಿಗಳು ಜಂಟಿಯಾಗಿ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಸಿಪಿಐ(ಎಂ)ನ ಕಾರ್ಯದರ್ಶಿ ಬಿ.ವಾಸುಗಟ್ಟಿ, ಸಿಪಿಐನ ಪಿ.ಸಂಜೀವರುಗಳು ಬೆಲೆ ಏರಿಸಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಪ್ರತಿಭಟನಾ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ನ ಬಿ.ನಾರಾಯಣ, ಎ.ವಿ.ರಮೇಶ, ಶೀನ ಬಂಗೇಜ, ಎ.ರಾಮಣ್ಣ, ಸಿಪಿಐನ ಬಿ.ವಿಶ್ವನಾಥ ನಾಯಕ್, ಡಿ.ಹೆನ್ರಿ ಲೋಬೋ, ಬಿ.ಶೇಖರ, ಬಿ.ಭಾಸ್ಕರ, ಎ.ಈಶ್ವರ, ಜಯಂತ್ ಸೇರಿದಂತೆ ನೂರಾರು ನಾಗರೀಕರು ಭಾಗವಹಿಸಿದ್ದರು. ಕೊನೆಯಲ್ಲಿ ತಹಶೀಲ್ದಾರರ ಮೂಲಕ ಪ್ರಧಾನ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಹೊನ್ನಾವರ: ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಸಿಪಿಐ(ಎಂ) ತಾಲ್ಲೂಕು ಸಮಿತಿ ನೇತೃತ್ವದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಪ್ರಮುಖ ಬೀದಿಗಳಲ್ಲಿ ಬೆಲೆಏರಿಕೆ ವಿರುದ್ಧ ಘೋಷಣೆಗಳ ಮೂಲಕ ಭಾರಿ ಮೆರವಣಿಗೆ ನಡೆಸಿದರು.

ತಾಲ್ಲೂಕು ಕಚೇರಿ ಎದುರು ನಡೆದ ಪುಟ 7 ನೋಡಿ

ಗುಲ್ಬರ್ಗಾ ಯಶಸ್ವಿ ಬಂದ್ ಜಿಲ್ಲೆಯೆಲ್ಲಡೆ ಪ್ರತಿಭಟನೆ

ಗುಲ್ಬರ್ಗಾ ನಗರದಲ್ಲಿ ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ)ನ ಬಂದ್ ಕರೆಗೆ ನಾಗರೀಕರು ಸ್ಪಂದಿಸಿ ಅತ್ಯಂತ ಯಶಸ್ವಿಗೊಳಿಸಿದ್ದಾರೆ. ಸಾವಿರಾರು ಜನರ ಬೃಹತ್ ಮೆರವಣಿಗೆ ನಡೆಯಿತ್ತು. ಅದಕ್ಕೆ ಮೊದಲು ನಗರದ ವಿವಿಧೆಡೆ ನೂರಾರು ನಾಗರೀಕರು ಭಾಗವಹಿಸಿದ್ದ 7 ಸಾರ್ವಜನಿಕ ಸಭೆಗಳು ನಡೆದವು. ಸೈಷನ್ ಬಜಾರ್ ಅಂಚೆ ಕಛೇರಿ ಮುಂದೆ ಇದೇ ಸಂದರ್ಭದಲ್ಲಿ ಧರಣಿ ನಡೆಸಲಾಯಿತು. ಧರಣಿಕಾರರನ್ನು ದ್ದೇಶಿಸಿ ಸಿಪಿಐ(ಎಂ) ಜಿಲ್ಲಾಕಾರ್ಯದರ್ಶಿ ಮಾರುತಿ ಮಾನ್ಪಡೆ, ಕೆ. ನೀಲಾ ಚಂದು ಜಾದವ ಮೊದಲಾದವರು ಮಾತನಾಡಿದರು.

ಜಿಲ್ಲೆಯ ಮುಖ್ಯ ಆಹಾರ ದಾನ್ಯ ಜೋಳದ ಬೆಲೆ ಕೆ.ಜಿ.ಗೆ 17-20 ರೂ ಆಗಿದ್ದು ಬಡ ಜನತೆಯನ್ನು ಬಾಧಿಸುತ್ತಿರುವುದರ ಬಗ್ಗೆ ಆಕ್ರೋಶ ಗೊಂಡಿರುವ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಆಳಂದದಲ್ಲಿ 500 ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡು ಮೆರವಣಿಗೆ ಮುಖಾಂತರ ಮನವಿ ಸಲ್ಲಿಸಿದ್ದಾರೆ. ಸುರಪುರ ತಾಲೂಕಿನ ಕೃಷ್ಣರಾಜ ಪುರದಲ್ಲಿ ಡಿವೈಎಫ್ಐ ನೇತೃತ್ವದಲ್ಲಿ ರಸ್ತಾರೋಕೊ ಕಾರ್ಯಕ್ರಮ ನಡೆಯಿತು. ಕಮಲಾಪುರ ವಲಯದಲ್ಲಿ ನೂರಾರು ರೈತ ಕೂಲಿಕಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅಫಜಪೂರ 700 ಮಹಿಳೆಯರು ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆ-ಬಿಜೆಪಿ ನೆಲೆಯಾದ ಹುಮನಾಬಾದ್‌ನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಜನವಾದಿ ಮಹಿಳಾ ಸಂಘಟನೆ ಜಂಟಿಯಾಗಿ ನಡೆಸಿದ ಪ್ರತಿಭಟನೆಯಲ್ಲಿ ಜನರ ವ್ಯಾಪಕ ಬೆಂಬಲ ವ್ಯಕ್ತಗೊಂಡಿತು.

ಬಿಪಿಎಲ್ ಕಾರ್ಮಿಕರ ಮುಂದುವರೆದ ಹೋರಾಟ

ಮಹಿಳಾ ಕಾರ್ಮಿಕರನ್ನು ಜೈಲಿಗಟ್ಟಿದ ಅಮಾನವೀಯ ಸರ್ಕಾರ

ಕಾನೂನುಬಾಹಿರವಾಗಿ ಹೊಸದಾಗಿ ನೇಮಿಸಿ ಕೊಂಡಿರುವ 900 ದಿನಗೂಲಿ ನೌಕರರನ್ನು ಪೊಲೀಸ್ ಸರ್ಪಗಾವಲಿನಲ್ಲಿ ಕಾರ್ಖಾನೆಗೆ ಸಾಗಿಸುವುದು, ಕಾರ್ಮಿಕರೊಡನೆ ಸಾಮೂಹಿಕ ಮಾತುಕತೆ ಗೊಪ್ಪದ ಬಿಪಿಎಲ್ ಮಾಲೀಕನನ್ನು ಬಂಧಿಸಿ ಜೈಲಿನಲ್ಲಿಡಬೇಕಾದ ಸಮಾಜವಾದಿ ಜೆ.ಹೆಚ್ ಪಟೇಲ್‌ರ ರಾಜ್ಯ ಸರ್ಕಾರ, 30 ವರ್ಷಗಳ ನಿತ್ಯ ಶೋಷಣೆಗೆ ಬೆಸತ್ತು, ತಮ್ಮ ಹಕ್ಕೊತ್ತಾಯಿಸಿದ ಮಹಿಳಾ ಕಾರ್ಮಿಕರು ಸೇರಿದಂತೆ 633 ಮಂದಿ ಬಿಪಿಎಲ್ ಕಾರ್ಮಿಕರನ್ನು ಉಟ್ಟು ಉಡುಗೆಯಲ್ಲೇ ಜೈಲಿಗಟ್ಟಿ ತನ್ನ ಅಮಾನವೀಯತೆಯನ್ನು ಮೆರೆದಿದೆ.

ಬಿಪಿಎಲ್ ಆಡಳಿತ ಮಂಡಳಿಯು ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳನ್ನು, ಹಾಗೂ ಪೋಲೀಸ್ ಇಲಾಖೆಯನ್ನು ತಮ್ಮ ಕೈ ಬೊಂಬೆಯಾಗಿ ಪರಿವರ್ತಿಸಿ ಗೊಂಡಿರುವ ಅನುಮಾನ ಕಾರ್ಮಿಕರಲ್ಲಿ ಮೂಡತೊಡಗಿದೆ.

ಬೆಂಗಳೂರು ಪೋಲಿಸ್ ಬಿಪಿಎಲ್ ಕಾರ್ಮಿಕರಿಗೆ ಗುಂಡೊಡೆಯುವುದನ್ನು ಮೀಸಲಿಸಿ ಕೊಂಡು ಆಡಳಿತ ವರ್ಗದ ಎಲ್ಲಾ ಕಾನೂನು ಬಾಹಿರ ಚಟುವಟಿಕೆಗೆ ಸಹಕರಿಸಿ ಕಾನೂನು ಭಂಜಕರಾಗಿ ವರ್ತಿಸುವುದನ್ನು ಕಾರ್ಮಿಕ ವರ್ಗ ಉಗ್ರವಾಗಿ ಖಂಡಿಸಿದೆ.

ಕೆ.ಆರ್.ಪುರದ ಸರ್ಕಲ್ ಇನ್ಸ್‌ಪೆಕ್ಟರ್ ಕಾರ್ಖಾನೆ ಒಳಹೋಗಿ ದಿನಗೂಲಿ ಕಾರ್ಮಿಕರನ್ನು ಕೆಲಸಕ್ಕೆ ಬರುವಂತೆ ಒತ್ತಾಯಿಸುವುದು, ಧರಣಿ ನಿರತ ಕಾರ್ಮಿಕ ಮುಖಂಡರನ್ನು ಠಾಣೆಗೆ ಎಳೆದೊಯ್ದು ವಿನಾಕಾರಣ ಹಿಂಸುತ್ತಿರುವುದು, ರಸ್ತೆ ಬದಿ ಧರಣಿ ಕುಳಿತರೆ ಕೇಸು ದಾಖಲಿಸುವುದು ಒಂದೆಡೆಯಾದರೆ, ಧರಣಿ ಮುಗಿಸಿ ರಾತ್ರಿ ಮನೆ ಸೇರುವ ಆತುರದಲ್ಲಿರುವ ಮಹಿಳಾ ಕಾರ್ಮಿಕರನ್ನು ದಾರಿಯಲ್ಲಿ ಅಡ್ಡಗಟ್ಟಿ ಆಡಳಿತ ವರ್ಗದ ಗೂಂಡಾಗಳು ಕೆಲಸ ಬಿಡುವಂತೆ ಒತ್ತಾಯಿಸುವುದು, ಕೊಲೆ ಬೆದರಿಕೆ ಹಾಕುವುದು ನಿರಂತರವಾಗಿ ಮುಂದುವರಿದಿದೆ.



ಹೋರಾಟದ ಅಲೆಯಲ್ಲಿರುವ ಬಿಪಿಎಲ್ ಕಾರ್ಮಿಕರು ಅದರಲ್ಲಿಯೂ ಮಹಿಳಾ ಕಾರ್ಮಿಕರು ತಮ್ಮ ಭಂಡಮಾಲಿಕರ ದುರ್ನಡತೆಯ ವಿರುದ್ಧ ಸಿಡಿದೆದ್ದು ತಮ್ಮ ಪೋಷಕರಿಗೂ ತಿಳಿಸದೆ ದೂರದ ಗುಲ್ಬರ್ಗ, ಬಳ್ಳಾರಿ, ಧಾರವಾಡ ಹಾಗೂ ಬಳ್ಳಾರಿ ಜೈಲಿನ ಕಂಬಿ ಹಿಂದೆ ಧೈರ್ಯ ಗೆಡದೆ ಹೋರಾಟದ ಹೊಸಪರ್ವ ಕಟ್ಟುವಲ್ಲಿ ಯಶಸ್ವಿಯಾಗಿದ್ದಾರೆ.

ಪೋಷಕರ ಸಮಾವೇಶ: ಮೆರವಣಿಗೆ

ತಮ್ಮ ಮಕ್ಕಳು ಜೈಲಿಗೆ ಹೋದ ಸುದ್ದಿ ಕೇಳಿದ ಪೋಷಕರು ಮೊದಮೊದಲು ಆತಂಕಗೊಂದಲಕ್ಕೊಳಗಾದರೂ, ಫೆಬ್ರವರಿ 5 ರಂದು ಎನ್.ಜಿ.ಓ. ಹಾಲ್‌ನಲ್ಲಿ ನಡೆದ ಪೋಷಕರ ಸಮಾವೇಶದಲ್ಲಿ ಕಳೆದ ಮೂರು ತಿಂಗಳ ಕೆಚ್ಚೆದೆಯ ಹೋರಾಟ, ಶೋಷಣೆ ಬಿಡಲೊಪ್ಪದ ಮಾಲಿಕ, ಪೋಲಿಸರ ಅಮಾನವಿಯತೆ ಹಾಗೂ ಸರ್ಕಾರದ ನಿಷ್ಕ್ರಿಯತೆ ಬಗ್ಗೆ ಸವಿವರವಾಗಿ ಸಂಘದ ಮುಖಂಡರು ತಿಳಿಸಿದ ನಂತರ ತಮ್ಮ ಮಕ್ಕಳ ಹೋರಾಟಕ್ಕೆ ಬೆಂಬಲ ಘೋಷಿಸಿದ್ದಾರೆ.

ಫೆಬ್ರವರಿ 10 ರಂದು ಹಲವು ಕಾರ್ಮಿಕರು ಸೇರಿದಂತೆ 500 ಪೋಷಕರು ಮೈಸೂರು ಬ್ಯಾಂಕ್ ವೃತ್ತದಿಂದ ಕೆ.ಆರ್. ವೃತ್ತದವರೆಗೆ ಮೆರವಣಿಗೆ ನಡೆಸಿದರು. ಪೋಷಕರ ಪರವಾಗಿ ಸಭೆಯಲ್ಲಿ ಮಾತನಾಡಿದ ರಾಜಣ್ಣ ಮತ್ತು ಜಯಲಕ್ಷ್ಮಿಯವರು ತಮ್ಮ ಮಕ್ಕಳನ್ನು ಬಂಧಿಸಿ ಜೈಲಿಗಟ್ಟಿದ ಪೋಲಿಸರಿಗೆ ಹಿಡಿಶಾಪಹಾಕಿ ತಮ್ಮ ಮಕ್ಕಳನ್ನು ಬಿಡುಗಡೆ ಮಾಡಿ ಅವರ ಸಮಸ್ಯೆ ಪರಿಹರಿಸಿ ಇಲ್ಲವೆ ನಮ್ಮನ್ನು ಜೈಲಿಗೆ ಕಳುಹಿಸಿ ಎಂದು ಸರ್ಕಾರಕ್ಕೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಸಭೆಯ ನಂತರ 8 ಸದಸ್ಯರ ಪೋಷಕರ ನಿಯೋಗ ತಮ್ಮ ಮಕ್ಕಳ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು.

ಈ ಮಧ್ಯೆ ಬಿಪಿಎಲ್ ಕಾರ್ಮಿಕರ ಹೋರಾಟಕ್ಕೆ ಬೆಂಬಲವ್ಯಕ್ತಪಡಿಸಿರುವ ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿಯ ಲೀಲಾವತಿ, ಯಶೋಧನಮ್ಮ ಹಾಗೂ ಜಯಲಕ್ಷ್ಮಿಯವರಿದ್ದ ನಿಯೋಗ ನೂತನ ಕಾರ್ಮಿಕ ಸಚಿವ ಬಿ.ಎಲ್. ಶಂಕರ್‌ರನ್ನು ಭೇಟಿಯಾಗಿ ಕೂಡಲೆ ಬಿಪಿಎಲ್ ಕಾರ್ಮಿಕರ ಸಮಸ್ಯೆಯಲ್ಲಿ ಬಗೆಹರಿಸುವಂತೆ ಒತ್ತಾಯಿಸಿದೆ. ಮನವಿ ಸ್ವೀಕರಿಸಿದ ಕಾರ್ಮಿಕ ಸಚಿವರು 3-4 ದಿನಗಳಲ್ಲಿ ಬಗೆಹರಿಸುವ ಭರವಸೆಯನ್ನು ಮಹಿಳಾ ಸಂಘಟನೆಗೆ ನೀಡಿದ್ದಾರೆ.

ಜೆ.ಹೆಚ್. ಪಟೇಲ್‌ರ ಸರ್ಕಾರ ಕಾರ್ಮಿಕ ಕಾನೂನು ನಿಯಮಗಳನ್ನು ಎತ್ತಿ ಹಿಡಿಯಬೇಕು, ಬಿಪಿಎಲ್ ಆಡಳಿತವರ್ಗ ಕಾನೂನಿಗೆ ಗೌರವ ನೀಡಬೇಕು ಇಲ್ಲವೆ ಅವರನ್ನೂ ಜೈಲಿನಲ್ಲಿಡಬೇಕೆಂದು ಒತ್ತಾಯಿಸಿ ಹಾಗೂ ಕಾರ್ಮಿಕ ವಿರೋಧ ನೀತಿಗಳನ್ನು ವಿರೋಧಿಸಿ ಸಿಐಟಿಯು ರಾಜ್ಯ ಸಮಿತಿ ಹಾಗೂ ಬಿಪಿಎಲ್ ಸೌಹಾರ್ದತಾ ಸಮಿತಿಯು ಫೆ.15 ರಂದು ಮುಖ್ಯ ಮಂತ್ರಿ ಮನೆ ಮುಂದೆ ಧರಣಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜೈಲಿನಿಂದ ಬಿಡುಗಡೆ

ಫೆ 12 ರಂದು ಜೈಲಿನಲ್ಲಿದ್ದ ಬಿಪಿಎಲ್ ಕಾರ್ಮಿಕರನ್ನು ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಸಿಐಟಿಯು ಮುಖಂಡರಾದ ಎಸ್.ಸೂರ್ಯನಾರಾಯಣ ರಾವ್, ವಿ.ಜೆ.ಕೆ.ನಾಯರ್, ಆರ್.ಶ್ರೀನಿವಾಸ್ ಸೇರಿದಂತೆ ಕಾರ್ಮಿಕರು ಹಾಗೂ ಜನವಾದಿ ಮಹಿಳಾ ಸಂಘಟನೆ, ಡಿವೈಎಫ್ಐ, ಎಸ್‌ಎಫ್ಐ ನ ನೂರಾರು ಕಾರ್ಯಕರ್ತರು ಹೂವಿನ ಹಾರದ ಜತೆ ಅವರನ್ನು ಸ್ವಾಗತಿಸಿದರು.

ಇದರಿಂದ ಸ್ಫೂರ್ತಿಗೊಂಡ ಬಿಡುಗಡೆಗೊಂಡ ಕಾರ್ಮಿಕರು ನ್ಯಾಯ ಸಿಗುವವರೆಗೆ ಹೋರಾಟ ಮುಂದುವರಿಸುವ ಪ್ರತಿಜ್ಞೆಗೈದರು.

ನಿಶ್ಚಿತಾರ್ಥಬಿಟ್ಟು ಸೆರೆವಾಸಕ್ಕೆ

ಫೆಬ್ರವರಿ 5 ರಂದು ಮದುವೆಯ ನಿಶ್ಚಿತಾರ್ಥವಿದ್ದ ಬೊಮ್ಮನ ಹಳ್ಳಿ ಘಟಕದಲ್ಲಿ ಕೆಲಸಮಾಡುವ ಸವಿತಾ ಎಂಬ ಕಾರ್ಮಿಕ ಯುವತಿ ಫೆಬ್ರವರಿ 4 ರಂದೇ ಬಳ್ಳಾರಿ ಸೆರೆವಾಸಕ್ಕೆ ಮುಂದಾದರು. ಇತ್ತ ಯುವತಿ ಮನೆಯವರು ವಧುವಿಲ್ಲದೆ ನಿಶ್ಚಿತಾರ್ಥ ಹೇಗೆ? ಬೀಗರಿಗೆ ಏನು ಹೇಳುವುದು ಎಂಬ ಅಂತಃಕಲಹಕ್ಕೊಳಗಾಗಿದ್ದರೆ ಅತ್ತ ಬದುಕಿನ ಹೊಂಗನಸನ್ನು ಬಿಟ್ಟು ಮಧ್ಯಮ ವರ್ಗದ ಮಹಿಳಾ ಕಾರ್ಮಿಕರನ್ನು ಶೋಷಣೆ ಮಾಡುವುದು ಸುಲಭವೆಂಬ ನಂಬಿಯಾರ್‌ನ ನಂಬಿಕೆಯನ್ನು ಹುಸಿಗೊಳಿಸಿದ ಸವಿತಾ ಹೋರಾಟದ ಕಹಳೆ ಮೊಳಗಿಸುತ್ತಿರುವುದಕ್ಕೆ ಮಾದರಿ!

ಕಂದಮ್ಮನನ್ನು ಅಗಲಿ ಜೈಲಿಗೆ

ಬನ್ನೇರು ಘಟ್ಟ ರಸ್ತೆಯ ಬಿಪಿಎಲ್ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಇಂದ್ರಾಣಿ ಎಂಬ ಮಹಿಳಾ ಕಾರ್ಮಿಕರು ಹಾಲು ಕುಡಿಯುವ 6 ತಿಂಗಳ ಕರುಳಿನ ಕುಡಿಯನ್ನು ಪತಿಯ ಕೈ ಗಿತ್ತು ಬಳ್ಳಾರಿ ಜೈಲ್ ಸೇರಿ ಶೋಷಣೆಯ ವಿರುದ್ಧದ ಹೋರಾಟದ ಮಹತ್ವ ಹಾಗೂ ಸ್ಫೂರ್ತಿಯನ್ನು ಎಲ್ಲಾ ದುಡಿಯುವ ಜನತೆಗೆ ನೀಡಿದ್ದಾರೆ.

ಒಂದೆಡೆ
ಅಲ್ಪಸಂಖ್ಯಾತರ ಮೇಲೆ
ನಿರಂತರ ಹಲ್ಲೆಗಳು.
ಇನ್ನೊಂದೆಡೆ
ಜನ ಸಾಮಾನ್ಯರ ಮೇಲೆ
ನಿರಂತರ ಬೆಲೆಯೇರಿಕೆಗಳ
ಧಾಳಿ -
ಈ ನಡುವೆ ಆಳುವ
ಮೈತ್ರಿಕೂಟದಲ್ಲಿ
ವಿರೋಧಾಭಾಸದ
ದನಿಗಳು.
ದೇಶ ಎತ್ತ ಸಾಗಿದೆ?
ಸಿಪಿಐ(ಎಂ) ಪ್ರಧಾನ
ಕಾರ್ಯದರ್ಶಿಗಳು
ಈ ಲೇಖನದಲ್ಲಿ
ಪರಿಶೀಲಿಸಿದ್ದಾರೆ.



ಸುಭದ್ರ ಸರಕಾರ! ಸಮರ್ಥ ಪ್ರಧಾನಿ!!

ಬಿಜೆಪಿಯ ಘೋಷಣೆ ಚಿಂದಿ ಚಿಂದಿಯಾಗಿದೆ

ಹರ್ಕಿಶನ್ ಸಿಂಗ್ ಸುರ್ಜಿತ್

ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಬಡತನದ ರೇಖೆಯ ಕೆಳಗಿರುವವರಿಗೆ ಏರಿಸಿದ ಬೆಲೆಗಳನ್ನು ರದ್ದುಪಡಿಸಿ ಬಿಜೆಪಿ ಸದ್ಯಕ್ಕೆ ತನ್ನ ಮಿತ್ರ ಪಕ್ಷಗಳೊಂದಿಗೆ ಶಾಂತಿಯನ್ನೇನೋ ಖರೀದಿಸಿದಂತಿದೆ. ಆದರೆ ವಾಸ್ತವವಾಗಿ ಈ ಬೆಲೆಯೇರಿಕೆ ರದ್ದತಿಯ ಪ್ರಮಾಣ ಒಟ್ಟು ಏರಿಕೆಯಲ್ಲಿ ಒಂದು ಸಣ್ಣ ಭಾಗವಷ್ಟೆ. ಸಕ್ಕರೆ, ಯೂರಿಯಾ, ಅಡುಗೆ ಅನಿಲದ ಬೆಲೆಯೇರಿಕೆ ಹಾಗೆಯೇ ಉಳಿದಿದೆ. ಆದ್ದರಿಂದ ಇದು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ನಡುವೆ ಆಗಿರುವ ಒಂದು ರೀತಿಯ ರಾಜಿಯಷ್ಟೆ. ಒಂದೆಡೆ ಬಿಜೆಪಿಯ ಹಠಮಾರಿತನ, ಇನ್ನೊಂದೆಡೆ ಅದರ ಮಿತ್ರರು ಸಂಘರ್ಷಕ್ಕೆ ನಿಂತದ್ದು- ಇವೆರಡರ ನಡುವೆ ಈಗ ರಾಜಿಯಾಗಿದೆ.

ಆದರೆ ಬಿಜೆಪಿಯ ಸಮಸ್ಯೆಗಳೇನೂ ಮುಗಿದಿಲ್ಲ. ಒಂದೆಡೆ ತೆಲುಗುದೇಶಂ, ತೃಣಮೂಲ ಕಾಂಗ್ರೆಸ್‌ನ ಪ್ರತಿನಿಧಿಗಳು ಈ ಸಭೆಯಲ್ಲಿ ಇರಲಿಲ್ಲ, ಅತ್ತ ಎಐಎಡಿಎಂಕೆ ಮುಖ್ಯಸ್ಥೆ ಜಯಲಲಿತಾ ಜಂಟಿ ಹೇಳಿಕೆಗೆ ಸಹಿ ಹಾಕಲು ನಿರಾಕರಿಸಿದ್ದಾರೆ. ತೆಲುಗು ದೇಶಂ ಕೂಡಾ ರೇಶನ್ ಬೆಲೆಯೇರಿಕೆಗಳನ್ನು ಸಂಪೂರ್ಣ ರದ್ದುಮಾಡಬೇಕೆಂದಿದೆ. ಮಮತಾ ಬ್ಯಾನರ್ಜಿ ಪ್ರಧಾನಮಂತ್ರಿ, ಹಣಕಾಸು ಮಂತ್ರಿಗಳ ನಿವಾಸಗಳೆದುರು ಧರಣಿ ಮಾಡುವುದಾಗಿ ಹೇಳಿದರು.

ಇವೆಲ್ಲಾ ಬಿಜೆಪಿ ನೇತೃತ್ವದ ಮೈತ್ರಿ ಕೂಟದಲ್ಲಿ ಹತಾಶೆ ಹೆಚ್ಚುತ್ತಿರುವುದರ ಒಂದು ಸಂಕೇತ. ಬಿಜೆಪಿ ಮತ್ತು ಅದರ ಪರಿವಾರದ ಸಂಘಟನೆಗಳ ಕೃತ್ಯ-ದುಷ್ಕೃತ್ಯಗಳಿಗೆ ಉತ್ತರ ಕೊಡುವುದು ಬಿಜೆಪಿಯ ಮಿತ್ರರಿಗೆ ಹೆಚ್ಚೆಚ್ಚು ಕಷ್ಟವಾಗಲಾರಂಭಿಸಿದೆ. ಆದ್ದರಿಂದಲೇ ಆ ಸಭೆಯ ನಂತರ ಹೊರಡಿಸಿದ ಹೇಳಿಕೆಯಲ್ಲಿ "ಬಿಜೆಪಿ ನಮ್ಮ ಮೈತ್ರಿಕೂಟದ ಮುಖ್ಯ ಭಾಗವಾಗಿರುವುದರಿಂದ ಅದು ತನ್ನ ಸೈದ್ಧಾಂತಿಕ ಬಳಗಕ್ಕೆ ಸೇರಿದ ಸಂಘಟನೆಗಳು ಮೈತ್ರಿಕೂಟದ ಪ್ರತಿಷ್ಠೆ ಮತ್ತು ಸಾಮರಸ್ಯವನ್ನು ದುರ್ಬಲಗೊಳಿಸದಂತೆ ನೋಡಿಕೊಳ್ಳಲು ಸರ್ವಪ್ರಯತ್ನ ಮಾಡಬೇಕು" ಎಂಬ ವಾಕ್ಯವನ್ನು ಸೇರಿಸಲಾಯಿತು.

ಬಿಜೆಪಿ ಅಜೆಂಡಾ ಬಿಡದು:

ಈ ಹೇಳಿಕೆಯೇನೇ ಇರಲಿ, ರಾಷ್ಟ್ರೀಯ ಅಜೆಂಡಾದಲ್ಲೇನೇ ಇರಲಿ ಬಿಜೆಪಿ ತನ್ನ ಅಜೆಂಡಾವನ್ನಂತೂ ಬಿಡುವುದಿಲ್ಲ. ಆದ್ದರಿಂದ ಮುಂಬರುವ ದಿನಗಳಲ್ಲಿ ಮಿತ್ರ ಪಕ್ಷಗಳೊಂದಿಗೆ ಅದರ ಸಂಘರ್ಷ ಇನ್ನಷ್ಟು ಹೆಚ್ಚುವುದು ಖಂಡಿತ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಗ್ರಹಣ ದೇಶದ ಐಕ್ಯತೆಗೊಂದು ಗಂಭೀರ ಬೆದರಿಕೆ ಎಂದು, ಅದು ಭಾರತೀಯ ಐಕ್ಯತೆಯ ಎರಡು ಸ್ತಂಭಗಳಾದ ಜಾತ್ಯಾತೀತತೆ ಮತ್ತು ಒಕ್ಕೂಟತತ್ವವನ್ನು ನಾಶ ಮಾಡುತ್ತದೆ ಎಂದು ಸಿಪಿಐ(ಎಂ) ಪ್ರಾರಂಭದಿಂದಲೂ ಮತ್ತೆ ಮತ್ತೆ ಎಚ್ಚರಿಸುತ್ತಲೇ ಬಂದಿದೆ. ಭಾರತೀಯರಲ್ಲಿ ಹಿಂದೂ ಧಾರ್ಮಿಕ ನಂಬಿಕೆಗಳ ಜನರ ಸಂಖ್ಯೆ ಬಹಳ ದೊಡ್ಡದಾಗಿದ್ದರೂ ಅಲ್ಪಸಂಖ್ಯಾತರ ಸಂಖ್ಯೆಯೂ ಅಲ್ಪವೇನಲ್ಲ. ಜನಸಂಖ್ಯೆಯಲ್ಲಿ 12% ಮುಸಲ್ಮಾನರಿದ್ದಾರೆ. ಇಂಡೋನೇಸ್ಯಾ ಬಿಟ್ಟರೆ ಇಷ್ಟು ಸಂಖ್ಯೆಯ ಮುಸಲ್ಮಾನರಿರುವ ದೇಶವೆಂದರೆ ಭಾರತವೇ. 2.5 ಕೋಟಿ ಕ್ರೈಸ್ತರಿದ್ದಾರೆ, 2 ಕೋಟಿ ಸಿಖ್ಖರಿದ್ದಾರೆ, ಇತರ ಧಾರ್ಮಿಕ ಪಂಥಗಳವರು ಇದ್ದಾರೆ. ಆದ್ದರಿಂದಲೇ ಸಂವಿಧಾನ ಬರೆದವರು ಜಾತ್ಯಾತೀತತೆಯೇ ಅಡಿಗಲ್ಲಾಗಬೇಕು ಎಂಬ ತೀರ್ಮಾನಕ್ಕೆ ಬಂದರು. ಕೆಲವು ದಿನಗಳ ಹಿಂದೆ ಸುಪ್ರಿಂ ಕೋರ್ಟ್ ಜಾತ್ಯಾತೀತತೆ ಎಂದರೆ ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸುವುದು ಎಂದೂ ವಿಧಿಸಿದೆ. ಇದು ಒಂದು ಸ್ತಂಭವಾದರೆ ಇನ್ನೊಂದು ಸ್ತಂಭ ಒಕ್ಕೂಟತತ್ವ. ಏಕೆಂದರೆ ವಿಭಿನ್ನ ಭಾಷೆ, ಸಂಸ್ಕೃತಿ ದೇಶೀಯತೆಗಳು ನೆಲೆಸಿರುವ ಬಹುದೇಶೀಯ ರಾಷ್ಟ್ರದಲ್ಲಿ ಈ ಎಲ್ಲವುಗಳ ಸ್ವಂತಿಕೆಯನ್ನು ರಕ್ಷಿಸುವುದು ಒಂದು ಒಕ್ಕೂಟ ವ್ಯವಸ್ಥೆಯಲ್ಲಿ ಮಾತ್ರವೇ ಸಾಧ್ಯ. ಬಿಜೆಪಿ ಇವೆರಡನ್ನೂ ನಾಶಮಾಡುತ್ತಲಿದೆ.

ಇಷ್ಟು ಬೇಗನೆ ಇಷ್ಟೊಂದು ಅಪಕೀರ್ತಿ:

ಸ್ವತಂತ್ರ ಭಾರತದ ಇತಿಹಾಸದಲ್ಲಿ ಯಾವ ಸರಕಾರವೂ ಇಷ್ಟು ಬೇಗನೇ ಇಷ್ಟೊಂದು ಅಪಕೀರ್ತಿ ಪಡೆದಿರಲಿಲ್ಲ, ಜನಗಳಿಂದ ಇಷ್ಟೊಂದು ಬೇಗನೇ ದೂರವಾಗಿರಲಿಲ್ಲ. ಇಷ್ಟೇ ಅಲ್ಲ, ಹೀಗೆ ಯಾವ ಸರಕಾರವೂ ಸಶಸ್ತ್ರ ಪಡೆಗಳ ವ್ಯವಹಾರಗಳಲ್ಲಿ ಅಡ್ಮಿರಲ್ ಭಾಗವತರ ವಜಾದಲ್ಲಿ ಕಂಡುಬಂದಂತೆ ಇಷ್ಟೊಂದು ನಗ್ನ ರೀತಿಯಲ್ಲಿ ಮೂಗು ತೂರಿಸಿರಲಿಲ್ಲ. ಅಧಿಕಾರಶಾಹಿಯನ್ನೂ ಅದು ಬಿಟ್ಟಿಲ್ಲ- ಸೈದ್ಧಾಂತಿಕವಾಗಿ ತನಗೆ ಸಮೀಪವಿರುವವರಿಗೆ ಆಕರ್ಷಕ ಹುದ್ದೆಗಳು ತಮ್ಮನ್ನು ವಿರೋಧಿಸಿದವರಿಗೆ ಶಿಕ್ಷೆ!

ಬಿಜೆಪಿಯಿಂದ ಜನ ದೂರ ಹೋಗಿದ್ದಾರೆ ಎಂಬುದಕ್ಕೆ ನವೆಂಬರ್ 1998 ರ ವಿಧಾನಸಭಾ ಚುನಾವಣೆಗಳೇ ಸಾಕ್ಷಿ. ಜನಗಳ ತೀರ್ಮಾನ ಸ್ಪಷ್ಟವಾಗಿಯೂ ಅದರ ಧೋರಣೆಗಳಿಗೆ, ವರ್ತನೆಗಳಿಗೆ ವಿರೋಧ ವ್ಯಕ್ತಪಡಿಸಿದ ತೀರ್ಪಾಗಿತ್ತು.

ಉದಾರೀಕರಣ ನೀತಿಗೂ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಭಾರೀ ಪ್ರೋತ್ಸಾಹ ಸಿಕ್ಕಿತು. ಸ್ವದೇಶೀ ಘೋಷಣೆಯೇನಿದ್ದರೂ ಬಹುರಾಷ್ಟ್ರೀಯ ಕಂಪನಿಗಳಿಗೆ, ಜೊತೆಗೆ ದೊಡ್ಡ ಬಂಡವಾಳಿಗರ ಕಂಪನಿಗಳಿಗೆ ಭಾರೀ ರಿಯಾಯ್ತಿಗಳು, ಇಂಡಿಯನ್ ಏರ್‌ಲೈನ್ಸ್ ಕೂಡಾ ಸೇರಿದಂತೆ ಪ್ರಮುಖ ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟ, ವಿಮಾ ವಲಯದಲ್ಲಿ ವಿದೇಶೀಯರಿಗೆ ಅವಕಾಶ, ಇತ್ತಿಚೆಗೆ ತಮ್ಮ ಶೇರುಗಳನ್ನು ಮರು ಖರೀದಿಸಿ ಅಲ್ಪಸಂಖ್ಯೆಯಲ್ಲಿ ಶೇರು ಹೊಂದಿದ್ದರೂ ದೇಶೀ-ವಿದೇಶೀ ಬಂಡವಾಳದಾರರು ಸ್ವಲ್ಪವೇ ಸಮಯದಲ್ಲಿ ಕಂಪನಿಗಳ ಮೇಲೆ ಹತೋಟಿ ಪಡೆಯಲು ಅವಕಾಶ ನೀಡಲಾಗಿದೆ.

ಕಳೆದ ಹತ್ತು ತಿಂಗಳಲ್ಲಿ ಸಾಧ್ಯವಾದ ಎಲ್ಲಾ ವಲಯಗಳಲ್ಲಿ ಆರ್.ಎಸ್.ಎಸ್.ನ ಹಿಂದುತ್ವ ಅಜೆಂಡಾ ತರಲು ಬಿಜೆಪಿ ನೇತೃತ್ವದ ಸರ್ಕಾರ ವ್ಯವಸ್ಥಿತ ಪ್ರಯತ್ನ ನಡೆಸಿದೆ. ಶಿಕ್ಷಣವನ್ನು ಕೋಮು ಗ್ರಸ್ತಗೊಳಿಸುವ ಪ್ರಯತ್ನ ಇದರಲ್ಲಿ ಪ್ರಮುಖವಾದದ್ದು. ನಿಜ, ಇದಕ್ಕೆ ಜಾತ್ಯಾತೀತ ಪಕ್ಷಗಳಿಂದ ಮಾತ್ರವಲ್ಲ, ಅದರ ಮಿತ್ರ ಪಕ್ಷಗಳಿಂದಲೂ ಪ್ರತಿರೋಧ ಬಂತು.

ಕೋಮುವಾದಿ ರಾಜಕೀಯ:

ಈ ಅವಧಿಯಲ್ಲಿ ಬಿಜೆಪಿ ತನ್ನ ಕೋಮುವಾದಿ ರಾಜಕೀಯವನ್ನು ನಾಚಿಕೆಯಿಲ್ಲದೆ ಸಮರ್ಥಿಸಿ ಕೊಳ್ಳುವುದನ್ನು ಕಾಣುತ್ತಿದ್ದೇವೆ. ಬಿಜೆಪಿ ಮತ್ತು ಅದರ ಪರಿವಾರದ ಸಂಘಟನೆಗಳು ಅಯೋಧ್ಯೆಯಲ್ಲಿ ದೇವಸ್ಥಾನ ಕಟ್ಟಲು ಉತ್ತರ ಪ್ರದೇಶ, ರಾಜಸ್ಥಾನಗಳ ಹಲವೆಡೆ ಸಿದ್ಧತೆ ನಡೆಸುತ್ತಿದ್ದಾರೆ. ಮುಂಬೈಯಿಂದ ಅಲ್ಪಸಂಖ್ಯಾತರನ್ನು ಬಾಂಗ್ಲಾದೇಶೀಯರೆಂದು ಆಪಾದಿಸಿ ಓಡಿಸುತ್ತಿದ್ದಾರೆ. ಅಲ್ಲಿಯ ಸೇನಾಬಿಜೆಪಿ ಸರ್ಕಾರ ಶ್ರೀಕೃಷ್ಣ ಆಯೋಗದ ವರದಿಯನ್ನು ತಿರಸ್ಕರಿಸಿದೆ. ಈಗ ಇನ್ನೊಂದು ಅಲ್ಪಸಂಖ್ಯಾತ ಕೋಮು ಕ್ರೈಸ್ತ ಸಮುದಾಯದ ಬಾರಿ. ಕಳೆದ ಕೆಲವು ತಿಂಗಳಿಂದ ವಿಶೇಷವಾಗಿ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಕ್ರೈಸ್ತರ ಮೇಲೆ ವ್ಯವಸ್ಥಿತ ಧಾಳಿ ನಡೆಯುತ್ತಿದೆ. ಮಿಶನರಿಗಳ ಲೂಟಿ, ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರಗಳನ್ನು ನಡೆಸಿದ್ದಾರೆ. ಒರಿಸ್ಸಾದ ಮನೋಹರಪುರದಲ್ಲಿ ಕ್ರೈಸ್ತ ಮಿಶನರಿ ಹಾಗೂ ಅತನ ಇಬ್ಬರು ಮಕ್ಕಳ ಸಜೀವ ದಹನ ನಡೆದಿದೆ.

ಈ ಅವಧಿಯಲ್ಲಿ ಕೇಂದ್ರ, ರಾಜ್ಯ ಸಂಬಂಧಗಳೂ ಹದಗೆಟ್ಟಿವೆ. ಕೆಲವು ರಾಜ್ಯಗಳಿಗೆ ಬಿಜೆಪಿಯ ಮುಖಂಡರಾಗಿದ್ದವರನ್ನು, ದೀರ್ಘಕಾಲ ಆರ್.ಎಸ್.ಎಸ್. ನಲ್ಲಿದ್ದವರನ್ನು ರಾಜ್ಯಪಾಲರಾಗಿ ನೇಮಿಸಲಾಗಿದೆ. ಇಂತಹ ರಾಜ್ಯಪಾಲರುಗಳು ಬಿಜೆಪಿಗೆ ಬೇಕಾದ. ವರದಿಗಳನ್ನು ಕಳಿಸುತ್ತಿದ್ದಾರೆ, ಪ್ರತಿಪಕ್ಷಗಳ ಆಳ್ವಿಕೆಯಿರುವ ರಾಜ್ಯಗಳಿಗೆ ಕೇಂದ್ರದ ತಂಡಗಳನ್ನು ಸರಕಾರ ಕಳಿಸಿ ತನ್ನ ಅಧಿಕಾರಗಳ ಸೀಮೆಯನ್ನು ದಾಟಿ ಹೋಗುತ್ತಿದೆ. ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವ ಪರಿಕಲ್ಪನೆಗೆ ಬಿಜೆಪಿಯ ವಿರೋಧವಿದೆ. ಏಕೆಂದರೆ ಒಂದು ಸಂಸ್ಕೃತಿ, ಒಂದು ರಾಷ್ಟ್ರದ ಅದರ ಹಿಂದುತ್ವ ತತ್ವದಲ್ಲಿ ಇದಕ್ಕೆ ಅವಕಾಶವಿಲ್ಲ.

ಸಾರ್ವಭೌಮತೆಗೂ ದಕ್ಕೆ:

ಬಿಜೆಪಿ ಆಳ್ವಿಕೆಯಲ್ಲಿ ಭಾರತದ ದೀರ್ಘಕಾಲದ ವಿದೇಶಾಂಗ ನೀತಿಯೂ ಪಲ್ಲಟಗೊಂಡಿದೆ. ಸಂಯುಕ್ತರಂಗ ಸರಕಾರ ಬಹಳ ಶ್ರಮಪಟ್ಟು ನೆರೆ ದೇಶಗಳೊಂದಿಗೆ ಬೆಳೆಸಿದ್ದ ಉತ್ತಮ ಸಂಬಂಧಗಳನ್ನು ಹಾಳುಗೆಡವಲು ಪ್ರಯತ್ನಿಸಿದೆ.

ಮೇ1998 ರಲ್ಲಿ ಪೋಖ್ರಾನ್‌ನಲ್ಲಿ ಪರಮಾಣು ಪರೀಕ್ಷೆ ನಡೆಸಿ ಜನಗಳಲ್ಲಿ ರಾಷ್ಟ್ರಾಂಧತೆಯನ್ನು ಬೆಳೆಸುವ ಪ್ರಯತ್ನ ನಡೆಸಿತು. ಈ ಸರ್ಕಾರ ಒಂದೆಡೆ ಸಾಮ್ರಾಜ್ಯಶಾಹಿಗಳ ಒತ್ತಡಗಳಿಗೆ ತಲೆಬಾಗುತ್ತಿದೆ. ಇನ್ನೊಂದು ಕಡೆ ಚೀನಾ ಪಾಕೀಸ್ತಾನಗಳೊಂದಿಗೆ ಸಂಬಂಧಗಳನ್ನು ಸುಧಾರಿಸುವ ಪ್ರಯತ್ನಗಳಿಗೆ ನಕಾರ ಹೇಳುತ್ತಿದೆ.

ಹಿಂದೆ ಸಂಯುಕ್ತರಂಗ ಸರ್ಕಾರ ಪಕ್ಷಪಾತಪೂರ್ಣ ಸಿಟಿಬಿಟಿಗೆ ಸಹಿ ಹಾಕುವುದಿಲ್ಲ ಎಂಬ ಸ್ಪಷ್ಟ ನಿಲುವು ತಳೆದಿತ್ತು. ಈಗ ಬಿಜೆಪಿ ನೇತೃತದ ಸರ್ಕಾರ ಸಹಿ ಹಾಕುವ ದಿಕ್ಕಿನಲ್ಲಿ ಸಾಗುತ್ತಿದೆ. ಜಸ್ವಂತ್‌ಸಿಂಗ್-ಸ್ಟ್ರೊಬ್ ತಾಲ್ಬೊಟ್ ಗುಪ್ತ ಮಾತುಕತೆಗಳು ಅದಕ್ಕೆ ನೆಲ ಹದಮಾಡುತ್ತಿವೆ. ಭಾರತ-ಪಾಕಿಸ್ಥಾನಗಳ ನಡುವೆ ಮಧ್ಯಸ್ಥಿಕೆ ವಹಿಸುವುದಾಗಿಯೂ ತಾಲ್ಬೋಟ್ ಹೇಳಿದ್ದಾರೆ. ಅದಕ್ಕೆ ಪಾಕಿಸ್ತಾನದ ಪ್ರಧಾನಿ ವ್ಯಂಗ್ಯವಾಗಿ ಒಂದು ಪಂಜಾಬೀ ಗಾದೆಯನ್ನು ಉಲ್ಲೇಖಿಸುತ್ತಾ "ನೀವು ನೇರವಾಗಿ ಬರಬಹುದಿತ್ತು ಭಟಿಂಡಾದ ಮೂಲಕ ಹೋಗುವ ಅಗತ್ಯ ವೇನಿತ್ತು?" ಎಂದಿದ್ದಾರೆ.

ಒಟ್ಟಿನಲ್ಲಿ ಒಂದು ಸುಭದ್ರ ಸರ್ಕಾರ ಹಾಗೂ ಸಮರ್ಥ ಪ್ರಧಾನಮಂತ್ರಿಯನ್ನು ನೀಡುವ ಬಿಜೆಪಿಯ ಘೋಷಣೆ ಚಿಂದಿ-ಚಿಂದಿಯಾಗಿದೆ.

ಮುಂದೇನು?:

ಕಾಂಗ್ರೆಸ್ಸಿನ ನಿಲುವೇನು? ಅದು ಈಗಲೂ ದೇಶದ ಅತಿ ದೊಡ್ಡ ಪಕ್ಷ. ಆದರೆ ಅದು ಈಗಲೂ ಮಧ್ಯಪ್ರವೇಶ ನಡೆಸಿ ಜನಗಳ ನಿರೀಕ್ಷೆಗಳಿಗೆ ಸ್ಪಂದಿಸುತ್ತಿಲ್ಲ ಕೆಲವು ಕಾಂಗ್ರೆಸ್ ಮುಖಂಡರು ತಾವೇ ಬಹುಮತ ಪಡೆದು ಅಧಿಕಾರಕ್ಕೆ ಬರಬಹುದು ಬೇರೆಯವರ ಬೆಂಬಲ ಬೇಕಿಲ್ಲ ಎಂದೂ ಯೋಚಿಸುತ್ತಿದ್ದಾರೆ. ಕಾಂಗ್ರೆಸ್ ತನ್ನ ಸಾಮೂಹಿಕ ನೆಲೆ ಕಳಕೊಂಡಿದೆ. ಕಳೆದ ಚುನಾವಣೆಗಳಲ್ಲಿ ಅದಕ್ಕೆ ಸಿಕ್ಕಿದ್ದು ಕೇವಲ 25.8%. ಮತ ದೇಶದ ಅತೀ ದೊಡ್ಡ ರಾಜ್ಯ ಉತ್ತರ ಪ್ರದೇಶದಲ್ಲಿ ಅದಕ್ಕೆ ಸಿಕ್ಕಿದ್ದು ಕೇವಲ 2% ಮತ. ದೇಶದ ಹಲವು ಭಾಗಗಳಲ್ಲೂ ಅವರಿಗಿನ್ನೂ ಜನಗಳ ವಿಶ್ವಾಸವನ್ನು ಮತ್ತೆ ಗಳಿಸಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ಪಕ್ಷ ತನ್ನ ಇತಿಹಾಸದಿಂದ ಪಾಠ ಕಲಿತು ರಾಷ್ಟ್ರೀಯ ಐಕ್ಯತೆ ಮತ್ತು ಜನಗಳ ಹಿತಾಸಕ್ತಿಗಳನ್ನು ಕಾಪಾಡಲು ಮುಂದೆ ಬರಬೇಕು.

ಸಿಪಿಐ(ಎಂ) ಮತ್ತು ಎಡಪಕ್ಷಗಳು ಕೋಮುವಾದದ ವಿರುದ್ಧ ಅರ್ಥಿಕ ಸಾರ್ವಭೌಮತೆಯ ರಕ್ಷಣೆಗಾಗಿ ನಿರಂತರವಾಗಿ ಹೋರಾಟ ನಡೆಸಿಕೊಂಡು ಬರುತ್ತಿವೆ. ಕೋಮುವಾದದ ವಿರುದ್ಧ ಆದೋಲನವನ್ನು ಮುಂದೊಯ್ಯುವತ್ತ ಎಡ ಪಕ್ಷಗಳು ನವದೆಹಲಿಯಲ್ಲಿ ಈ ತಿಂಗಳ ಕೊನೆಯಲ್ಲಿ ಒಂದು ಸಮಾವೇಶ ನಡೆಸಲು ಮುತುವರ್ಜಿ ವಹಿಸಿವೆ. ಇದು ಮತ್ತೊಮ್ಮೆ ಮೂರನೇ ಪರ್ಯಾಯ ಮೂಡಿಬರಲು ವೇದಿಕೆ ಎಂದು ಪರಿಗಣಿಸಬಹುದೇ? ಮುಂಬರುವ ದಿನಗಳಲ್ಲಿ ಈ ಪ್ರಶ್ನೆಗೆ ಉತ್ತರ ಸಿಗಲಿದೆ. ○

ಫೆಬ್ರವರಿ 9 ರಂದು ದಿಲ್ಲಿಯಲ್ಲಿ ಪಡಿತರ ಬೆಲೆ ಏರಿಕೆಯನ್ನು ವಿರೋಧಿಸಿ ಸಂಸದ್ ಮಾರ್ಗದಲ್ಲಿ ಪ್ರತಿಭಟನೆ ನಡೆಸುತ್ತಿರುವ ಎಡಪಕ್ಷಗಳ ಕಾರ್ಯಕರ್ತರ ಮೇಲೆ ಪೋಲೀಸರು ಜಲಫಿರಂಗಿ ಮತ್ತು ಲಾಠಿಗಳ ಮೂಲಕ ದಮನ ಚಕ್ರ ಹರಿಯಬಿಟ್ಟರು.



“ಭಾರತೀಯ ಕಾರ್ಮಿಕ ಸಮ್ಮೇಳನ”(ILC) ಎಂಬುದು ಭಾರತದ ಕಾರ್ಮಿಕ ಸಂಸತ್ತು, ಇಂತಹ ಸಮ್ಮೇಳನಗಳ ನಡುವೆ ‘ಸ್ಥಾಯೀ ಕಾರ್ಮಿಕ ಸಮಿತಿ’ ಗಳು ಹಾಗೂ ಸುಮಾರು ೫೦ ಇತರ ತ್ರಿಪಕ್ಷೀಯ ಸಮಿತಿಗಳು ದೇಶದ ಸ್ವಾವಲಂಬೀ ಬೆಳವಣಿಗೆಗೆ ರೂಪಿಸಿರುವ ಪ್ರಜಾಸತ್ತಾತ್ಮಕ ಸಂಸ್ಥೆಗಳು. ಈ ಬಿಜೆಪಿ ನೇತೃತ್ವದ ಸರಕಾರ ಇವನ್ನೆಲ್ಲಾ ಕೂಡಾ ನಾಶ ಮಾಡುತ್ತಿದೆ. ಎಲ್ಲವೂ ಶ್ರೀಮಂತ ವಿದೇಶಿ-ವಿದೇಶಿಯರು ಬಯಸುವ ಉದಾರೀಕರಣಕ್ಕಾಗಿ. ಈ ವರದಿಯನ್ನು ನೋಡಿ.

ಐ.ಎಂ.ಎಫ್.-ವಿಶ್ವಬ್ಯಾಂಕ್‌ಗಳಿಂದ ಆದೇಶ ಪಡೆದು ಅದನ್ನು ಜಾರಿಗೊಳಿಸುವ ಶಕ್ತಿಯಷ್ಟೇ ಇವರ ಮೆದುಳಲ್ಲಿ ಉಳಿದಿರುವುದು

ಸ್ಥಾಯಿ ಕಾರ್ಮಿಕ ಸಮಿತಿಯ 35ನೇ ಸಭೆ ಇದನ್ನು ಸ್ಪಷ್ಟಪಡಿಸಿದೆ

ಸ್ಥಾಯೀ ಕಾರ್ಮಿಕ ಸಮಿತಿಯ 35ನೇ ಸಭೆ ಫೆಬ್ರವರಿ 6 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಿತು. ಕೇಂದ್ರ ಕಾರ್ಮಿಕ ಮಂತ್ರಿ ಡಾ. ಸತ್ಯನಾರಾಯಣ ಜತಿಯಾ ಅಧ್ಯಕ್ಷತೆ ವಹಿಸಿದ್ದರು. ಆದರೆ ಈ ಸಭೆ ಸಂಪೂರ್ಣ ನಿರರ್ಥಕವಾಗಿತ್ತು. ದೇಶದ ಪ್ರಸಕ್ತ ಗಂಭೀರ ಪರಿಸ್ಥಿತಿಯಲ್ಲಿ ಉದ್ಯಮಗಳಲ್ಲಿನ ರೋಗಗ್ರಸ್ತತೆ, ನಿರುದ್ಯೋಗ, ಬಹುಪಾಲು ಕಾರ್ಮಿಕರ ಕೂಲಿಗಳಲ್ಲಿ ಕಡಿತ ಮತ್ತು ಆರ್ಥಿಕ ಸುಧಾರಣೆಗಳಿಂದ ಹೊಮ್ಮಿದ ಇತರ ಹತ್ತಾರು ಗಂಭೀರ ಸಮಸ್ಯೆಗಳನ್ನು ಈ ಸಭೆ ಗಮನಕ್ಕೇ ತಗೊಳ್ಳಲಿಲ್ಲ.

ಕಟ್ಟಡ ಕಾರ್ಮಿಕರಿಗೆ, ಅಸಂಘಟಿತ ವಲಯದ ಇತರ ಕಾರ್ಮಿಕರಿಗೆ ಯಾವುದೇ ನಿರ್ದಿಷ್ಟ ಪ್ರಸ್ತಾವ ಸರಕಾರದ ತಡೆಯಿಂದ ಬಂದಿಲ್ಲ. ಮಾಲಕರು ಕಾರ್ಮಿಕ ಕಾನೂನುಗಳನ್ನು ಪಾಲಿಸದ ಬಗ್ಗೆ, ಇಂತಹ ಉಲ್ಲಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆಯನ್ನು ನೀಡಲೂ ಸರಕಾರಕ್ಕಾಗಲಿಲ್ಲ. ಪ್ರತಿವಲಯದಲ್ಲೂ ಕಾರ್ಮಿಕರನ್ನು ಮಾಲಕರ ಮರ್ಜಿಗೆ ಬಿಡುವ ನಿಲುವನ್ನು ಈ ಸರಕಾರ ತಳೆದಂತಿದೆ. ಮಕ್ಕಳ ದುಡಿಮೆ ಕೊನೆಗೊಳಿಸುವ ಹಾಗೂ ಮಹಿಳಾ ಕಾರ್ಮಿಕರಿಗೆ ಪರಿಹಾರ ನೀಡುವ ಬಗ್ಗೆ ಯಾವುದೇ ನಿರ್ದಿಷ್ಟ ಕ್ರಮಗಳು ಸರಕಾರದ ಬಳಿಯಿದ್ದಂತಿಲ್ಲ.

ಈ ಸರಕಾರ ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗ ರಚಿಸಿ ಎಲ್ಲಾ ಕಾರ್ಮಿಕ ಕಾನೂನುಗಳನ್ನು ಜಾಗತೀಕರಣದ ಹಿನ್ನೆಲೆಯಲ್ಲಿ ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡಲು ಸರಕಾರ ಏಕಪಕ್ಷೀಯ ವಾಗಿ ನಿರ್ಧರಿಸಿದೆ ಎಂದೂ ಹೇಳ ಲಾಯಿತು. ಸಿಐಟಿಯು ಮತ್ತು ಇತರ ಕಾರ್ಮಿಕ ಸಂಘಗಳು ಇದನ್ನು ಬಲವಾಗಿ ಖಂಡಿಸಿವೆ.

ಈ ‘ಭಾರತೀಯ ಕಾರ್ಮಿಕ ಸಮ್ಮೇಳನ’ ಅನ್ನೋದು ಭಾರತ ಕಾರ್ಮಿಕ ಸಂಸತ್ತು. ಕಾರ್ಮಿಕ ವಿಷಯಗಳಿಗೆ ಸಂಬಂಧಪಟ್ಟಂತೆ ನೀತಿ ನಿರ್ಧಾರಣೆ ಮಾಡುವ ಅತ್ಯುನ್ನತ ತ್ರಿಪಕ್ಷೀಯ (ಅಂದರೆ ಕಾರ್ಮಿಕರ, ಮಾಲಕರ ಸರಕಾರದ ಪ್ರತಿನಿಧಿಗಳಿರುವ) ಸಮಿತಿ. ಇಂತಹ ಎರಡು ಸಮ್ಮೇಳನಗಳ ನಡುವೆ ಕಾರ್ಮಿಕ ವಿಷಯಗಳನ್ನು ಪರಿಶೀಲಿಸುವ ವ್ಯವಸ್ಥೆಯೆಂದರೆ ಈ ‘ಸ್ಥಾಯೀ ಕಾರ್ಮಿಕ ಸಮಿತಿ’(ಎಲ್.ಎಲ್.ಸಿ). ಇವಲ್ಲದೆ ಇನ್ನೂ 50 ತ್ರಿಪಕ್ಷೀಯ ಸಮಿತಿಗಳಿವೆ. ಆದರೆ ಈಗ ಇವೆಲ್ಲಾ ನಿರರ್ಥಕವೆನಿಸುವಂತಾಗುತ್ತಿದೆ.

ಈ ಸಮಿತಿಗಳ ನಿರ್ಣಯಗಳನ್ನು ಈ ಹಿಂದೆಯೂ ಪೂರ್ಣವಾಗಿ ಜಾರಿಗೆ ತರುತ್ತಿರಲಿಲ್ಲ. ಆದರೂ ಆರಂಭದ ದಿನಗಳಲ್ಲಿ ಇವು ಭಾರತದಲ್ಲಿ ಕಾರ್ಮಿಕ ನೀತಿಗಳನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದವು. ಆದರೆ ಕ್ರಮೇಣ ಅವುಕೇವಲ ನಾಮಮಾತ್ರದ ಸಮಿತಿಗಳಾಗಿ ಪರಿಣಮಿಸಿವೆ. ಈಗ ಬಿಜೆಪಿ ಸರಕಾರದಡಿಯಲ್ಲಿ ಈ ಪ್ರಕ್ರಿಯೆ ತಾರಕಕ್ಕೇರಿದೆ. ಈ ಸಮಿತಿಗಳಲ್ಲಿ ಯಾವುದೇ ಚರ್ಚೆ ನಡೆಸಿದೆ ಭಾರತ ಸರಕಾರ ಕಾರ್ಮಿಕರ ಹಿತಾಸಕ್ತಿಗಳಿಗೆ ಮಾತ್ರವಲ್ಲ, ದೇಶದ ಉದ್ದಿಮೆಗಳ ಹಿತಾಸಕ್ತಿಗಳಿಗೂ ಮಾರಕವಾದ ನಿರ್ಣಯಗಳನ್ನು ಒಂದರ ಮೇಲೊಂದರಂತೆ ಕೈಗೊಳ್ಳುತ್ತಿದೆ.

ನಮ್ಮ ಮಾರುಕಟ್ಟೆಯನ್ನು ತೆರೆದಿಟ್ಟದ್ದು, ಉದಾರ ಆಮದು ನೀತಿ ಇವೆಲ್ಲವುಗಳಿಂದಾಗಿ ಸಣ್ಣ ಗೃಹ ಆಧಾರಿತ ಉದ್ದಿಮೆಗಳಿಂದ ಬೃಹತ್ ಉದ್ದಿಮೆಗಳ ವರೆಗೆ ಹಲವು ರೋಗಗ್ರಸ್ತವಾಗುತ್ತಿವೆ. ಲಕ್ಷಗಟ್ಟಲೆ ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ, ಗಗನಕ್ಕೇರಿರುವ ಬೆಲೆಗಳಿಂದ ಕಾರ್ಮಿಕ ವರ್ಗದ ಕೊಳ್ಳುವ ಶಕ್ತಿ ಕುಸಿಯುತ್ತಿದೆ, ಇಂತಹ ಸನ್ನಿವೇಶದಲ್ಲಿ ಕೈಗಾರಿಕಾ ರೋಗಗ್ರಸ್ತತೆ, ನಿರುದ್ಯೋಗ, ಜೀವನ ಮಟ್ಟದಲ್ಲಿ ಕುಸಿತ, ಸಾಮಾಜಿಕ ಭದ್ರತೆಗಳು, ಕಾರ್ಮಿಕರ ಹಕ್ಕುಗಳು ಇವೆಲ್ಲಾ ಪ್ರಮುಖ ಪ್ರಶ್ನೆಗಳಾಗಬೇಕಿತ್ತು. ಆದರೆ ಸರಕಾರಕ್ಕೆ ಇವುಗಳ ಬಗ್ಗೆ ತುಸುವಾದರೂ ಚಿಂತೆಯಿದ್ದಂತಿಲ್ಲ. ಒಂದೂವರೆ ವರ್ಷದ ನಂತರ ಸ್ಥಾಯೀ ಕಾರ್ಮಿಕ ಸಮಿತಿ ಮೇಲೆ ಹೇಳಿದಂತೆ ಫೆಬ್ರವರಿ 6 ರಂದು ಒಂದು ದಿನದ ಮಟ್ಟಿಗೆ ಸಭೆ ಸೇರಿದರೂ ಈ ಯಾವ ಪ್ರಮುಖ ಪ್ರಶ್ನೆಗಳನ್ನೂ ಪರಿಶೀಲಿಸಲೇ ಇಲ್ಲ. ದೇಶದ 35 ಕೋಟಿ ಜನಗಳನ್ನು ಬಾಧಿಸುವ ಗಂಭೀರ ಪ್ರಶ್ನೆಗಳು ಈ ಸರಕಾರಕ್ಕೆ ಗಂಭೀರ ಪ್ರಶ್ನೆಗಳಾಗಿಯೇ ಕಾಣುತ್ತಿಲ್ಲ. ಈ ಸಭೆಯಲ್ಲಿ ಕಾರ್ಮಿಕ ಮಂತ್ರಿ ಬಿಟ್ಟು ಕಾರ್ಮಿಕರನ್ನು ದುಡಿಸಿಕೊಳ್ಳುವ ಇತರ ಯಾವುದೇ ಇಲಾಖೆಯ ಪ್ರತಿನಿಧಿಯೂ ಇರಲಿಲ್ಲ.

ಬಜೆಟ್ ಅಧಿವೇಶನದಲ್ಲಿ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಒಂದು ಮಸೂದೆಯನ್ನು ಸರಕಾರ ತರುವ ಯೋಚನೆಯಲ್ಲಿದ್ದಂತಿದೆ. ಆದರೆ ಈ ಸಭೆಯಲ್ಲಿ ಆ ಮಸೂದೆಯ ಕರಡಿನ ಬಗ್ಗೆ ಚರ್ಚೆ ಮಾಡುವುದು ಈ ಸರಕಾರಕ್ಕೆ ಅಗತ್ಯವೆನಿಸಲಿಲ್ಲ. ಒಂದೂವರೆ ವರ್ಷಗಳ ನಂತರ ಸಭೆ ಸೇರಿದ ಈ ಸಮಿತಿ ಮಾಡಿದ ಏಕೈಕ ಕೆಲಸವೆಂದರೆ ಏಪ್ರಿಲ್ 9-10 ರಂದು ಸೇರಲಿರುವ ಭಾರತೀಯ ಕಾರ್ಮಿಕ ಸಮ್ಮೇಳನದ ಅಜೆಂಡಾವನ್ನು ನಿರ್ಧರಿಸಿದ್ದಷ್ಟೇ.

ಇದು ಒಂದು ಪ್ರಜಾಪ್ರಭುತ್ವ ವಿಧಿ ವಿಧಾನಕ್ಕೆ ಬಿಜೆಪಿ ನೇತೃತ್ವದ ಸರಕಾರ ಗೌರವ ಕೊಡುವ ರೀತಿ. ನಿಜ ಸಂಗತಿಯೆಂದರೆ ಈ ಸರಕಾರಕ್ಕೆ ದೇಶ ಮತ್ತು ಜನಗಳ ಪರವಾಗಿ ಯೋಚಿಸುವ ಶಕ್ತಿಯನ್ನೇ ಕಳಕೊಂಡಂತಿದೆ. ಅವರ ಮೆದುಳು ಐ.ಎಂ.ಎಫ್- ವಿಶ್ವಬ್ಯಾಂಕ್‌ಗಳಿಂದ ಆದೇಶಗಳನ್ನು ಸ್ವೀಕರಿಸಿ ಅದನ್ನು ಜಾರಿಗೆ ತರುವ ಶಕ್ತಿಯಷ್ಟೇ ಉಳಿದಿದೆ. ಆದ್ದರಿಂದಲೇ ಈ ಸರಕಾರ ದೇಶದ ಸ್ವಾವಲಂಬೀ ಬೆಳವಣಿಗೆಗೆ ಅಗತ್ಯವಿರುವ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನೆಲ್ಲಾ ನಾಶ ಮಾಡಲೂ ಹೇಸುತ್ತಿಲ್ಲ. ಈ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತೆ-ಮತ್ತೆ ನಾಚಿಕೆಗೆಟ್ಟ ರೀತಿಯಲ್ಲಿ ‘ಆರ್ಥಿಕ ಉದಾರೀಕರಣ’ಕ್ಕೆ ಹೊಸ ಹೊಸ ದಾರಿ ಗಳನ್ನು ತೆರೆದುಕೊಡುವ ಕರೆ ನೀಡುತ್ತಿದೆ. ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿ ಸುವುದು, ಬಹುಪಾಲು ಜನರನ್ನು ನಿರಾಶೆಯ ಕೂಪದೊಳಗೆ ತಳ್ಳುವುದು ಇವರ ಧರ್ಮವಾಗಿ ಬಿಟ್ಟಂತಿದೆ. ವಿದೇಶಿ ಕಂಪನಿ ಗಳಿಗೆ ಎಷ್ಟು ಸಾಧ್ಯವೋ ಅಷ್ಟು, ಹೆಚ್ಚು ಹಣಕಾಸು ಸೌಲಭ್ಯಗಳನ್ನು ಒದಗಿಸುವ ಒಂದು ಸ್ಪಷ್ಟ ನೀತಿಯನ್ನು ಈ ಸರಕಾರ ತಳೆದಿದೆ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ಬಾಯಿಯಲ್ಲಿ ರಾಮನಾಮ, ಬಗಲಲ್ಲಿ ಕತ್ತಿ ಹಿಡಿದಿರುವ ಈ ಸರಕಾರವನ್ನು ಅಧಿಕಾರದಿಂದ ಜಾಗ ಖಾಲಿ ಮಾಡುವಂತೆ ಮಾಡಬೇಕಾದ ಸಮಯವೀಗ ಬಂದಿದೆ.

(ಐಎನ್‌ಎನ್)

ಒರಿಸ್ಸಾದಲ್ಲಿ ಮೂರನೇ ಪರ್ಯಾಯವನ್ನು ಬಲಿಷ್ಟಗೊಳಿಸುವ ಪ್ರಚಾರ ಆರಂಭ

ಒರಿಸ್ಸಾದಲ್ಲಿ ಎಡ, ಪ್ರಜಾಸತ್ತಾತ್ಮಕ ಜಾತ್ಯಾತಿತ ಪರ್ಯಾಯವನ್ನು ಬಲಪಡಿಸಲು ರಾಜ್ಯದ ಜನತಾದಳ, ಸಿಪಿಐ(ಎಂ) ಹಾಗೂ ಜನವರಿ 20 ರಂದು ಸಾಮೂಹಿಕ ಜಾಗೃತಿ ಪ್ರಚಾರವನ್ನು ಆರಂಭಿಸಿವೆ. ಪ್ರಥಮ ಸ್ವಾತಂತ್ರ್ಯ ಸಮರದಲ್ಲಿ ರಾಣಿ ಲಕ್ಷ್ಮಿಬಾಯಿ ಬ್ರಿಟಿಷರ ವಿರುದ್ಧ ನಡೆಸಿದ ಬಂಡಾಯದ ಪ್ರಮುಖ ಸಂಘಟಕ ಮಂಗಲ ಪಾಂಡೆ ಹುತಾತ್ಮರಾದ ದಿನದಂದು ಅದು ಆರಂಭವಾಯಿತು. ಈ ಕಾರ್ಯಕ್ರಮದ ಮೊದಲ ಘಟ್ಟ ಗಾಂಧೀಜಿ ಆರ್.ಎಸ್.ಎಸ್. ಪ್ರೇರಿತ ಕೋಮುವಾದಿಯ ಗುಂಡಿಗೆ ಬಲಿಯಾದ ಜನವರಿ 30 ರಂದು ಮುಕ್ತಾಯಗೊಂಡಿತು.

ರೂರ್ಕೇಲಾದಿಂದ ಇದನ್ನು ಆರಂಭಿಸಲು ಕಾರಣ ಈ ನಗರ ಒರಿಸ್ಸಾದ ಆಧುನೀಕರಣದ ಹೆಬ್ಬಾಗಿಲು ಎನಿಸಿಕೊಂಡಿದೆ. ಇಂದು ಇಲ್ಲಿಯ ಉಕ್ಕು ಸ್ಥಾವರ ಕೇಂದ್ರ ಸರ್ಕಾರದ ದೇಶ ವಿರೋಧಿ ಜನ ವಿರೋಧಿ ನೀತಿಗಳಿಂದ ಸೊರಗಲಾರಂಭಿಸಿದೆ. ಇದರಿಂದ ಇಲ್ಲಿ ಉದ್ಯೋಗವ ಕಾಶ ಕುಂಠಿತಗೊಳ್ಳುತ್ತಿದೆ. ನಿರುದ್ಯೋಗ ಹೆಚ್ಚುತ್ತಿದೆ. ಬಿಜು ಜನತಾದಳದ ಅಧ್ಯಕ್ಷ ವಾಜಪೇಯಿ ಸಂಪುಟದಲ್ಲಿ ಉಕ್ಕು ಮತ್ತು ಗಣಿ ಮಂತ್ರಿ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅಲ್ಲದೆ ಕೇಂದ್ರ ಕಲ್ಲಿದ್ದಲು ಮಂತ್ರಿ ಬಿಜೆಪಿಯ ದಿಲೀಪ್ ರಾಯ್ ಇದೇ ಪ್ರದೇಶದವರು. ಬಿಜೆಪಿಯ ರಾಜ್ಯ ಅಧ್ಯಕ್ಷ ಜುಯೆಲ್ ಒರಂ ಇಲ್ಲಿಯ ಎಂ.ಪಿ. ಈ ಉಕ್ಕಿನ ನಗರದ ಬೀದಿಗಳಲ್ಲಿ ಮೆರವಣಿಗೆಯ ನಂತರ ಟೆಲಿಫೋನ್ ಭವನದ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಸಿಪಿಐ(ಎಂ)ನ ಬಿಷ್ಣು ಮೊಹಂತಿ ಜನತಾದಳದ ನಿಹಾರ್ ರಾಯ್ ಹಾಗೂ ಸಿಪಿಐ ಅಶೋಕ ದಾಸ್ ಇದ್ದ ಅಧ್ಯಕ್ಷ ಮಂಡಳಿ ಸಭೆಯನ್ನು ನಡೆಸಿಕೊಟ್ಟಿತು. ಡಿಸೆಂಬರ್ 11 ರಂದು ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಹಾಗೂ ಈ ವರ್ಷ ಜನವರಿ 13 ರಂದು ಕಾಂಗ್ರೆಸ್ ರಾಜ್ಯ ಸರಕಾರದ ನೀತಿಗಳು ಹಾಗೂ ಹದ ಗೆಡುತ್ತಿರುವ ಕಾನೂನು ವ್ಯವಸ್ಥೆಯ ವಿರುದ್ಧ ಬಂದ್‌ಗಳನ್ನು ಯಶಸ್ವಿಗೊಳಿಸಿದ ರಾಜ್ಯದ ಜನತೆಯನ್ನು ಅಭಿನಂದಿಸಿದ ಭಾಷಣಕಾ ರರು ಈ ಎರಡು ಯಶಸ್ವೀ ಸಾಮೂಹಿಕ ಕಾರ್ಯಾಚರಣೆಗಳು ಒರಿಸ್ಸಾದಲ್ಲಿ ಮೂರನೇ ಪರ್ಯಾಯವನ್ನು ಗಟ್ಟಿಗೊಳಿ ಸುವ ಕೆಲಸಕ್ಕೆ ಅಡಿಗಲ್ಲು ಹಾಕಿವೆ ಎಂದರು.

ಸಾಕರತೆ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸಾಮೂಹಿಕ ಆಂದೋಲನಗಳು

ಪಶ್ಚಿಮ ಬಂಗಾಳ ಎಡಪಕ್ಷಗಳ ನಿರ್ಧಾರ

ಜನವರಿ ಅಂತ್ಯದಲ್ಲಿ ಕಲ್ಕತ್ತೆಯ ಮುಝುಪ್ಫರ್ ಭವನದಲ್ಲಿ ನಡೆದ ಸಭೆಯಲ್ಲಿ ಪಶ್ಚಿಮಬಂಗಾಳದ ಎಡರಂಗ ರಾಜ್ಯದಲ್ಲಿ ಸಾಕ್ಷರತೆ, ಶಿಕ್ಷಣ ಹಾಗೂ ಸಾರ್ವಜನಿಕ ಆರೋಗ್ಯ ಸೌಲಭ್ಯಗಳನ್ನು ತ್ವರಿತವಾಗಿ ವಿಸ್ತರಿಸಲು ರಾಜ್ಯವ್ಯಾಪಿ ಆಂದೋಳನಗಳನ್ನು ಆರಂಭಿಸಲು ಕರೆನೀಡಿದೆ. ಈ ದೊಡ್ಡ ಹಾಗೂ ಮಹತ್ವದ ಕಾರ್ಯಸಾಧನೆಗಾಗಿ ಒಂದು ಸಮಯಬದ್ಧ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಎಡರಂಗದ ಅಧ್ಯಕ್ಷ ಶೈಲೆನ್ ದಾಸ್‌ಗುಪ್ತಾ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಐ.ಎನ್.ಎನ್. ಸುದ್ದಿ ಸಂಸ್ಥೆಯೊಡನೆ ಮಾತನಾಡುತ್ತಾ ಶೈಲೆನ್‌ದಾಸ್ ಗುಪ್ತಾ ರವರು ಶಿಕ್ಷಣದ ಬಗ್ಗೆ ಎಡರಂಗದ ಕಣ್ಣೋಟವನ್ನು ಪುನರುಚ್ಛರಿಸಿದರು. ಮೂಲಉದ್ದೇಶ ಈಗಲೂ ಶಿಕ್ಷಣವನ್ನು ಎಷ್ಟು ಸಾಧ್ಯವೋ ಅಷ್ಟು ಜನರಿಗೆ ವಿಸ್ತರಿಸುವುದು, ಅದೇ ವೇಳೆಗೆ ಶಿಕ್ಷಣ ಪ್ರಕ್ರಿಯೆಯನ್ನು ಎಷ್ಟು ಸಾಧ್ಯವೋ ಅಷ್ಟು ಆಧುನಿಕ ಗೊಳಿಸುವುದು, ಸಕಾಲಿಕ ಗೊಳಿಸುವುದು. ಎಡರಂಗ ಒಂದುವರೆ ದಶಕಗಳಕಾಲ ಅಧಿಕಾರದಲ್ಲಿದ್ದರೂ ಶಿಕ್ಷಣ ರಂಗದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯಾಗಿಲ್ಲ ಎಂಬುದು 1991 ರ ಜನಗಣತಿ ಅಂಕೆ ಸಂಖ್ಯೆಗಳಿಂದ ಕಂಡು ಬರುತ್ತದೆ. ಯಾವ ಸನ್ನಿವೇಶದಲ್ಲಿ ಹೀಗಾಯಿತು ಎಂಬುದನ್ನು ಎಡರಂಗದ ಈ ಸಭೆ ಪರಿಶೀಲಿಸಿತು. ಕಾಂಗ್ರೆಸಿನ ದುರಾಡಳಿತದ ದುಷ್ಫಲ ಹಾಗೂ ದುರ್ಬಲ ಮೂಲಭೂತ ರಚನೆ ಇದು ಎಡರಂಗ ಅಧಿಕಾರಕ್ಕೆ ಬಂದಾಗ ಪಡೆದದ್ದು. ಭೂತಕಾಲದ ಈ ಹೊರೆಯಿಂದಾಗಿ ಬಂಗಾಳದಲ್ಲಿ ಶಿಕ್ಷಣ ರಂಗದಲ್ಲಿ ಬೆಳವಣಿಗೆಯಲ್ಲಿ ಬೇರೆ ವಿಷಯಗಳಿಗೆ ಹೋಲಿಸಿದರೆ ನಿಧಾನಗತಿ ಕಂಡು ಬಂತು ಎಂದು ಶೈಲೆನ್ ದಾಸ್‌ಗುಪ್ತಾ ಹೇಳಿದರು.

ನಂತರ ಜನಗಳ ಹೆಚ್ಚುತ್ತಿರುವ ಪ್ರಜ್ಞಾಮಟ್ಟ ಈ ರಾಜ್ಯಗಳಿಸಿದ ಸೀಮಿತ ಹಣಕಾಸುಗಳಿಕೆ ಹಾಗೂ ಶಿಕ್ಷಣದ ತ್ವರಿತ ಪ್ರಚಾರಕ್ಕೆ ಪೂರಕವಾದ ಒಂದು ವಾತಾವರಣದ ಸೃಷ್ಟಿ ಇವೆಲ್ಲದುಗಳಿಂದಾಗಿ ಎಡರಂಗ ಮತ್ತು ಎಡರಂಗ ಸರಕಾರದ ಮುಂದೆ ಹೊಸ ಸವಾಲುಗಳು ಬಂದವು. ಈಗ ಈ ರಾಜ್ಯವನ್ನು ಒಂಭತ್ತನೇ ಯೋಜನೆಯ ಅವಧಿಯೊಳಗೆ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಇರುವ ಪೂರ್ಣ ಸಾಕ್ಷರ ರಾಜ್ಯವಾಗಿಸುವತ್ತ ಕಾರ್ಯಕ್ರಮವನ್ನು ರೂಪಿಸುವ ಸಮಯ ಬಂದಿದೆ ಎಂದು ಎಡರಂಗದ ಈ ಸಭೆ ಅಭಿಪ್ರಾಯಪಟ್ಟಿತು. ಅಂದರೆ ಇನ್ನು ಎರಡು ವರ್ಷಗಳಲ್ಲಿ ಎಡರಂಗ ತನ್ನ ಮುಂದಿಟ್ಟುಕೊಂಡ ಈ ಕಾರ್ಯಕ್ರಮವನ್ನು ಪೂರೈಸಬೇಕಾಗಿದೆ ಎಂದರು ಶೈಲೆನ್ ದಾಸ್‌ಗುಪ್ತಾ.

ಬಿಮನ್ ಬಸು ಮತ್ತು ಪಂಚಾಯತ್ ಮಂತ್ರಿ ಸೂರ್ಯಕಾಂತ್ ಮಿಶ್ರಾ ಈ ಇಡೀ ಕಾರ್ಯಕ್ರಮದ ಪ್ರಸ್ತುತತೆಯನ್ನು ವಿವರಿಸಿದರು. ವಿವರವಾದ ಫಲಪ್ರದ ಚರ್ಚೆಯ ನಂತರ ಮೂಡಿಬಂದ ಪ್ರಸ್ತಾವಗಳು ಹೀಗಿವೆ.

- ರಾಜ್ಯಾದ್ಯಂತ ಪ್ರಾಥಮಿಕ ಶಾಲೆಗಳನ್ನು ತೆರೆಯುವ, ಶಾಲಾ ವ್ಯವಸ್ಥೆಯನ್ನು ಸುಧಾರಿಸುವ ಪ್ರಕ್ರಿಯೆ ಮುಂದುವರೆಯುತ್ತದೆ. ಎಡರಂಗದ ಹಣಕಾಸು ಮಿತಿಗಳು ಹಾಗೂ ಜಿಲ್ಲೆಗಳು ಮತ್ತು ಅದಕ್ಕೆ ಕೆಳಮಟ್ಟದಲ್ಲಿನ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಶಿಕ್ಷಕರನ್ನು ಹೊಂದುವ ಪ್ರಯತ್ನವೂ ಮುಂದುವರಿಯುತ್ತದೆ.
- ಪಂಚಾಯತುಗಳು ನಡೆಸುವ ಮಕ್ಕಳ ಶಿಕ್ಷಣ ಕೇಂದ್ರಗಳನ್ನು ಇನ್ನಷ್ಟು ಬಲಪಡಿಸಿ ವಿಸ್ತರಿಸಬೇಕು.
- ಒಂಭತ್ತು ವರ್ಷಕ್ಕಿಂತ ಹೆಚ್ಚು ವಯಸ್ಸಾದ ಮಕ್ಕಳನ್ನೆಲ್ಲಾ ಒಂದಿಲ್ಲೊಂದು ರೀತಿಯಲ್ಲಿ ಶಾಲಾವ್ಯವಸ್ಥೆಯ ಹೊರಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಒಳಗೊಳ್ಳುವಂತೆ ಮಾಡಬೇಕು. ನಗರ ಪ್ರದೇಶಗಳಲ್ಲಿ ಕಾರ್ಮಿಕರ ಮಕ್ಕಳಿಗಾಗಿ ನಡೆಸುವ ವಿವಿಧ ಕಲ್ಯಾಣ ಕೇಂದ್ರಗಳ ಕಾರ್ಯ ನಿರ್ವಹಣೆಯ ಕೂಲಂಕುಷ ಪರಿಶೀಲನೆ ನಡೆಸಿ ಮಕ್ಕಳು ಇವುಗಳ ಪ್ರಯೋಜನ ಪಡೆಯುವಂತೆ ನೋಡಿಕೊಳ್ಳಬೇಕು. ಜಿಲ್ಲಾ ಎಡರಂಗ ಸಮಿತಿಗಳು ಈ ಕೆಲಸಕ್ಕೆ ಮಹತ್ವ ನೀಡಬೇಕು. ಇ.ಎಸ್.ಐ., ಜವಾಹರ್ ರೋಜಗಾರ್ ಯೋಜನಾ, ಸಂಸತ್ ಸದಸ್ಯರ ಅಭಿವೃದ್ಧಿ ನಿಧಿ ಇತ್ಯಾದಿ ಮೂಲಗಳಿಂದ ನಿಧಿ ಪಡೆದು ಶಿಕ್ಷಣ ಕೇಂದ್ರಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಮೂಲ ಸೌಲಭ್ಯಗಳನ್ನು ಉತ್ತಮ ಗೊಳಿಸಬೇಕು. ಗ್ರಾಮ ಸಂಸದ್‌ಗಳ ಸುತ್ತ ಒಂದು ವಿವರವಾದ ಸರ್ವೆ ಕೆಲಸ ನಡೆಸಬೇಕು, ವ್ಯಾಪಕ ಪ್ರಮಾಣದಲ್ಲಿ ಪ್ರಚಾರ ಪ್ರಕ್ಷೋಭೆಗಳನ್ನು ನಡೆಸಿ ಸಾಕ್ಷರತಾ ಆಂದೋಲನಕ್ಕೆ ಹೊಸ ಹುರುಪು ತುಂಬಬೇಕು.
- ಅವಿರತ ವೇಗ ಹಾಗೂ ಸ್ಪಷ್ಟ ಕಣ್ಣೋಟದಿಂದ ಮುಂದಿನ ಎರಡು ವರ್ಷಗಳ ಕಾಲ ಇದು ಮುಂದುವರಿಯ ಬೇಕು. ಸಿಗುವ ಎಲ್ಲಾ ಸಂಪನ್ಮೂಲಗಳನ್ನು ಬಳಸಬೇಕು. ಈ ಕೆಲಸದಲ್ಲಿ ಎಲ್ಲಾ ರೀತಿಯ ಸಂಸ್ಥೆಗಳನ್ನು, ಸಂಘಟನೆಗಳನ್ನು ಪಂಚಾಯತುಗಳು, ಮುನಿಸಿಪಾಲಿಸಿಗಳು, ಮಹಾನಗರ ಪಾಲಿಕೆಗಳು, ಬಂಗೀಯ ಸಾಕ್ಷರತಾ ಪ್ರಸಾರ ಸಮಿತಿ, ರಾಜಕೀಯ ಭೇದಭಾವವಿಲ್ಲದೆ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ಮತ್ತು ಸ್ವಯಂಸೇವಾ ಸಂಸ್ಥೆಗಳನ್ನು ಒಳಗೊಳ್ಳಬೇಕು. ಪ್ರತಿಯೊಂದು ಹಳ್ಳಿಯಲ್ಲಿ, ನಗರ-ಪಟ್ಟಣಗಳ ಮೊಹಲ್ಲಾಗಳಲ್ಲಿ ಶಿಕ್ಷಣ ಸಮಿತಿಗಳನ್ನು ರಚಿಸಬೇಕು. ಇದರಲ್ಲಿ ಶಿಕ್ಷಣದ ತ್ವರಿತ ವಿಸ್ತರಣೆಯಲ್ಲಿ ಆಸಕ್ತಿ ಇರುವ ಜನಗಳ ಸಹಕಾರ ಪಡೆಯಬೇಕು. ಸಂಬಂಧಪಟ್ಟ ಪ್ರದೇಶದ ಚುನಾಯಿತ ಪ್ರತಿನಿಧಿಯೊಂದಿಗೆ ಶಿಕ್ಷಣ ಸೌಲಭ್ಯ ಗಳಿಂದ ವಂಚಿತರಾದ ಜನಗಳನ್ನೂ ಈ ಸಮಿತಿಗಳಲ್ಲಿ ಒಳಗೊಳ್ಳಲು ವಿಶೇಷ ಮಹತ್ವ ನೀಡಬೇಕು.
- ಸಾಕ್ಷರತೆಯ ನಂತರದ ಕಾರ್ಯಕ್ರಮದಲ್ಲಿ ವೃತ್ತಿ ಶಿಕ್ಷಣ ಸೇರಿಸಬೇಕು. ಸಂಬಂಧಪಟ್ಟ ಶಿಕ್ಷಣ ಇಲಾಖೆಗಳು ಮಾತ್ರವೇ ಅಲ್ಲ ಎಡರಂಗ ಸರಕಾರದ ಅರಣ್ಯ ತಾಂತ್ರಿಕ ಶಿಕ್ಷಣ, ವಿಜ್ಞಾನ ತಂತ್ರಜ್ಞಾನ, ಆರೋಗ್ಯ ಸಣ್ಣ ಪ್ರಮಾಣದ ಉದ್ದಿಮೆ ಕೃಷಿ, ಸಣ್ಣ ನೀರಾವರಿ, ಪಂಚಾಯತ್, ನಗರ ವ್ಯವಹಾರಗಳು, ಸಹಕಾರಿ, ಪ್ರಾಣಿ ಸಂಪನ್ಮೂಲಗಳು ಮತ್ತು ಸಾಮಾಜಿಕ ಕಲ್ಯಾಣ ಇಲಾಖೆಗಳು ಕೂಡಾ ಈ ಕಾರ್ಯಸಾಧನೆಯಲ್ಲಿ ತೊಡಗಬೇಕು.

ಶಿಕ್ಷಣ ಮತ್ತು ಆರೋಗ್ಯ ಮಾನವಕುಲದ ಜನ್ಮಸಿದ್ಧ ಹಕ್ಕು ಎಂದು ಗುರುತಿಸಬೇಕೆಂಬುದು ಎಡರಂಗದ ದೃಢ ಅಭಿಪ್ರಾಯ ಎಂದ ಶೈಲೆನ್ ದಾಸ್‌ಗುಪ್ತಾ ರವರು ಎಡರಂಗ ಒಂದು ಸ್ಪಷ್ಟ ವರ್ಗ-ಕಣ್ಣೋಟ ಆಧಾರದಲ್ಲಿ ಸಾಮೂಹಿಕ ಆಂದೋಲನವನ್ನು ಕಟ್ಟುವ ಕೆಲಸದಲ್ಲಿ ವಿಶ್ವಾಸವಿಟ್ಟಿದೆ ಎಂದರು. ಸಾಕ್ಷರತೆ ಮತ್ತು ಶಿಕ್ಷಣ ರಂಗದಲ್ಲಿ ಸಾಮೂಹಿಕ ಆಂದೋಲನಗಳು ಶಿಕ್ಷಣ ಮತ್ತು ಆರೋಗ್ಯ ಜನಸಮೂಹಗಳ ಜನ್ಮಸಿದ್ಧ ಹಕ್ಕು ಎಂದು ಮಾನ್ಯತೆಗಳಿಸುವ ಆಂದೋಲನದ ಭಾಗವೆಂದೇ ಕಾಣಲಾಗುವುದು. ಫೆಬ್ರವರಿ 9 ರಂದು ನಡೆಯುವ ರಾಜ್ಯ ಎಡರಂಗದ ಮುಂದಿನ ಸಭೆಯಲ್ಲಿ ಒಂದು ವಿವರವಾದ ಕಾರ್ಯಕ್ರಮವನ್ನು ರೂಪಿಸಲಾಗುವುದು.

(ಐಎನ್‌ಎನ್)

ಪಡಿತರ ಬೆಲೆಯೇರಿಕೆಗೆ ಎಲ್ಲೆಡೆ ಪ್ರತಿಭಟನೆ

ಪಡಿತರ ವ್ಯವಸ್ಥೆಯಲ್ಲಿ ಕೊಡುವ ಅಕ್ಕಿ, ಗೋಧಿ, ಸಕ್ಕರೆಗಳ ಬೆಲೆಯನ್ನು ಭಾರಿ ಪ್ರಮಾಣದಲ್ಲಿ ಏರಿಸಿದ, ಜತೆಗೆ ಯೂರಿಯಾ ಹಾಗೂ ಅಡುಗೆ ಅನಿಲದ ಬೆಲೆಗಳನ್ನು ಏರಿಸಿದ ಬಿಜೆಪಿ-ನೇತೃತ್ವದ ಸರಕಾರದ ದುಷ್ಟ ಕ್ರಮವನ್ನು ವಿರೋಧಿಸಿ ದೇಶಾದ್ಯಂತ ಪ್ರತಿಭಟನೆ ನಡೆಸಬೇಕೆಂಬ ಎಡಪಕ್ಷಗಳ ಕರೆಗೆ ಕರ್ನಾಟಕವೂ ಸೇರಿದಂತೆ ವ್ಯಾಪಕ ಪ್ರತಿಕ್ರಿಯೆ ದೊರೆತಿದೆ. ಬೇರೆ ರಾಜ್ಯಗಳಿಂದ ಕೆಲವು ವರದಿಗಳು



→ ದಿಲ್ಲಿಯಲ್ಲಿ

ದಿಲ್ಲಿಯಲ್ಲಿ ಜಲಫಿರಂಗಿಗಳನ್ನು ಎದುರಿಸಿ ಮತಪ್ರದರ್ಶನ

ಎಡಪಕ್ಷಗಳ ಸಾವಿರಾರು ಕಾರ್ಯಕರ್ತರು ಸಂಸದ್ ಮಾರ್ಗದಲ್ಲಿ ಪ್ರತಿಭಟನೆ ನಡೆಸುವುದನ್ನು ತಡೆಯಲು ಪೋಲೀಸರು ನಿರಂತರವಾಗಿ ಜಲಫಿರಂಗಿಗಳು ಹಾಗೂ ಲಾಠಿಗಳನ್ನು ಬಳಸಿದರೂ ಲೆಕ್ಕಿಸದೆ ಮತ ಪ್ರದರ್ಶನ ನಡೆಸಿದರು. ಕೊನೆಗೆ ಪೋಲಿಸರೇ ತಮ್ಮ ದಮನಕಾರ್ಯ ನಿಲ್ಲಿಸಬೇಕಾಯಿತು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಡಾ. ಎಂ.ಕೆ.ಪಂಧೆ, ಕೇಂದ್ರ ಸಮಿತಿ ಸದಸ್ಯ ಜೋಗಿಂದರ್ ಶರ್ಮ, ಸಿಪಿಐ ರಾಷ್ಟ್ರೀಯ ಕಾರ್ಯದರ್ಶಿ ಅತುಲ್ ಕುಮಾರ್ ಅಂಜಾನ್ ಹಾಗೂ ದಿಲ್ಲಿ ಫಾರ್ವರ್ಡ್ ಬ್ಲಾಕ್ ಮುಖಂಡ ಕೆ.ಪಿ. ಸಿಂಗ್ ಪ್ರತಿಭಟನಾಕಾರರ ನೇತೃತ್ವ ವಹಿಸಿದ್ದರು.

ನಡುಗಿಸುವ ಚಳಿಯಲ್ಲಿ ಜಲಫಿರಂಗಿಗಳಿಂದ ಸತತವಾಗಿ ನೀರಿನ ಧಾರೆ ಬಡಿಯುತ್ತಿದ್ದರೂ ಪ್ರತಿಭಟನಾಕಾರರು ಮುಖ್ಯ ಮಾರ್ಗ ಬಿಟ್ಟು ಕದಲಲಿಲ್ಲ. ಮುಖ್ಯ ಮಾರ್ಗದಲ್ಲೇ ರ್‍ಯಾಲಿಯೂ ನಡೆಯಿತು. ಮುಖಂಡರು ಅದನ್ನುದ್ದೇಶಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಜೋಗಿದಂರ್ ಶರ್ಮ ಜನಸಾಮಾನ್ಯರ ಶಾಂತಿಪೂರ್ಣ ಮತಪ್ರದರ್ಶನವನ್ನು ಕದಲಿಸಬೇಡಿ ಎಂದು ಪೋಲೀಸರಿಗೆ ಎಚ್ಚರಿಕೆ ನೀಡಿದರು. ಪೋಲೀಸರು ತಮ್ಮ ದಕ್ಷತೆಯನ್ನು ರಾಷ್ಟ್ರೀಯ ರಾಜಧಾನಿಯ ಕಾನೂನು ವ್ಯವಸ್ಥೆಯನ್ನು ಸುಧಾರಿಸುವಲ್ಲಿ ತೋರಿಸಲಿ, ನಾಗರೀಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಲು ಅದನ್ನು ವ್ಯರ್ಥಗೊಳಿಸುವುದು ಬೇಡ ಎಂದು ಪಂಧೆಯವರು ಹಂಗಿಸಿದರು. ಬಂಡವಾಳಗಾರರನ್ನು ಸಂತುಷ್ಟ ಪಡಿಸಲು ಸರಕಾರ ಜನಸಾಮಾನ್ಯರ ಮೇಲೆ ಈ ಹೊರೆ ಹೇರಲಿದೆ. ಈ ಸರಕಾರದ ಜನ-ವಿರೋಧಿ ಪ್ರಯತ್ನಗಳ ವಿರುದ್ಧ ಬಲವಾದ ಪ್ರತಿರೋಧ ಕಟ್ಟಬೇಕಾಗಿದೆ. ಈ ದಿಕ್ಕಿನಲ್ಲಿ ಫೆಬ್ರವರಿ 20 ರ ಸಮಾವೇಶ ಒಂದು ಪ್ರಮುಖ ಹೆಜ್ಜೆಯಾಗಲಿದೆ ಎಂದರು ಡಾ.ಪಂಧೆ.

ಬಿಜೆಪಿಯ ಹನ್ನೊಂದು ತಿಂಗಳ ಬ್ಯಾಲೆನ್ಸ್ ಶೀಟ್ ನೋಡಿದಾಗ ಅದು ಆಳ್ವಿಕೆ ನಡೆಸಲು ಅನರ್ಹ ಎಂದು ಸಾಬೀತಾಗುತ್ತದೆ ಎಂದರು ಸಿಪಿಐ ಮುಖಂಡ ಅತುಲ್ ರಂಜನ್ ಅಂಜಾನ್. ಜೀವನಾವಶ್ಯಕ ವಸ್ತು ಗಳ ಬೆಲೆಯೇರಿಕೆ ಬಿಜೆಪಿ ತನ್ನ ವ್ಯಾಪಾರಿಗಳ ನೆಲೆಯನ್ನು ಭದ್ರವಾಗುಳಿಸಿ ಕೊಳ್ಳಲು ಪ್ರಯತ್ನಿಸುತ್ತದೆ ಎಂಬುದನ್ನು ತೋರಿಸಿದೆ ಎಂದರು.

ಪಶ್ಚಿಮಬಂಗಾಳದಲ್ಲಿ ಸಾರ್ವತ್ರಿಕ ಮುಷ್ಕರ

ಪಶ್ಚಿಮ ಬಂಗಾಳದಲ್ಲಿ ಪ್ರತಿಭಟನೆ ಫೆಬ್ರವರಿ 8 ರಂದು ನಡೆಯಿತು. 26 ಕಾರ್ಮಿಕ ಸಂಘಗಳು ಹಾಗೂ ಸಾಮೂಹಿಕ ಸಂಘಟನೆಗಳು ರಾಜ್ಯವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದವು. ಈ ಕರೆಗೆ ಸ್ಪಂದಿಸಿ ಪಶ್ಚಿಮ ಬಂಗಾಳದ ಜನತೆ ಬಿಜೆಪಿ ನೇತೃತ್ವದ ಸರಕಾರದ ನೀತಿಗಳಿಗೆ ಬಲವಾದ ಧಿಕ್ಕಾರ ವ್ಯಕ್ತಪಡಿಸಿದರು. ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್ ಇತ್ಯಾದಿ ಸಂಘಟನೆಗಳು ಮಾತ್ರವಲ್ಲದೆ ಇಂಟಕ್ ಕೂಡಾ ಕಾಂಗ್ರೆಸ್‌ನ ಆದೇಶವನ್ನು ಮೀರಿ ಈ ಸಾರ್ವತ್ರಿಕ ಮುಷ್ಕರದಲ್ಲಿ ಭಾಗವಹಿಸಿತು.

ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಆ ದಿನ ರಾಜ್ಯದಲ್ಲಿ ಹಿಂಸಾಚಾರ ಪ್ರಚೋದಿಸಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಇದಕ್ಕಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ರಾಜ್ಯದ ಜನತೆಯನ್ನು ಅಭಿನಂದಿಸಿದರು. ಬಿಜೆಪಿಯ 'ಸ್ವದೇಶಿ' ಯೆಂದರೆ ಅಕ್ಕಿಯ ಭಂಡಾರ ತುಂಬಿ ತುಳುಕುತ್ತಿದ್ದರೂ ಜನಸಾಮಾನ್ಯರಿಗೆ ಹೊಟ್ಟೆಗೆ ಅನ್ನ ಇಲ್ಲದಂತಹ ಪರಿಸ್ಥಿತಿ, ಜನತೆಗೆ ಉದಾರೀಕರಣದ ಉದಾರ ಡೋಸು - ಇದು ದೇಶದ ಸ್ವಾವಲಂಬನೆಯನ್ನು ಕುಂಠಿತಗೊಳಿಸುವುದನ್ನು ಬಿಟ್ಟು ಬೇರೇನನ್ನೂ ಮಾಡದು, ಈ ರಾಜ್ಯದ ಜನ ಎಂದೂ ತಮ್ಮ ಜೀವನದ ಮೇಲಿನ ಧಾಳಿಗಳನ್ನು ತೆಪ್ಪಗೆ ಎದುರಿಸರು ಎಂದು ಎಡರಂಗದ ಅಧ್ಯಕ್ಷ ಶೈಲೇನ್ ದಾಸ್‌ಗುಪ್ತಾ ಹೇಳಿದ್ದಾರೆ. ಮುಖ್ಯಮಂತ್ರಿ ಜ್ಯೋತಿಬಸುರವರು ಈ ಮುಷ್ಕರ ಬಿಜೆಪಿ ಸರಕಾರಕ್ಕೆ ಸ್ಪಷ್ಟ ಸಂದೇಶ ನೀಡಿದೆ ಎಂದರು, ಗಂಟು ಮೂಟೆ ಕಟ್ಟಿ ಹೊರಟುಹೋಗಿ ಎಂದರು.

ಇಡೀ ಬಂಗಾಳದಲ್ಲಿ ಚಟುವಟಿಕೆಗಳೆಲ್ಲಾ ಸ್ಥಗಿತಗೊಂಡವು. ಕಾರ್ಖಾನೆಗಳು, ಕಚೇರಿಗಳು, ಶಾಲಾ-ಕಾಲೇಜುಗಳು, ಬಂದರುಗಳು, ವಿಮಾನ ನಿಲ್ದಾಣಗಳು, ರೈಲು ನಿಲ್ದಾಣಗಳು ಬಿಕೋ ಎನ್ನುತ್ತಿದ್ದವು. ಕೆಲವೇ ದಿನಗಳ ಹಿಂದೆ ಮುಷ್ಕರದ ಕರೆ ನೀಡಿದರೂ ಜನಸಾಮಾನ್ಯರ ಅದ್ಭುತ ಸ್ಪಂದನ ಈ ಸಾರ್ವತ್ರಿಕ ಮುಷ್ಕರದ ಮಹತ್ವದ ಅಂಶ ಎಂದು ಐಎನ್‌ಎಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ತ್ರಿಪುರಾದಲ್ಲೂ ಬೃಹತ್ ಮುಷ್ಕರ

ತ್ರಿಪುರಾ ರಾಜ್ಯದಲ್ಲೂ ಎಡರಂಗದ ಕರೆಗಳ ಮೇರೆಗೆ ಎಲ್ಲಾ ಚಟುವಟಿಕೆಗಳು ಸ್ಥಗಿತಗೊಂಡವು. ಶಾಲಾ-ಕಾಲೇಜುಗಳು, ಕಚೇರಿಗಳು ಸ್ತಬ್ಧಗೊಂಡವು. ವಾಹನ ಸಂಚಾರವಿರಲಿಲ್ಲ. ಅಂಗಡಿ, ಮಾರುಕಟ್ಟೆಗಳು ತೆರೆಯಲಿಲ್ಲ. ವಿಮಾನ ಸಂಚಾರವೂ ಇರಲಿಲ್ಲ.

ತದ್ವಿರುದ್ಧವಾಗಿ ಬಿಜೆಪಿ ಸರಕಾರ ಬೆಲೆಯೇರಿಕೆ ನೀತಿಗಳ ಬಗ್ಗೆಯಾಗಲೀ, ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆಯಾಗಲೀ ತುಟಿಪಿಟಿಕ್ಕೆನ್ನದ ಇಲ್ಲಿಯ ಕಾಂಗ್ರೆಸ್ ಎಡರಂಗ ಸರ್ಕಾರದ ರಾಜೀನಾಮೆ ಒತ್ತಾಯಿಸಿ ಹಿಂದಿನ ದಿನವೇ ಬಂದ್ ಕರೆ ನೀಡಿತ್ತು ಎಂಬುದು ಇಲ್ಲಿ ಗಮನಾರ್ಹ.

ಅಸ್ಸಾಂನಲ್ಲಿ ನಾಲ್ಕು ಪಕ್ಷಗಳ ಜಂಟಿ ಪ್ರತಿಭಟನೆ

ಎಡಪಕ್ಷಗಳ ಕರೆಯ ಮೇರೆಗೆ ಅಸ್ಸಾಂನ ನಾಲ್ಕು ಪಕ್ಷಗಳ ಮೈತ್ರಿ ಕೂಟದ ಕಾರ್ಯಕರ್ತರು ರಾಜ್ಯಾದ್ಯಂತ ಜಂಟಿಯಾಗಿ ಕಾರ್ಯಾಚರಣೆ ನಡೆಸಿದರು.

ರಾಜಧಾನಿ ಗುವಾಹಾಟಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸಿಪಿಐ(ಎಂ), ಸಿಪಿಐ, ಎಜಿಪಿ ಹಾಗೂ ಯು.ಪಿ.ಪಿ.ಎ. ಮುಖಂಡರು ಮಾತನಾಡಿದರು. ಆರ್ಥಿಕ ರಂಗಗಳಲ್ಲಿ ಕಾಂಗ್ರೆಸ್ ನ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ಬಿಜೆಪಿ ಸರಕಾರ ಮುಂದೆ ಸಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹೇಮೆನ್ ದಾಸ್ ಟೀಕಿಸಿದರು. ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟದ ಮುಂದುವರಿಕೆ ದೇಶಕ್ಕೂ, ಜನಗಳಿಗೂ ವಿನಾಶಕಾರಿ ಎಂದು ಎ.ಜಿ.ಪಿ. ಮುಖಂಡ ಹಾಗೂ ಮಂತ್ರಿ ಬಿರಜ್ ಕುಮಾರ್ ಶರ್ಮ ಹೇಳಿದರು.

ರಾಜ್ಯದ ಇತರೆಡೆಗಳಲ್ಲೂ ಇಂತಹ ಪ್ರತಿಭಟನಾ ಸಭೆಗಳು, ಮೆರವಣಿಗೆಗಳು, ಧರಣಾ ಇತ್ಯಾದಿಗಳು ನಡೆದ ಸುದ್ದಿಗಳು ಬರುತ್ತಿವೆ.

ತಮಿಳುನಾಡಿನಲ್ಲಿ ವ್ಯಾಪಕ ಪ್ರತಿಭಟನೆ

ಡಿ.ಎಂ.ಕೆ., ಟಿ.ಎಂ.ಸಿ. ಹಾಗೂ ಜನತಾದಳಗಳೂ ಸಿಪಿಐ ಹಾಗೂ ಸಿಪಿಐ (ಎಂ)ನೊಂದಿಗೆ ಈ ಪ್ರತಿಭಟನಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ರಾಜ್ಯದ ಹಲವೆಡೆ ಮತ ಪ್ರದರ್ಶನಗಳು ನಡೆದವು.

ಚೆನ್ನೈನಲ್ಲಿ ದಕ್ಷಿಣ ರೈಲ್ವೆ ಮುಖ್ಯ ಕಚೇರಿಯೆದುರು ಜಂಟಿ ಮತ ಪ್ರದರ್ಶನ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಆರ್.ನಲ್ಲಕಣ್ಣು, ಸಿಪಿಐ ರಾಜ್ಯ ಕಾರ್ಯದರ್ಶಿ ಜಿ.ಎ.ವಡಿವೇಲು, ಜನತಾದಳ ರಾಜ್ಯ ಅಧ್ಯಕ್ಷ ಸಿ.ಅಪ್ಪ ಸ್ವಾಮಿ, ಡಿಎಂಕೆ, ಟಿಎಂಸಿ ಸಂಸತ್ ಸದಸ್ಯರಾದ ವಿರುತಲೈ ವಿರುಂಬಿ ಮತ್ತು ಪೀಟರ್ ಅಲ್ಫೋಂಸ್ ಮಾತನಾಡಿದರು. ಅಕ್ಕಿ, ಗೋಧಿ, ಯೂರಿಯದ ಚೀಲಗಳು ಹಾಗೂ ಗ್ಯಾಸ್ ಸಿಲಿಂಡರ್‌ನ್ನು ಒಂದು ವ್ಯಾನಿನ ಮೇಲೆ ಇಟ್ಟು ಮತಪ್ರದರ್ಶನ ನಡೆಸಲಾಯಿತು. ಕೊಯಮತ್ತೂರು, ಸೇಲಂ, ಮಧುರೈ, ತಿರುಚಿ, ನಮಕ್ಕಲ್ ಕಡಲೂರು. ತಿರುನ ಲ್ವೇಲಿ, ತಂಜಾವೂರುಗಳಲ್ಲಿ ಮೆರವಣಿಗೆಗಳನ್ನು ನಡೆಸಲಾಯಿತು. ಈ ಎಲ್ಲಾ ಪಕ್ಷಗಳ ಜಿಲ್ಲಾ ಮುಖಂಡರುಗಳು, ಎಂ.ಎಲ್.ಎ.ಗಳು ಇವುಗಳಲ್ಲಿ ಭಾಗವಹಿಸಿದ್ದರು.

ಕೇರಳದಲ್ಲಿ: ಜನಜೀವನ ಸ್ತಬ್ಧಗೊಳಿಸಿದ ಹರತಾಳ

ಕೇರಳದಲ್ಲಿ ಜನಜೀವನ ಸಂಪೂರ್ಣ ಸ್ತಬ್ಧಗೊಂಡಿತು. ಎಲ್.ಡಿ.ಎಫ್. ಕರೆಗೆ ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರ ಮತ್ತು ಹರತಾಳ ನಡೆಯಿತು. ಪ್ರತಿಭಟನೆಯಲ್ಲಿ ಭಾಗವಹಿಸದವರಿಗೆ ಪೋಲೀಸರು ರಕ್ಷಣೆ ಕೊಡಬೇಕೆಂದು ಹೈಕೋರ್ಟ್ ಆದೇಶ ಹೊರಡಿಸಿದ್ದರೂ, ಅಂಗಡಿಗಳೆಲ್ಲಾ ಮುಚ್ಚಿದ್ದವು. ಖಾಸಗಿ ವಾಹನಗಳು ರಸ್ತೆಗೇ ಬರಲಿಲ್ಲ. ಬಂದ್ ನಡೆಯುತ್ತಿದ್ದಂತೆ ಕಾಣುತ್ತಿತ್ತು ಎಂದು ಪತ್ರಿಕೆಗಳು ವರದಿ ಮಾಡಿವೆ. ಆದೇಶ ಅರ್ಥಹೀನವಾದಂತಿತ್ತು.

ರಾಜ್ಯದ ಹೆಚ್ಚಿನ ಹೆದ್ದಾರಿಗಳು ನಿರ್ಜನವಾಗಿದ್ದವು. ಸರ್ಕಾರಿ ಕಚೇರಿಗಳು, ಬ್ಯಾಂಕುಗಳಲ್ಲಿ ಹಾಜರಾತಿ ಬಹಳ ಕಮ್ಮಿಯಿತ್ತು. ಶಿಕ್ಷಣ ಸಂಸ್ಥೆಗಳು, ಮಾರುಕಟ್ಟೆಗಳು ಮುಚ್ಚಿದ್ದವು. ಈ ರೀತಿ ಸಾರ್ವತ್ರಿಕ ಮುಷ್ಕರ ಹಾಗೂ ಹರತಾಳವನ್ನು ಸಂಪೂರ್ಣ ಯಶಸ್ವಿಗೊಳಿಸಿ ಬಿಜೆಪಿ ಸರಕಾರದ ಈ ಬೆಲೆಯೇರಿಕೆ ನೀತಿಯ ವಿರುದ್ಧ ಅತ್ಯಂತ ದೃಢವಾದ ರೀತಿ ಯಲ್ಲಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ ರಾಜಕೀಯ ಪಕ್ಷಗಳು ಹಾಗೂ ಸಂಘಟನೆ ಗಳನ್ನು ಎಲ್.ಡಿ.ಎಫ್. ಸಂಚಾಲಕರಾದ ವಿ.ಎಸ್.ಅಚ್ಯುತಾನಂದನ್ ಅಭಿನಂದಿಸಿದರು.

ಹಸಿರು ಕಾರ್ಡ್‌ಗಾಗಿ ಯಶಸ್ವಿ ಹೋರಾಟ

ದೇವದುರ್ಗ ತಾಲೂಕಿನ ಜಾಲಹಳ್ಳಿಯ ಗ್ರಾಮಸ್ಥರು ಹಸಿರು ಪಡಿತರ ಚೀಟಿ ಸೇರಿದಂತೆ ಹಲವು ಅಗತ್ಯ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಜನವರಿ 8 ರಂದು 150 ಮಹಿಳೆಯರು ಒಳಗೊಂಡಂತೆ 800 ಗ್ರಾಮಸ್ಥರು ಮೆರವಣಿಗೆ ನಡೆಸಿ ಸ್ಥಳದಲ್ಲಿಯೇ ಹಸಿರು ಕಾರ್ಡ ಪಡೆದರು.

ಕರ್ನಾಟಕ ಪ್ರಾಂತ ರೈತ ಸಂಘ ಸಂಘಟಿಸಿದ ಈ ಮೆರವಣಿಗೆಗಾರರ ಮುಖ್ಯ ಬೇಡಿಕೆಗಳೆಂದರೆ ಹಸಿರು ಕಾರ್ಡ್ ನಿಯಮಿತವಾಗಿ ನ್ಯಾಯಬೆಲೆ ಪಡಿತರ ವಸ್ತು ಒದಗಿಸಬೇಕು, ರಸ್ತೆಗಳಿಗೆ ಡಾಂಬರು ಹಾಕಿಸಬೇಕು, ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಸೇರಿದಂತೆ 2 ತಿಂಗಳಿಂದ ಆಹಾರ ಧಾನ್ಯ ಹಂಚದಿರುವ ದೊಡ್ಡಳ್ಳಿ ಬಸಂತರಾಜ್ ನ್ಯಾಯಬೆಲೆ ಅಂಗಡಿಯ ಪರವಾನಿಗೆ ರದ್ದುಗೊಳಿಸಬೇಕು.

ಮನವಿ ಸ್ವೀಕರಿಸಿದ ತಹಸಿಲ್ದಾರರು ಸ್ಥಳದಲ್ಲಿ ಅರ್ಹರಿಗೆ ಹಸಿರು ಕಾರ್ಡ್ ವಿತರಿಸಿದರು. ಇನ್ನುಳಿದ ಸಮಸ್ಯೆಗಳನ್ನು ಕೂಡಲೇ ಬಗೆಹರಿಸುವುದಾಗಿ ಭರವಸೆ ನೀಡಿದರು.

ಮೆರವಣಿಗೆಯು ರೈತ ಸಂಘದ ಬಸವರಾಜ ತಕೋರು, ಅಮರೇಶ ಪೂಜಾರಿ, ಎಸ್.ಎಫ್.ಐ.ನ ತಿಪ್ಪಯ್ಯನಾಯಕ, ಡಿ.ವೈ.ಎಫ್.ಐ.ನ ಸಿ. ಎಸ್. ನಾಡಗೌಡ, ಸಿಐಟಿಯು ಮುಖಂಡ ಪಿ. ಗಿರಿಯಪ್ಪ ನೇತೃತ್ವದಲ್ಲಿ ನಡೆಯಿತು.

ಬಸ್ ಸಂಚಾರ ಆರಂಭ- ಸಿಪಿಐ(ಎಂ) ಅಭಿನಂದನೆ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ತೀರಾ ಹಿಂದುಳಿದ ಗ್ರಾಮ ಮಾವಿನಕುರ್ವಾಕ್ಕೆ ಇತ್ತೀಚಿಗೆ ಬಸ್ ಸಂಚಾರ ಆರಂಭವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಶ್ರಮಿಸಿದ ಎಲ್ಲರಿಗೂ ಸಿಪಿಐ(ಎಂ) ಹೊನ್ನಾವರ ಸಮಿತಿ ಅಭಿನಂದಿಸಿದೆ.

ಊರಿಗೆ ಬಸ್ ಸಂಚಾರ ಆರಂಭಿಸಬೇಕೆಂದು ಇತ್ತೀಚಿಗೆ ಹೊನ್ನಾವರದಲ್ಲಿ ನಡೆದ ಸಾರಿಗೆ ಅದಾಲತ್ ಕಾರ್ಯಕ್ರಮದಲ್ಲಿ ಮಾವಿನ ಕುರ್ವಾಗ್ರಾಮ ಪಂಚಾಯತ್ ಅಧ್ಯಕ್ಷರಾದ ತಿಲಕ್ ಗೌಡ ಗ್ರಾಮಸ್ಥರ ಪರವಾಗಿ ಬಸ್ ಸಂಚಾರ ಆರಂಭಿಸುವಂತೆ ಒತ್ತಾಯಿಸಿದ್ದರು.

ಹೊಗೆ ಸೊಪ್ಪಿಗೆ ಲಾಭದಾಯಕ ಬೆಲೆಗೆ ಡಿವೈಎಫ್‌ಐ ಒತ್ತಾಯ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್(ಡಿ.ವೈ.ಎಫ್.ಐ.) ನ 5ನೇ ಮೈಸೂರು ಜಿಲ್ಲಾ ಸಮ್ಮೇಳನವು ಜಿಲ್ಲೆಯ ಭತ್ತದ ಕಣಜವಾದ ಕೃಷ್ಣರಾಜನಗರದಲ್ಲಿ ಯಶಸ್ವಿಯಾಗಿ ಜರುಗಿತು.

ಜನವರಿ 9-10 ರಂದು ಇಲ್ಲಿನ ಕೃಷ್ಣಮಂದಿರದಲ್ಲಿ ನಡೆದ ಸಮ್ಮೇಳನವನ್ನು ರಾಜ್ಯ ಕಾರ್‍ಯದರ್ಶಿಗಳಾದ ಎಸ್.ವೈ. ಗುರುಶಾಂತ್ ರವರು ಉದ್ಘಾಟಿಸಿ ದೇಶದ ಐಕ್ಯತೆ ಮಾರಕವಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಯುವಜನರು ಸನ್ನದ್ಧರಾಗಬೇಕೆಂದು ಕರೆನೀಡಿದರು. ಮುಖ್ಯ ಅಥಿತಿಗಳಾಗಿ ಶಾಸಕರಾದ ಎಸ್. ನಂಜಪ್ಪ ಭಾಗವಹಿಸಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸ್ವಾಗತ ಮಿತಿಯ ಅಧ್ಯಕ್ಷರಾದ ಮಹದೊತ್ರರವರು ವಹಿಸಿದ್ದರು. ಆರಂಭದಲ್ಲಿ ಸ್ವಾಗತ ಸಮಿತಿಯ ಕಾರ್ಯದರ್ಶಿಯವರಾದ ಎಸ್. ದೇವ ಸ್ವಾಗತಿಸಿದರು. ಸಹಕಾರ್ಯದರ್ಶಿ ಕೆ. ಎಚ್. ಗೀರಿಶ್ ವಂದನಾರ್ಪಣೆ ಮಾಡಿದರು.

ನಂತರ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಜಿಲ್ಲಾ ಸಂಚಾಲಕರಾದ ಸಿ. ಮಾರುತಿಯವರು ಮಂಡಿಸಿದ ವರದಿಯ ಮೇಲೆ ಚರ್ಚೆ ಸರ್ವಾನುಮತದಿಂದ ಅಂಗಿಕರಿಸಲಾಯಿತು.

ನಾಗರ ಹೊಳೆಯ ಗಿರಿಜನರನ್ನು ಸ್ಥಳಾಂತರ ಮಾಡಬಾರದು, ಹೊಗೆಸೊಪ್ಪು ಬೆಳೆಗಾರರಿಗೆ ಲಾಭದಾಯಕ ಬೆಲೆ ನೀಡಬೇಕು ಮುಂತಾದ ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿತು.

ಸಮ್ಮೇಳನದ ಅಂಗವಾಗಿ ದಿನಾಂಕ ಜನವರಿ10 ರಂದು ಇತಿಹಾಸ ಸಂಸ್ಕೃತಿ ಮತ್ತು ಕೋಮುವಾದ ಎಂಬ ವಿಷಯದಲ್ಲಿ ವಿಚಾರ ಸಂಕೀರಣ ಏರ್ಪಡಿಸಲಾಗಿತ್ತು. ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿ ಎಸ್. ವೈ. ಗುರುಶಾಂತ್ ಡಿ.ವೈ.ಎಫ್.ಐ. ಮುಖಂಡರಾದ ಕೆ. ಬಸವರಾಜು ವಿಚಾರ ಮಂಡನೆ ಮಾಡಿದರು. ವಿಚಾರ ಗೋಷ್ಠಿಯ ಅಧ್ಯಕ್ಷತೆಯನ್ನು ಸಿ. ಮಾರುತಿ ವಹಿಸಿದ್ದರು.

ನೂತನ ಪದಾಧಿಕಾರಿಗಳು:

ಅಧ್ಯಕ್ಷರು- ಸಿ.ಮಾರುತಿ, ಉಪಾಧ್ಯಕ್ಷರು-ಕೆ. ಬಸವರಾಜು, ಕಾರ್ಯದರ್ಶಿ- ಎಸ್. ದೇವರಾಜು, ಸಹಕಾರ್ಯದರ್ಶಿ-ಫರೂಕ್‌ಅಲಿಖಾನ್, ಖಜಾಂಚಿ- ಡಿ. ಮಹದೇವ, ಜಿಲ್ಲಾ ಸಮಿತಿಯ ಸದಸ್ಯರಾಗಿ ವಿ. ಶ್ರೀನಿವಾಸ್, ವಿ. ಬಸವರಾಜು , ಅಕ್ಬರ್ ಬಾಷಾ, ಕೆಂಪಯ್ಯ, ಕೆ.ಎಚ್. ಗೀರಿಶ್. ಜೆ. ಕುಮಾರ್ ರಾಜಾ ರವರು ಆಯ್ಕೆಯಾದರು.

ವಿದ್ಯುತ್ ಪೂರೈಕೆ ಕಾಲನಿಗದಿಗೆ ರೈತ ಸಂಘದ ಒತ್ತಾಯ

ಅತಿ ಕಡಿಮೆ ವೋಲ್ಟೇಜ್ ನಿಂದ ಜಿಲ್ಲೆಯ ಸಾವಿರಾರು ಪಂಪ್ ಸೆಟ್ ಯಂತ್ರಗಳು ನಾಶವಾಗುತ್ತಿವೆ. ವಿದ್ಯುತ್‌ನ ಅಸಮರ್ಪಕ ಸರಬರಾಜುನಿಂದ ರೈತರ ಬೆಳೆಗಳು ಒಣಗುತ್ತಿದೆ. ಆದ್ದರಿಂದ ಕೆ.ಇ.ಬಿ. ಸರಿಯಾದ ವೋಲ್ಟೇಜ್ ಹಾಗೂ ಶಿಫ್ಟ್ ಅವಧಿಯಲ್ಲಿ ನಿರಂತರತೆ ಗೊತ್ತು ಪಡಿಸುವಂತೆ ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಮೇಲಿನ ಸಮಸ್ಯೆಗಳಿಗೆ ಕೂಡಲೇ ಪರಿಹಾರ ಸೂಚಿಸದಿದ್ದರೆ ಜಿಲ್ಲಾದ್ಯಂತ ಕೆ.ಇ.ಬಿ. ಕಛೇರಿ ಮುಂದೆ ಪ್ರತಿಭಟಿಸಲಾಗುವುದೆಂದು ರೈತ ಸಂಘ ಸರ್ಕಾರಕ್ಕೆ ಎಚ್ಚರಿಸಿದೆ.

27ಲಕ್ಷ ಜರ್ಮನ್ ಕಾರ್ಮಿಕರ ಮುಷ್ಕರ

ಜರ್ಮನಿಯ ಐಜಿ ಮೆಟಲ್ ಯೂನಿಯನ್ ಜಗತ್ತಿನಲ್ಲೇ ಅತಿ ದೊಡ್ಡ ಯೂನಿಯನ್ ಎನ್ನುತ್ತಾರೆ. ಜರ್ಮನಿಯ ಲೋಹ ಮತ್ತು ಇಂಜಿನೀಯರಿಂಗ್ ಕೈಗಾರಿಕೆಯ 27 ಲಕ್ಷ ಕಾರ್ಮಿಕರು ಸೇರಿರುವ ಈ ಯೂನಿಯನ್ ಹೋರಾಟದ ಹಾದಿ ಹಿಡಿದಿದೆ. ಅವರ ಈ ಹೋರಾಟ ಇಡೀ ಜರ್ಮನಿಯ ಆರ್ಥಿಕವನ್ನೇ ಅಲುಗಾಡಿಸುವ ಶಕ್ತಿ ಪಡೆದಿದೆ. ಅವರ ಬೇಡಿಕೆ ಶೇಕಡ 6.5 ವೇತನ ಏರಿಕೆ. ಮಾಲಿಕರ ಸಂಘ ಕೇವಲ ಶೇಕಡಾ 2 ಏರಿಕೆಯನ್ನು ಕೊಡಲು ತಯಾರಿತ್ತು. ಕಾರ್ಮಿಕರು ಕೆಲವು ಗಂಟೆಗಳು ನಡೆಸಿದ ಮುಷ್ಕರದ ನಂತರ 2.3 ಶೇಕಡಾ ಏರಿಕೆಗೆ ಒಪ್ಪಿಕೊಂಡಿತು. ಆದರೆ ಯೂನಿಯನ್‌ಗಳು ತಮ್ಮ ನೇರ ಕಾರ್ಯಾಚರಣೆ ಮುಂದುವರೆಸಿ ತಮ್ಮ ಬೇಡಿಕೆಗೆ ಪಟ್ಟು ಹಿಡಿದಿದ್ದಾರೆ. ಈಗಿನ ಕೆಲವು ಗಂಟೆಗಳ ಸಾಂಕೇತಿಕ ಮುಷ್ಕರ ತಿಂಗಳ ಕೊನೆ ಹೊತ್ತಿಗೆ, ಬೇಡಿಕೆ ಈಡೇರದಿದ್ದರೆ ಪೂರ್ಣ ಪ್ರಮಾಣದ ಮುಷ್ಕರ ಆಗಲಿದೆ.

ಈ ಯೂನಿಯನ್‌ನ ಮುಷ್ಕರದ ಬೆದರಿಕೆ ಎಷ್ಟು ಪ್ರಬಲವಾಗಿದೆ ಎಂದರೆ ಜರ್ಮನಿಯ ಛಾನ್ಸಲರ್ ಶ್ರೋಡರ್ ಮಧ್ಯಸ್ತಿಕೆ ವಹಿಸುವ ಸಾಧ್ಯತೆ ಇದೆ. ಈ ಮುಷ್ಕರ ಛಾನ್ಸಲರ-'ಉದ್ಯೋಗಕ್ಕಾಗಿ ಮೈತ್ರಿ' ಎಂಬ ಕಾರ್ಮಿಕ ಕೈಗಾರಿಕೋದ್ಯಮಿಗಳ ಜಂಟಿ ಸಂಘಟನೆಯನ್ನು ನಾಶಮಾಡೀತು ಎಂಬ ಭಯ ಅವರಿಗೆ.

ಪೋಲೆಂಡ್‌ನಲ್ಲಿ ರೈತರಿಂದ ರಾಸ್ತಾ ರೋಕೊ

ಪೋಲೆಂಡ್‌ನಲ್ಲಿ ಬಂಡವಾಳಶಾಹಿ ಪುನಃ ಸ್ಥಾಪನೆಯ ವಿರುದ್ಧ ಪ್ರತಿರೋಧ ಹೆಚ್ಚುತ್ತಿದೆ. ಪೋಲೆಂಡ್‌ನ ಅತಿ ದೊಡ್ಡ ಕೃಷಿ ಕೂಲಿಕಾರರ, ರೈತರ ಸಂಘಟನೆ ರಾಸ್ತಾ ರೋಕೋ ನಡೆಸಿ ರೈತ - ಕೃಷಿ ಕೂಲಿಕಾರರ ಆರಂಭದ ಪರಿಸ್ಥಿತಿಯತ್ತ ಗಮನ ಸೆಳೆದಿದೆ. ರಶ್ಯಾದ ಬಿಕ್ಕಟ್ಟಿನ ಆರ್ಥಿಕದಿಂದ ದೇಶವನ್ನು ಪ್ರಮುಖ ಕೃಷಿ ರಫ್ತಿನ ತಾಣವಾಗಿ ಹೊಂದಿ ರುವ ಪೋಲೆಂಡ್‌ಗೆ ರಶ್ಯಾದ ತೀವ್ರ ಆರ್ಥಿಕ ಬಿಕ್ಕಟ್ಟಿನ ಬಿಸಿ ತಟ್ಟಿದೆ. ಕೃಷಿ ರಫ್ತು ಸ್ತಬ್ಧವಾಗಿದೆ. ಈ ಬಗ್ಗೆ ಸರ್ಕಾರ ಮಧ್ಯ ಪ್ರವೇಶ ಮಾಡಿ ಕೃಷಿ ಕೂಲಿಕಾರರ, ರೈತರ ಹಿತಾಸಕ್ತಿ ಕಾಪಾಡಬೇಕು ಎಂದು ಅವರ ವಾದ. ಸರ್ಕಾರ ಏನೂ ಮಾಡದ್ದರ ಬಗ್ಗೆ ಕೋಪ. ರಾಸ್ತಾರೋಕೋ ನಿಲ್ಲಿಸಿ ರೈತ - ಕೃಷಿ ಕೂಲಿಕಾರರ ಸಂಘದ ನಾಯಕರು ಮಾತುಕತೆಯಲ್ಲಿ ತೊಡಗಿದ್ದರೂ, ಸರ್ಕಾರದ ಧೋರಣೆ ಬದಲಾಗದಿದ್ದರೆ ರಾಷ್ಟ್ರವ್ಯಾಪಿ ರಾಸ್ತಾರೋಕೋ ಪುನರಾರಂಭಿಸುವುದಾಗಿ ಬೆದರಿಕೆ ಹಾಕಿದ್ದಾರೆ.

ಭಾಷಣ ಮಾಡಿದ್ದಕ್ಕೆ ಜೈಲು, ದಂಡ-ಯಾವದೇಶವಿದು?

ವಿರೋಧ ಪಕ್ಷದ ನಾಯಕ ಸಾರ್ವಜನಿಕ ಸ್ಥಳದಲ್ಲಿ ಭಾಷಣ ಮಾಡಲು ಪ್ರಾರಂಭಿಸುತ್ತಾನೆ. ಪೋಲಿಸರು ಬಂದು ಆತನನ್ನು ಬಂಧಿಸುತ್ತಾರೆ. ಆತನಿಗೆ ಒಂದು ವಾರದ ಜೈಲು ಶಿಕ್ಷೆ ಅಥವಾ 1400 ಡಾಲರು ದಂಡ. ಆತ ಜೈಲಿಗೆ ಹೋಗಲು ನಿರ್ಧರಿಸುತ್ತಾನೆ (ದಂಡ ತೆರುವ ಬದಲು) ಬಿಡುಗಡೆಯಾಗಿ ಬಂದ ಮೇಲೆ ಆತನನ್ನು ಪೋಲಿಸರು ಪುನಃ ಬಂಧಿಸುತ್ತಾರೆ.

ಇದು ಆಫ್ರಿಕಾದ ಯಾವುದೋ ಮೂಲೆಯ ದೇಶದ ಘಟನೆ ಅಲ್ಲ, ಇನ್ನೆಲ್ಲಿಯದು ಅಂದಿರಾ? ಇದರ ವಿರುದ್ಧ ಮಾನವ ಹಕ್ಕುಗಳ ದಮನಕ್ಕೆ ಅಮೇರಿಕ ಆರ್ಥಿಕ ದಿಗ್ಬಂಧನ ಹಾಕುತ್ತೆ ಖಂಡಿತ ಅಂದಿರಾ? ತಪ್ಪು, ಇದು ಸಾಮ್ರಾಜ್ಯಶಾಹಿಗಳ ಪ್ರಕಾರ ಏಶ್ಯಾದ ಹುಲಿಗಳಲ್ಲಿ ಸ್ವರ್ಗ ಸದೃಶ ನಾಡೊಂದರ ಕಥೆ. ಇದು ಸಿಂಗಾಪೂರದಲ್ಲಿ ನಡೆದದ್ದು. ಸಿಂಗಾಪೂರದ ಬಗ್ಗೆ ಗೊತ್ತಿದ್ದವರಿಗೆ ಇದೇನು ಹೊಸತಲ್ಲ. ಸಿಂಗಾಪುರದ ವೈಭವ ಕಣ್ಣು ಕೋರೈಸಿ ಬೇರೆ ಏನೂ ಕಾಣದಿದ್ದ ವರಿಗೆ ಇದು ಹಿಂದೆಂದೂ ಕಾಣದ್ದು.

ಸಿಂಗಾಪೂರ ಮತ್ತು ಬಂಡವಾಳಶಾಹಿ ಜಾಗತೀಕರಣ ತೆರೆದುಕೊಂಡಿರುವ (ಹಲವು ದಶಕಗಳಿಂದ) ಏಕ-ಪಕ್ಷೀಯ ಸರ್ಕಾರ ಇರುವ ಪೋಲೀಸ್ ರಾಜ್ಯ. 60 ದಶಕದಲ್ಲಿ ಸಿಂಗಪೂರ ಹುಟ್ಟಿದಾಗಿನಿಂದ ಈ ದೇಶದಲ್ಲಿ ಒಂದೇ ಪಕ್ಷ ಆಳಿದ್ದು. ಹಲವು ದಶಕಗಳ ಕಾಲ ಒಬ್ಬನೇ ಪ್ರಧಾನ ಮಂತ್ರಿ. ವಿರೋಧಪಕ್ಷ ಇಲ್ಲಿ ಇಲ್ಲವೇ ಇಲ್ಲವೆಂದಲ್ಲ. ಆದರೆ ವಿರೋಧ ಪಕ್ಷಗಳನ್ನು ಕೆಲಸವೇ ಮಾಡಲಿಕ್ಕೆ ಬಿಡದಷ್ಟು ನಿರ್ಬಂಧಗಳು, ಟ್ರೇಡ್‌ಯೂನಿಯನ್‌ಗಳು ಹಾಗೂ ಅದರ ಕಾರ್ಯಕರ್ತರ ಮೇಲೂ ಅಷ್ಟೇ ನಿರ್ಬಂಧಗಳು. ಆದ್ದರಿಂದಲೇ ಇದು ಬಹುರಾಷ್ಟ್ರೀಯ ಕಂಪನಿಗಳಿಗೆ ಸ್ವರ್ಗ.


ಈ ರೀತಿ ಬಂಧನಕ್ಕೊಳಗಾದದ್ದು ಸಿಂಗಾಪುರದ ವಿರೋಧ ಪಕ್ಷ ಸಿಂಗಾಪೂರ ಡೆಮೊಕ್ರಾಟಿಕ್ ಪಾರ್ಟಿಯ ಮಹಾಕಾರ್ಯದರ್ಶಿ ಟೀ ಸುನ್‌ಜುಆನ್. ಆತನ ವಕೀಲ ಶಿಕ್ಷೆಯ ವಿರುದ್ಧ ವಾದಿಸುತ್ತಾ, ರಾಜಕೀಯ ಭಾಷಣವನ್ನು ಸಾರ್ವಜನಿಕ ಮನೋರಂಜನಾ ಕಾಯಿದೆ ಅಡಿ ತರುವ ಹಾಸ್ಯಾಸ್ಪದ ಕಾನೂನು ಇರುವ ಸಿಂಗಾಪುರದಲ್ಲಿ ಈ ಕಾನೂನನ್ನು ಮುರಿಯದೆ ದಾರಿ ಇಲ್ಲ ಎಂದ. ಈ ಹಾಸ್ಯಾಸ್ಪದ ಕಾನೂನಿನ ಪ್ರಕಾರ ರಾಜಕೀಯ ಸಭೆಗಳಿಗೆ ಅನುಮತಿ ಕೇಳಿದರೂ ಅದು ಸಿಗುವುದೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಕಾನೂನು ಒಡೆಯದೆ ಬೇರೆ ದಾರಿ ಇಲ್ಲ. ಇದು ಇನ್ನೊಂದು ವಿರೋಧ ಪಕ್ಷ ಲೇಬರ್ ಪಾರ್ಟಿ ನಾಯಕ ಜೆಯರತ್ನಂ ಅನುಭವ ಸಹ. ಆತ ಪಾರ್ಲಿಮೆಂಟ್ ಸದಸ್ಯನಾದರೂ ಆತನ ಮೇಲೆ ಹಕ್ಕುಚ್ಯುತಿ ಆಪಾದನೆ ಹೊರಿಸಿ ಭಾರಿ ದಂಡಗಳನ್ನು ವಿಧಿಸಿ ಕೆಲಸ ಮಾಡದಂತೆ ಮಾಡಲಾಗಿದೆ. ಆದರೆ ಏಶ್ಯನ್ ಆರ್ಥಿಕ ಬಿಕಟ್ಟಿನ ಹಿನ್ನೆಲೆಯಲ್ಲಿ ಬೇರೆ ಇಂಡೊನೇಶ್ಯಾ, ಮಲೇಶ್ಯಾಗಳಂತೆ ಸಿಂಗಾಪುರದಲ್ಲೂ ಹೊಸ ಗಾಳಿ ಬೀಸ ಹತ್ತಿದೆ. ಹಲವು ದಶಕಗಳ ಈ ಬಂಡವಾಳಶಾಹಿ ರಾಜಕೀಯ ದಬ್ಬಾಳಿಕೆಯನ್ನು ಪ್ರಶ್ನಿಸಲಾಗುತ್ತಿದೆ. ನಿಜವಾದ ಪ್ರಜಾಸತ್ತೆಗೆ ವಿದ್ಯಾರ್ಥಿ ಕಾರ್ಮಿಕರಲ್ಲಿ ಹಾತೊರೆತ ಹೆಚ್ಚಾಗುತ್ತಿದೆ.

ಜೋರ್ಡಾನ್ ದೊರೆ ನಿಧನ

ಜೋರ್ಡಾನ್‌ನ ಆಳಿದ ದೊರೆ ಹುಸೇನ 48 ವರ್ಷಗಳ ಆಳ್ವಿಕೆ ನಂತರ ನಿಧನ ಹೊಂದಿದ್ದಾರೆ. ಕೇವಲ 16 ವರ್ಷದವನಿದ್ದಾಗ ಆತನ ತಾತನ ಕೊಲೆಯಾದಾಗ, ಅಧಿಕಾರಕ್ಕೆ ಬಂದು ಹುಸೇನ್ ದೀರ್ಘ ಕಾಲ ರಾಜ್ಯವಾಳಿದ. ಅರಬ್ ದೇಶಗಳಲ್ಲಿ ಒಂದು ಪ್ರಮುಖ ದೇಶವಾಗಿದ್ದ ಜೋರ್ಡಾನ್‌ನ ದೊರೆ, ತನ್ನ ರಾಜ್ಯದಲ್ಲಿ ನಿಜವಾದ ಪ್ರಜಾಸತ್ತೆ ತಲೆ ಎತ್ತಲು ಬಿಡಲಿಲ್ಲ. ಪ್ಯಾಲೆಸ್ತೈನ್ ಚಳುವಳಿಗೆ, ನಿರಾಶ್ರಿತರಿಗೆ ಆಶ್ರಯ ಒದಗಿಸಿದ್ದ ದೊರೆ ಹುಸೇನ್ ಇತ್ತೀಚೆಗೆ ಅಮೆರಿಕದ ಹಾದಿ ತುಳಿಯಹತ್ತಿದ್ದ.

ರಾಜಪಟ್ಟಕ್ಕೆ ಏರಬೇಕಾಗಿದ್ದ ತನ್ನ ಸೋದರ ಯುವರಾಜ ಹಸನ್ ತನ್ನ ಉತ್ತಾರಾಧಿಕಾರಿಯಲ್ಲ ಎಂದು ಕೊನೆಯ ದಿನಗಳಲ್ಲಿ ಆತ ಸಾರಿದ್ದ - ಎಲ್ಲರಿಗೂ ಆಶ್ಚರ್ಯವಾಗುವ ರೀತಿಯಲ್ಲಿ ತನ್ನ ಹಿರಿಯ ಮಗ 36 ವರ್ಷದ ಅಬ್ದುಲ್ಲಾನನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದಾನೆ. ಸೈನ್ಯದಲ್ಲಿ ಮೇಜರ್ ಜನರಲ್ ಆಗಿದ್ದು ಏನೇನೂ ರಾಜಕೀಯ ಅನುಭವ ಇಲ್ಲದ ಹೊಸ ದೊರೆ ಅಬ್ದುಲ್ಲಾ ಜೋರ್ಡಾನನ್ನು ಈಗಿನ ಕಠಿಣ ಪರಿಸ್ಥಿತಿಯಲ್ಲಿ ಹೇಗೆ ನಿಭಾಯಿಸಿಕೊಂಡು ಹೋಗುತ್ತಾನೆ ಎಂದು ಕಾದು ನೋಡಬೇಕಾಗಿದೆ.

ಜೋರ್ಡಾನ್ ದುರ್ಬಲವಾದರೆ ನೆರೆಯ ಇರಾಕ್, ಇರಾನ್, ಸೌದಿ ಅರೇಬಿಯಾಗಳು ಕಬಳಿಸಲು ನೋಡಬಹುದು. ಜೋರ್ಡಾನ್ ಗೆ ಒಟ್ಟಾರೆ ಅಸ್ಥಿರತೆ ಕಾದಿರುವಂತಿದೆ.



ದಕ್ಷಿಣ - ಪೂರ್ವ ಏಶ್ಯಾದ ಆರ್ಥಿಕತೆಯ ಪರಿಣಾಮ ಆಫ್ರಿಕಾದಲ್ಲಿ!

ಹೌದು! ದಕ್ಷಿಣ - ಪೂರ್ವ ಏಶ್ಯಾದ ಆರ್ಥಿಕ ಬಿಕ್ಕಟ್ಟಿನ ಪರಿಣಾಮ ಆಫ್ರಿಕಾದ ಆರ್ಥಿಕ ಬೆಳವಣಿಗೆ ಮೇಲೆ ಆಗಿದೆ. 96-98 ರ ವರೆಗೆ ಮೂರು ವರ್ಷಗಳು ಶೇಕಡಾ 5.8 ರಷ್ಟು ಬೆಳವಣಿಗೆ ದರ ಕಂಡಿದೆ. ಆಫ್ರಿಕಾ 1998 ರಲ್ಲಿ ಅದರ ಅರ್ಧಕ್ಕೆ ಕುಸಿದಿದೆ - ಅಂದರೆ ಬೆಳವಣಿಗೆ ದರ ಶೇಕಡಾ 3.2 ಕ್ಕೆ ಕುಸಿದಿದೆ. ಆಫ್ರಿಕಾದ ಅಂತರ್‌ರಾಷ್ಟ್ರೀಯ ವ್ಯಾಪಾರದ ಮೇಲೂ ಇದು ಪರಿಣಾಮ ಬೀರಿದೆ. ಈಗ ವಿಶ್ವ ವಾಣಿಜ್ಯದಲ್ಲಿ ಆಫ್ರಿಕಾದ ಮೇಲೆ ತೀವ್ರ ಪರಿಣಾಮ ಬೀರಿದೆ. ಕಚ್ಚಾ ಸಾಮಗ್ರಿಗಳ ರಫ್ತಿನ ಮೇಲೆ ಆಧಾರಿತ ಆಫ್ರಿಕಾದ ವ್ಯಾಪಾರದ ಮೇಲೆ, ಜಾಗತೀಕರಣ -ಉದಾರೀಕರಣ ಬೀರಿರುವ ಪರಿಣಾಮ ಇದು.

ಅರ್ಜೆಂಟಿನಾದ 28 ಸಾವಿರ ಸಣ್ಣ, ಮಧ್ಯಮ ಗಾತ್ರದ ಅಂಗಡಿಗಳ ದಿವಾಳಿ

ಅರ್ಜೆಂಟಿನಾದ ಸುಮಾರು 28 ಸಾವಿರ ಸಣ್ಣ ಮತ್ತು ಮಧ್ಯಮ ಗಾತ್ರದ ಅಂಗಡಿಗಳು ದಿವಾಳಿ ಎದ್ದು ಮುಚ್ಚಿ ಹೋಗಿವೆ. ಇದು ಒಟ್ಟು ಮಾರಾಟದಲ್ಲಿ ಕಾಲುಭಾಗದಷ್ಟು ಕಡಿಮೆ ಆಗಿರುವುದರ ಫಲ. ಇದು ವ್ಯಾಪಾರದಲ್ಲಿ ಈ ದೇಶ ಉದಾರೀಕರಣ ಮಾಡಿದ್ದರ ಫಲ. ಹಲವಾರು ವಿದೇಶಿ ದೈತ್ಯ ಸೂಪರ್ ಸ್ಟೋರ್‌ಗಳು ದೇಶದಲ್ಲಿ ಕಾಲಿಟ್ಟಿದ್ದು, ಸಣ್ಣ-ಮಧ್ಯಮ ಗಾತ್ರದ ಸ್ಥಳೀಯ ಅಂಗಡಿಗಳು ಅವುಗಳ ಪೈಪೋಟಿ ತಾಳದೆ ಮುಚ್ಚಿ ಹೋಗುತ್ತಿವೆ. ಈ ಅಂಗಡಿಗಳು ಶೇಕಡಾ 30 ರಷ್ಟು ವ್ಯಾಪಾರ ಕಳೆದುಕೊಂಡಿವೆ. ವಿದ್ಯುತ್, ನೀರು, ಗ್ಯಾಸ್ ಮತ್ತು ಇತರ ಸಾಮಗ್ರಿ ಸೇವೆಗಳ ಬೆಲೆಯೇರಿಕೆ ತೆರಿಗೆಗಳಿಂದ ಬಳಲುತ್ತಿರುವ ಅರ್ಜೆಂಟಿನಾ ಶ್ರೀಸಾಮಾನ್ಯನ ಕೊಳ್ಳುವ ಶಕ್ತಿ ಮೊಟಕಾಗಿರುವುದೂ ಅಷ್ಟೇ ಕಾರಣ.

ಇಂಡೋನೇಶ್ಯಾ- ರ್‍ಯಾಲಿಗಳ ದೇಶ 1998ರಲ್ಲಿ

1998 ರಲ್ಲಿ ಇಂಡೋನೇಶ್ಯಾ ಅತ್ಯಂತ ಸಮರ ಶೀಲ ರ್‍ಯಾಲಿಗಳ ತವರಾಗಿತ್ತು. 1998 ರಲ್ಲಿ ದೇಶದ ತುಂಬಾ 3700 ರ್‍ಯಾಲಿಗಳನ್ನು ಏರ್ಪಡಿಸಲಾಗಿತ್ತು - ಸುಹಾರ್ತೋ ಆಳ್ವಿಕೆಯ ವಿರುದ್ಧ, ಕಳೆದ 35 ವರ್ಷಗಳಲ್ಲೇ, ಇಂಡೋನೇಶ್ಯಾದಲ್ಲೇ ಇದು ಭಾರೀ ವಿಕ್ರಮ ಸಾಧಿಸಿದೆ. ಇವುಗಳಲ್ಲಿ ಅರ್ಧದಷ್ಟು (1995) ವಿದ್ಯಾರ್ಥಿಗಳು ನಡೆಸಿದರೆ, 496 ಕಾರ್ಮಿಕರು ಮತ್ತು 1287 ಇತರರು ಸಂಘಟಿಸಿದ್ದಾರೆ.

ಪಲಾಯನ ಮಾಡುವ ಬಂಡವಾಳದ ಮೇಲೆ ತೆರಿಗೆ ಮಲೇಶ್ಯಾದಲ್ಲಿ

ಮೂರನೇ ಜಗತ್ತಿನ ದೇಶಗಳಿಂದ ಪಲಾಯನ ಮಾಡುವ ಬಂಡವಾಳದ ಮೇಲೆ ಕಡಿವಾಣ ಹಾಕಲು ಮಲೇಶ್ಯಾ ಯೋಚಿಸಿದೆ. ಮಲೇಶ್ಯಾದಲ್ಲಿ ಹೂಡುವ ಬಂಡವಾಳ ಹಾಗೂ ಲಾಭವನ್ನು ಒಂದು ವರ್ಷದೊಳಗೆ ದೇಶದಿಂದ ಹೊರ ತೆಗೆಯುವುದಾದರೆ ಶೇಕಡಾ 30 ರಷ್ಟು ತೆರಿಗೆ ವಿಧಿಸಲಿದೆ. ಹಣಕಾಸು ಬಂಡವಾಳ ಇರುವ ದೈತ್ಯ ಕಂಪನಿಗಳು ಅಪಾರ ಹಣದಿಂದ ಹಣಕಾಸಿನ ಮಾರುಕಟ್ಟೆ ಜೂಜು ಆಡುವುದರ ಪರಿಣಾಮ ಕಡಿಮೆಗೊಳಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ಎಡ ಪಕ್ಷಗಳ ಪ್ರತಿಭಟನೆ

ಪುಟ 3 ರಿಂದ

ಬಹಿರಂಗ ಸಭೆಯಲ್ಲಿ ರಾಜ್ಯಸಮಿತಿ ಸದಸ್ಯರಾದ ಶಾಂತಾರಾಂ ನಾಯಕ್ ಮಾತನಾಡಿ ದೇಶದ ಜನಸಾಮಾನ್ಯರನ್ನು ಪಾತಾಳಕ್ಕೆ ನೂಕುತ್ತಿರುವ ವಾಜಪೇಯಿ ಸರ್ಕಾರ ರಾಜೀನಾಮೆ ನೀಡುವಂತೆ ಒತ್ತಾಯಿಸಿದರು. ತಹಶಿಲ್ದಾರರ ಮೂಲಕ ರಾಷ್ಟ್ರಪತಿಯವರಿಗೆ ಮನವಿ ಸಲ್ಲಿಸಿ ಪಡಿತರ ವಸ್ತುಗಳ ಬೆಲೆ ಇಳಿಸುವಂತೆ ಒತ್ತಾಯಿಸಿದರು.

ಜಿಲ್ಲಾ ಸಮಿತಿ ಸದಸ್ಯ ತಿಲಕಗೌಡ ಸ್ವಾಗತಿಸಿ, ಸುಭಾಷ ಕೋಪ್ಪಿಕರ ವಂದಿಸಿದರು. ಕಾರ್ಯಕ್ರಮದಲ್ಲಿ ಮಂಜುನಾಥ ಪುಲಕರ, ಮುರುಡೇಶ್ವರ ಶಾಖೆಯ ಚಂದ್ರುನಾಯ್ಕ, ಚಿತ್ರಾಪುರ ಶಾಖೆಯ ನಾಗಪ್ಪ ದೇವಾಡಿಗ, ಮಾವಿನ ಕುರ್ವೆಯ ಶಿವಾನಂದ ನಾಯ್ಕ, ಮುಂಜುನಾಥ ಗೌಡ,ಕಾಸರಗೋಡಿನ ಸೀತಾರಾಮೇಗೌಡ ಮುಂತಾದವರು ಭಾಗವಹಿಸಿದ್ದರು.

ಶಿರಸಿ: ಸಿಪಿಐ(ಎಂ) ನೇತೃತ್ವದಲ್ಲಿ ಕಾರ್ಯಕರ್ತರು ಸೇರಿದಂತೆ ನೂರಾರು ನಾಗರೀಕರು ಜೀವನಾವಶ್ಯಕ ವಸ್ತುಗಳ ಬೆಲೆ ಇಳಿಸುವಂತೆ ಕೇಂದ್ರಸರ್ಕಾರ ಒತ್ತಾಯಿಸುವ ಘೋಷಣೆಗಳ ಮೂಲಕ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

ಪಡಿತರ ವಸ್ತುಗಳು ಹಾಗೂ ಅಡಿಗೆ ಅನಿಲದ ಬೆಲೆ ಏರಿಕೆ ಆಜ್ಞೆಗೆ ವಾಪಸ್ಸಿಗೆ ಹಾಗೂ ಕೇರಳ ಮಾದರಿಯ ಸಾರ್ವಜನಿಕ ವಿತರಣ ವ್ಯವಸ್ಥೆ ಜಾರಿಗೊಳಿಸುವಂತೆ ಕಾರ್ಯದರ್ಶಿ ಪಿ.ಜಿ.ಮುಶಾಲ್ದಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಮರವಣಿಗೆಯಲ್ಲಿ ಪ್ರಾಂತ ರೈತ ಸಂಘದ ಬಂಗಾರೇಶ ಗೌಡ, ಯುವರಾಜ ಕಂಬಾಳಿ ಮಠ, ಈರೇಶ್, ಬಾಲಕೃಷ್ಣ,ಬಸವರಾಜ, ಪ್ರಭಾಕರ ಮುದ್ದು, ಜನಾರ್ಧನ, ಸಿ.ಆರ್.ಶಾನಬಾಗ್, ಎಸ್.ವಿ.ಭಟ್, ಜಿ.ವಿ.ಪೈ. ಕೃಷ್ಣ, ಅಚ್ಯುತರಾವ್, ವಾಮನ, ಚುಟುಕು ಸಾಹಿತಿ ವಿಡಂಬಾರಿ ಮೊದಲಾದವರು ಭಾಗವಹಿಸಿದ್ದರು.

ಶಿವಮೊಗ್ಗ : ಸಿಪಿಐ(ಎಂ) ನೇತೃತ್ವದಲ್ಲಿ ಪ್ರಧಾನ ಅಂಚೆ ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಯಿತು. ಪಕ್ಷದ ಮುಖಂಡರಾದ ಎಸ್.ಬಿ.ಶಿವಶಂಕರ್, ರೇಣುಕ, ಲಕ್ಷ್ಮಿ ನಾರಾಯಣ ರಾವ್ ಮತ್ತು ಬಿ.ಬಸವರಾಜ್ ಸೇರಿದಂತೆ ಹಲವರು ಮಾತನಾಡಿದರು.

ಭದ್ರಾವತಿ: ಸಿಪಿಐ(ಎಂ) ಮತ್ತು ಸಿಪಿಐ ಜಂಟಿಯಾಗಿ ಕಾಗದನಗರದಿಂದ ತಾಲ್ಲೂಕು ಕಛೇರಿವರೆಗೆ 'ಪ್ರತಿಭಟನಾ ಮೆರವಣಿಗೆ ನಡೆಸಿದ ನೂರಾರು ಮಂದಿ ನಂತರ ಸಾರ್ವಜನಿಕ ಸಭೆ ನಡೆಸಿದರು.

ಸಭೆಯಲ್ಲಿ ರಂಗೇಗೌಡ.ಎಲ್, ಎಸ್.ಪುಟ್ಟಸ್ವಾಮಿ ಮೊದಲಾದವರು ಮಾತನಾಡಿದರು. ಸುಗುಮಾರನ್ ಸ್ವಾಗತಕೋರಿ, ದೊರೆ ವಂದನೆ ಸಲ್ಲಿಸಿದರು.

ಮೆರವಣಿಗೆಯಲ್ಲಿ ಪರಿಮಳ ಆಯಿಲ್ಸ್ ಕಾರ್ಮಿಕರು, ಹೆಚ್‌ಎಸ್‌ಸಿಎಲ್ ಯೂನಿಯನ್ ಕಾರ್ಮಿಕರು, ಸುಜಾಯ್ ಕಾರ್ಮಿಕರು, ಪ್ರಧಾನ ಇಂಜಿನಿಯರಿಂಗ್ ವರ್ಕ್ಸ್, ಸಿಲಿಕೆಟ್ಸ್ ಕಾರ್ಮಿಕರು ಸೇರಿದಂತೆ ಸಿಐಟಿಯು ಮುಖಂಡರಾದ ಕೆ.ಸುಕುಮಾರನ್, ಜಿ.ಶಿವಣ್ಣ, ನಾಗರಾಜ್, ಕುಮಾರ, ನಾರಾಯಣ ಮೊದಲಾದವರು ಭಾಗವಹಿಸಿದ್ದರು.

ಹಾಸನ : ಹಾಸನ ಜಿಲ್ಲೆಯ ವಿವಿಧ ತೋಟಗಳ ಸಿಐಟಿಯು ವಿನ ಪ್ರತಿನಿಧಿಗಳು, ಕಾಫಿ ಕ್ಯೂರಿಂಗ್ ಕಾರ್ಮಿಕರು ಸೇರಿದಂತೆ ವಿವಿಧ ಸಂಘಟನೆಗಳ 250 ಕ್ಕೂ ಹೆಚ್ಚು ಕಾರ್ಯಕರ್ತರು ಸಿಪಿಐ(ಎಂ) ನೇತೃತ್ವದಲ್ಲಿ ಹೇಮಾವತಿ ಪ್ರತಿಮೆಯಿಂದ ಹೊರಟ ಮೆರವಣಿಗೆ ಜಿಲ್ಲಾ ಕಚೇರಿ ತಲುಪಿ, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು. ನಂತರ ಮೂರು ಗಂಟೆವರೆಗೆ ಪ್ರತಿಭಟನಾ ಸಭೆ ನಡೆಯಿತು. ಸಭೆಯಲ್ಲಿ ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಸುಕುಮಾರ್ ಸೇರಿದಂತೆ ವಿವಿಧ ಸಂಘಟನೆಯ ರವಿಕುಮಾರ್, ಅಹಮ್ಮದ್, ಸುನೀತ, ಶಶಿಕಲಾ, ವಾಸು ಮೊದಲಾದವರು ಮಾತನಾಡಿದರು.

ತುಮಕೂರು: ಸಿಪಿಐ(ಎಂ) ಮತ್ತು ಸಿಪಿಐ ಸಂಯುಕ್ತ ಆಶ್ರಯದಲ್ಲಿ 200ಕ್ಕೂ ಹೆಚ್ಚು ಕಾರ್ಯಕರ್ತರು ನಗರದ ಟೌನ್ ಹಾಲ್ ವೃತ್ತದಿಂದ ಅಶೋಕ ರಸ್ತೆ ಮೂಲಕ ಜಿಲ್ಲಾದಿಕಾರಿ ಕಛೇರಿ ತಲುಪಿ ಮನವಿ ಸಲ್ಲಿಸಿದರು.

ಪ್ರತಿಭಟನಾ ಸಭೆಯಲ್ಲಿ ಸಿಪಿಐ(ಎಂ)ನ ಮಹಮ್ಮದ್ ದಸ್ತಗೀರ್, ಸೈಯದ್ ಮುಜೀಬ್ ಸಿಪಿಐ ನ ಶಿವಕುಮಾರ್ ಮೊದಲಾದವರು ಮಾತನಾಡಿದರು.

ಮೆರವಣಿಗೆಯಲ್ಲಿ ಟಿ.ಆರ್. ರೇವಣ್ಣ ಕೆಂಚೇಗೌಡ, ಜೋಗಪ್ಪ, ವಿ.ಕೋದಂಡ ರಾಮು, ಅಲ್ಲಾ ಬಕಾಸ್, ರಮೇಶ್, ನವೀನ್, ಗಿಂಜಣ್ಣ, ರಾಜಮ್ಮ ಅಪ್ಸರ, ಲಿಯಾಕತ್ ಅಹಮದಿ ಮುಂತಾದವರು ಇದ್ದರು

ಬೆಳಗಾವಿ: ಸಿಪಿಐ ಮತ್ತುಸಿಪಿಐ(ಎಂ) ಮುಂಖಡರು ಸೇರಿದಂದತೆ 50ಕ್ಕೂ ಹೆಚ್ಚು ಕಾರ್ಯಕರ್ತರು ಬೆಲೆ ಇಳಿಸುವಂತೆ ಒತ್ತಾಯಿಸುವ ಮನವಿಯನ್ನು ಜಿಲ್ಲಾದಿಕಾರಿಗಳಿಗೆ ಸಲ್ಲಿಸಿದರು. ನಿಯೋಗದಲ್ಲಿ ಸಿಪಿಐ ನ ವಿಜಯ ಕುಮಾರ್, ನಾಗೇಶ ಸಾತೇರಿ ಹಾಗು ಸಿಪಿಐ(ಎಂ)ನ ವಿ.ಪಿ. ಕುಲಕರ್ಣಿ ಮೊದಲಾವರಿದ್ದರು.


ಮಳವಳ್ಳಿ : ಸಿಪಿಐ(ಎಂ) ಪ್ರಾದೇಶಿಕ ಸಮಿತಿ ನೇತೃತ್ವದಲ್ಲಿ 30 ಮಹಿಳೆಯರು ಸೇರಿದಂತೆ 130 ಕ್ಕೂ ಹೆಚ್ಚು ಕಾರ್ಯಕರ್ತರು ನಗರದ ಪುರಸಭೆಯಿಂದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಕಾರ್ಯದರ್ಶಿ ಪುಟ್ಟಮಾದು, ಜಿ.ರಾಮಕೃಷ್ಣ ಮಾತನಾಡಿ ಕೇಂದ್ರ ಸರ್ಕಾರದ ಈ ಬೆಲೆ ಏರಿಕೆ ನೀತಿ ಕೊಳ್ಳುವವರ ಸೊಲ್ಲಡಗಿಸುವಂತಾಗಿದೆ, ಕೂಡಲೇ ಬೆಲೆ ಏರಿಕೆ ಕೈಬಿಡುವಂತೆ ಆಗ್ರಹಿಸಿದರು. ಸಮಿತಿ ಸದಸ್ಯ ಭರತ್ ರಾಜ್ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯದ ಎಲ್ಲಾ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆದ ಬಗ್ಗೆ ವರದಿಯಾಗಿದೆ.

ಫೆ: 18, 'ಸತಿ' ಸಮರ್ಥನಾ ವಿರೋಧಿ ಕಾರ್ಯಕ್ರಮ

ಮೂಲಭೂತವಾದ ತಂದೊಡ್ಡುವ ಅಪಾಯದ ಮುನ್ಸೂಚನೆಯಾದ ವಿಶ್ವಹಿಂದು ಪರಿಷತ್‌ನ 8ನೇ ಧರ್ಮಸಂಸತ್ತಿನಲ್ಲಿ 'ಸತಿ' ಪದ್ಧತಿ ಪುನಃ ಪ್ರತಿಷ್ಠಾಪನೆಯ ಆದೇಶದ ವಿರುದ್ಧ ಫೆ.18 ರಂದು ಜನವಾದಿ ಮಹಿಳಾ ಸಂಘಟನೆಯು ಸೇರಿದಂತೆ ಬೆಂಗಳೂರಿನ ಹಲವು ಪ್ರಗತಿಪರ ಸಂಘಟನೆಗಳು ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ನಡೆಸಿ, ಪುರಭವನದ ಎದುರು ಬಹಿರಂಗ ಸಭೆ ಹಮ್ಮಿಕೊಂಡಿವೆ.



ಜಪಾನೀ ಶಾಂತಿ ನಿಯೋಗಕ್ಕೆ ಕಲ್ಕತ್ತಾ, ತಿರುವನಂತಪುರಗಳಲ್ಲಿ ಭವ್ಯ ಸ್ವಾಗತ

ಹತ್ತು ಸದಸ್ಯರುಳ್ಳ ಜಪಾನೀ ಶಾಂತಿ ನಿಯೋಗವೊಂದು ಜನವರಿ 21 ರಂದು ಕಲ್ಕತ್ತೆಗೆ ಭೇಟಿ ನೀಡಿದಾಗ ಅದಕ್ಕೆ ಭವ್ಯ ಸ್ವಾಗತ ನೀಡಲಾಯಿತು. ಜನವರಿ 28 ರಂದು ನಿಯೋಗ ಕೇರಳದ ರಾಜಧಾನಿ ತಿರುವನಂತಪುರ ತಲುಪಿದಾಗಲೂ ಅದಕ್ಕೆ ಭವ್ಯ ಸ್ವಾಗತ ಕಾದಿತ್ತು.

ಜಪಾನಿನ ಅಣು ಬಾಂಬ್ ಮತ್ತು ಹೈಡ್ರೋಜನ್ ಬಾಂಬ್ ವಿರೋಧಿ ಸಮಿತಿ ಗೆನ್‌ಸ್ಯುಕ್ಯೋ ದ ಹಲವು ಪದಾಧಿಕಾರಿಗಳೂ ಈ ನಿಯೋಗದಲ್ಲಿದ್ದರು. ಈ ನಿಯೋಗವನ್ನು ಸ್ವಾಗತಿಸಲು ಕಲ್ಕತ್ತೆಯಲ್ಲಿ 59 ಸಾಮೂಹಿಕ ಸಂಘಟನೆಗಳ, ಗುಂಪುಗಳ ಒಂದು ಸಾಮೂಹಿಕ ಸ್ವಾಗತ ಸಮಿತಿಯನ್ನು ರಚಿಸಲಾಗಿತ್ತು. ಹಿರಿಯ ಕಮ್ಯುನಿಸ್ಟ್ ಮುಖಂಡ ಹಿರೇನ್ ಮುಖರ್ಜಿ ಇದರ ಅಧ್ಯಕ್ಷರಾಗಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಚಿತ್ತಬ್ರತ ಮಜುಂದಾರ್ ಈ ಸ್ವಾಗತ ಸಮಿತಿಯ ಕಾರ್ಯದರ್ಶಿಯಾಗಿದ್ದರು.

ನೇತಾಜಿ ಒಳ ಕ್ರೀಡಾಂಗಣದಲ್ಲಿ ಸ್ವಾಗತ ಸಮಾರಂಭ ನಡೆಯಿತು. ಮುಖ್ಯಮಂತ್ರಿ ಜ್ಯೋತಿಬಸು ಮುಖ್ಯ ಭಾಷಣಕಾರರಾಗಿದ್ದರು. ಪರಮಾಣು ನಿಶ್ಶಸ್ತ್ರೀಕರಣದ ದಾರಿ ಕಲ್ಲು-ಮುಳ್ಳಿನ ಹಾದಿ ಸವೆಸಿ ಬಂದಿದೆ ಎಂದ ಅವರು ವಿಶ್ವಸಂಸ್ಥೆ ಎಲ್ಲಾ ರೀತಿಗಳ ಅಣ್ವಸ್ತ್ರಗಳನ್ನು ನಾಶಮಾಡಿ ನಿಶ್ಶಸ್ತ್ರೀಕರಣ ತರಬೇಕೆಂದು ಒಂದು ಠರಾವು ಅಂಗೀಕರಿಸಿದ್ದರೂ ಸಾಮ್ರಾಜ್ಯಶಾಹಿ ಶಕ್ತಿಗಳ ಹಠಮಾರಿತನದಿಂದಾಗಿ ಗಮನಾರ್ಹವಾದುದೇನೂ ಆಗಿಲ್ಲ ಎಂದು ಖೇದ ವ್ಯಕ್ತಪಡಿಸಿದರು.

ಬಿಜೆಪಿ ಸರಕಾರದ ಪೋಖ್ರಾನ್ ಸ್ಫೋಟದಿಂದಾಗಿ ಭಾರತ ತಾನು ಗಳಿಸಿದ್ದ ಅಂತರ್‍ರಾಷ್ಟ್ರೀಯ ಪ್ರತಿಷ್ಠೆಯನ್ನು ಕಳಕೊಂಡಿದೆ. "ನಾನು ಇತ್ತೀಚೆಗೆ ಬ್ರಿಟನ್ನಿಗೆ ಹೋಗಿದ್ದಾಗ ಭಾರತ ಶಾಂತಿ ನಿಲುವು ಬಿಟ್ಟು ಯುದ್ಧಕೋರತನ ಪ್ರದರ್ಶಿಸುತ್ತಿದೆ ಎಂಬ ತೆಗಳಿಕೆ ಕೇಳಬೇಕಾಗಿ ಬಂತು" ಎಂದ ಜ್ಯೋತಿಬಸುರವರು ಆಡಳಿತದ ಎಲ್ಲಾ ವಲಯಗಳಲ್ಲಿ ಭಾರೀ ವಿಫಲತೆ ಕಂಡ ಬಿಜೆಪಿ ನೇತೃತ್ವದ ಸರಕಾರ ತನ್ನ ಅಧೋಗತಿಗಿಳಿಯುತ್ತಿದ್ದ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಈ ಪರಮಾಣು ಸ್ಪರ್ಧೆಗಿಳಿದಿದೆ, ಈ ಪ್ರಕ್ರಿಯೆಯಲ್ಲಿ ಭಾರತದ ವಿದೇಶಾಂಗ ನೀತಿಯನ್ನು ವಿಕೃತಗೊಳಿಸಿದೆ ಎಂದು ಹೇಳಿದರು.

ಶಸ್ತ್ರಾಸ್ತ್ರಗಳು, ಅವು ಯಾವುದೇ ರೀತಿಯವಾಗಿರಲಿ ಎಂದೂ ಕೊನೆಯ ಮಾತಾಗಲು ಸಾಧ್ಯವಿಲ್ಲ, ಕೊನೆಯ ಮಾತು ಜನರಿಂದಲೇ ಬರಬೇಕು ಎಂದು ಖಡಾಖಂಡಿತವಾಗಿ ಹೇಳಿದ ಜ್ಯೋತಿಬಸುರವರು ನಿಶ್ಶಸ್ತ್ರೀಕರಣಕ್ಕಾಗಿ ಮತ್ತು ಯುದ್ಧದ ವಿರುದ್ಧ ವಿಶ್ವವ್ಯಾಪಿ ಸಂಯೋಜಿತ ಆಂದೋಲನದ ಮೂಲಕ ಯುದ್ಧಕೋರತನದ ಮೇಲೆ ಒತ್ತಡ ಸೃಷ್ಟಿಸಲು ಸಾಧ್ಯ ಎಂದರು. ಹಿರೋಶಿಮಾ- ನಾಗಸಾಕಿಯಲ್ಲಿ ಅಣುಸ್ಫೋಟದ ಭಯಾನಕ ಪರಿಣಾಮಗಳನ್ನು ಕಂಡ ಜಪಾನಿನ ನಾಗರಿಕರ ಸಂದೇಶಕ್ಕೆ ಎಲ್ಲರೂ ಕಿವಿಗೊಡಬೇಕು ಎಂದು ಜ್ಯೋತಿ ಬಸು ಹೇಳಿದರು.

ಜಪಾನೀ ಗೆನ್‌ಸ್ಯುಕ್ಯೋ ದ ರಾಷ್ಟ್ರೀಯ ಮಂಡಳಿಯ ಸದಸ್ಯ ಮಿತ್ಸು ಪೋ ಸಾತೋ ಎರಡು ವರ್ಷದ ಬಾಲಕನಾಗಿ ಅಣುಸ್ಫೋಟದಿಂದಾಗಿ ಜನಗಳು 'ಜೀವಂತ ಕೊಳ್ಳಿ'ಗಳಾಗಿ ಬಿಟ್ಟದ್ದನ್ನು ನೋಡಿದ ತನ್ನ ಭಯಾನಕ ಅನುಭವಗಳನ್ನು ವಿವರಿಸಿದರು. ಅವರ ಇಡೀ ಕುಟುಂಬ ಅಣು ವಿಸ್ಫೋಟದಲ್ಲಿ ನಿರ್ನಾಮವಾಗಿ ಹೋಯಿತು. ವಿಶ್ವವ್ಯಾಪಿ ಐಕ್ಯ ಪ್ರಯತ್ನದಿಂದ ಮಾತ್ರವೇ ಯುದ್ಧಕೋರರ ಆರ್ಭಟವನ್ನು ತಡೆಯುಲು ಸಾಧ್ಯ ಎಂದ ಸಾತೋ ಹಿರೋಶಿಮಾ ದಿನವಾದ ಆಗಸ್ಟ್ 6 ರಂದು ಕಲ್ಕತ್ತೆಯ ನಾಗರಿಕರ ಚಾರಿತ್ರಿಕ ಮೆರವಣಿಗೆ ತನ್ನಲ್ಲಿ ಉತ್ಸಾಹ ತುಂಬಿತು ಎಂದರು.

ಜಪಾನೀ ಶಾಂತಿ ನಿಯೋಗ ಐದು ವಿಭಿನ್ನ ವರ್ಕ್‌ಶಾಪ್‌ಗಳಲ್ಲಿ ವಿವಿಧ ಸಾಮೂಹಿಕ ಸಂಘಟನೆಗಳ ಜೊತೆಗೆ ಪರಮಾಣು ಅಸ್ತ್ರಗಳ ವಿರುದ್ಧ ಶಾಂತಿ ಆಂದೋಲನವನ್ನು ಕಟ್ಟುವ ಬಗ್ಗೆ ವಿಚಾರ ವಿನಿಮಯ ನಡೆಸಿದರು. ನಂತರ ದುರ್ಗಾಪುರದಲ್ಲೂ ಅವರಿಗೆ ನಾಗರಿಕ ಸನ್ಮಾನ ನೀಡಲಾಯಿತು

ತಿರುವನಂತಪುರದಲ್ಲಿ

ಎ.ಕೆ.ಜಿ. ಸ್ಮಾರಕ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ಜಪಾನೀ ಶಾಂತಿ ನಿಯೋಗಕ್ಕೆ ಭವ್ಯ ಸ್ವಾಗತ ನೀಡಿದವು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿನರಾಯಿ ವಿಜಯನ್, ಪೊಲಿಟ್‌ಬ್ಯೂರೋ ಸದಸ್ಯರಾದ ಬಿ.ಎಸ್.ಅಚ್ಯುತಾನಂದನ್, ಪ್ರಖ್ಯಾತ ವ್ಯಂಗ್ಯಚಿತ್ರಕಾರ ಅಬುಅಬ್ರಾಹಂ, ಪ್ರೊ. ಎ.ಎನ್.ವಿ.ಕುರುಪ್ ಮತ್ತಿತರರು ಶಾಂತಿ ನಿಯೋಗವನ್ನು ಸ್ವಾಗತಿಸಿದರು. ಕಾರ್ಮಿಕರು, ರೈತರು, ವಿದ್ಯಾರ್ಥಿಗಳ, ಯುವಜನರ, ಮಹಿಳೆಯರ ಸಾಮೂಹಿಕ ಸಂಘಟನೆಗಳು ನೆನಪಿನ ಕಾಣಿಕೆಗಳನ್ನು ನಿಯೋಗಕ್ಕೆ ನೀಡಿದರು.

ಜಪಾನೀ ಶಾಂತಿ ನಿಯೋಗ ಭಾರತ, ಪಾಕಿಸ್ತಾನಗಳ ಪರೀಕ್ಷಾ ಸ್ಫೋಟಗಳ ಬಗ್ಗೆ ಹಾಗೂ ಇರಾಕ್ ಮೇಲೆ ಅಮೆರಿಕಾದ ದಾಳಿಗಳಿಗೆ ಪ್ರತಿಭಟನೆ ವ್ಯಕ್ತಪಡಿಸಿತು. ಜಪಾನಿನ 'ಹೊಸ ಮಹಿಳಾ ಸಂಘಟನೆ' ನಿಶ್ಶಸ್ತ್ರೀಕರಣದ ಮನವಿ 9.3 ಕೋಟಿ ಸಹಿ ಸಂಗ್ರಹಿಸಿದೆ ಎಂದು ನಿಯೋಗ ತಿಳಿಸಿತು. 'ನಮಗೆ ಸ್ವಚ್ಛ, ಸುರಕ್ಷಿತ, ಪರಮಾಣು ಶಸ್ತ್ರಗಳಿಲ್ಲದ ವಿಶ್ವ ಬೇಕು' ಎಂಬುದು ಅವರ ಘೋಷಣೆಯಾಗಿತ್ತು. ನಿಯೋಗ ತಿರುವನಂತಪುರದ ಮೇಯರ್‌ಗೆ ಹಿರೋಶಿಮಾ ಶಾಂತಿ ಸಮ್ಮೇಳನದ ಪೋಸ್ಟರ್‌ಗಳನ್ನು, ದಸ್ತಾವೇಜುಗಳ ಪ್ರತಿಗಳನ್ನು ನೀಡಿತು. ಮಾಜಿ ಸಂಸತ್ ಸದಸ್ಯ ಎಂ.ಎ.ಬೇಬಿ ನಿಯೋಗದ ಸದಸ್ಯರಿಗೆ ವಂದನಾರ್ಪಣೆ ಮಾಡಿದರು.

(ಐಎನ್‌ಎನ್)

'ವಿವೇಕ'ದ ಸಮಾವೇಶ

ಶಾಂತಿ ಮತ್ತು ಸೌಹಾರ್ದದತ್ತ ದಿಟ್ಟ ಹೆಜ್ಜೆ

ಜನವರಿ 31 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ "ಶಾಂತಿ ಮತ್ತು ಸೌಹಾರ್ದದತ್ತ" ಎಂಬ ಸಮಾವೇಶವನ್ನು 'ವಿವೇಕ' ಸಂಘಟನೆ ಏರ್ಪಡಿಸಿತ್ತು.

'ವೇದ ಪುರಾಣಗಳಲ್ಲಾಗಲೀ, ಉಪನಿಷತ್ತುಗಳಲ್ಲಾಗಲೀ ಅಥವಾ ರಾಮಾಯಣ ಮಹಾಭಾರತಗಳಲ್ಲಾಗಲೀ ಕೊನೆಗೆ ಭಗವದ್ಗೀತೆಯಲ್ಲಾಗಲೀ ಎಲ್ಲೂ 'ಹಿಂದು' ಎಂಬ ಶಬ್ದವಿಲ್ಲ. ಇದು ಛತ್ರಿ ಸಂಘಗಳ ಛತ್ರಿ ಶಬ್ದ' ಎಂದು ಖ್ಯಾತ ಸರೋದ್ ವಾದಕ ರಾಜೀವ್ ತಾರಾನಾಥ್‌ರವರು 'ಹಿಂದುತ್ವ' ಪ್ರತಿಪಾದಕರನ್ನು ಬಯಲಿಗೆಳೆಯುವುದರ ಮೂಲಕ ಸಮಾವೇಶದ ಆಶಯಗೋಷ್ಠಿ ಪ್ರಾರಂಭವಾಯಿತು.

ಇದಕ್ಕೂ ಮುಂಚೆ 'ವಿವೇಕ'ದ ಸಂಚಾಲಕ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಶ್ರೀ ಸಿ.ಜಿ.ಕೃಷ್ಣಸ್ವಾಮಿಯವರು 'ವಿವೇಕ'ದ ಆಶಯಗಳನ್ನು ಸಮಾವೇಶದ ಮುಂದಿಟ್ಟರು. 1974 ರಲ್ಲಿ ಸರ್ವಾಧಿಕಾರಿ ಧೋರಣೆಯ ವಿರುದ್ಧ ತೀರ ಪುಟ್ಟದಾಗಿ ಪ್ರಾರಂಭವಾದ ವಿರೋಧ ಇಡೀ ದೇಶವನ್ನು ಆವರಿಸಿ ಪ್ರಭುತ್ವ ಆತಂಕಕ್ಕೀಡಾಗಿದ್ದನ್ನು ನೆನಪಿಸಿಕೊಳ್ಳುತ್ತಾ, ಈಗ ಫ್ಯಾಸಿಸ್ಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಅದಕ್ಕಿಂತಲೂ ಪ್ರಬಲವಾದ ಚಳುವಳಿಯ ಅವಶ್ಯಕತೆ ಇದೆ, ಆ ನಿಟ್ಟಿನಲ್ಲಿ 'ವಿವೇಕ'ದ ಸಮಾವೇಶ ಮೊದಲ ಹೆಜ್ಜೆ ಎಂದು ತಿಳಿಸಿದರು.

"ಹಿಂದುತ್ವದ ಹೆಸರಿನಲ್ಲಿ ವೈದಿಕ ಸಂಸ್ಕೃತಿಯನ್ನು ಎಲ್ಲಾ ಭಾರತೀಯರ ಮೇಲೆ ಹೇರುವ ಹುನ್ನಾರವನ್ನು ಸಂಘ ಪರಿವಾರದವರು ಮಾಡುತ್ತಿದ್ದಾರೆ. 'ಹಿಂದುತ್ವ'ದ ಹೆಸರಿನಲ್ಲಿ ಮುಗ್ಧ ಜನರ ಕಗ್ಗೊಲೆ ನಡೆಸುತ್ತಿದ್ದಾರೆ. ಇಂತಹ ನರಮೇಧದ ವಿರುದ್ಧ ಇಡೀ ಜನಸಮುದಾಯ ದನಿ ಎತ್ತಬೇಕು" ಎಂದು ಲೇಖಕಿ ಶ್ರೀಮತಿ ಎಚ್.ಎಸ್.ಪಾರ್ವತಿ ಕರೆ ಕೊಟ್ಟರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರೂ ಬಂಡಾಯ ಸಾಹಿತಿ ಮತ್ತು ಚಲನಚಿತ್ರ ನಿರ್ದೇಶಕ ಬರಗೂರು ರಾಮಚಂದ್ರಪ್ಪನವರು ಕೋಮುವಾದದ ಹುಟ್ಟು ಬೆಳವಣಿಗೆಯನ್ನು ವಿವರಿಸಿ ಈ ವ್ಯವಸ್ಥೆಯ ಮೂಲದಲ್ಲೇ ಪುರೋಹಿತಶಾಹಿಗಳ ಹಿಡಿತವಿದೆ. ಪ್ರಜಾಸತ್ತಾತ್ಮಕ ಹಕ್ಕುಗಳ ವಿಸ್ತಾರದೊಂದಿಗೆ ಜಾರಿ ಹೋಗುತ್ತಿರುವ ತಮ್ಮ ಹಿಡಿತವನ್ನು ಪುನಸ್ಥಾಪಿಸಲು ನಡೆಸುತ್ತಿರುವ ಪ್ರಯತ್ನವಿದಾಗಿದೆ ಎಂದರು.

ಧರ್ಮ ಮತ್ತು ರಾಜಕೀಯ ಗೋಷ್ಠಿ

ರಾಜಕೀಯದಲ್ಲಿ ಧರ್ಮವನ್ನು ಬೆರೆಸಿ ಕೋಮು ವಿಷಜ್ವಾಲೆಯನ್ನು ದೇಶಾದ್ಯಂತ ಹಚ್ಚಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವ ಬಿ.ಜೆ.ಪಿ. ಮತ್ತಿತರ ಅಷ್ಟಪಾದಿ ಜಂತುಗಳ ಬಗ್ಗೆ ಎಚ್ಚರದಿಂದಿರಲು ಈ ಗೋಷ್ಠಿ ಕರೆ ನೀಡಿತು. ಶ್ರೀ ನೀಲಗುಂದ ಮಹಂತ ಸ್ವಾಮಿಗಳು, ಕಾಂಗ್ರೆಸ್ ಪಕ್ಷದಿಂದ ಮೊಯಿದ್ದೀನ್, ಸಿಪಿಐ(ಎಂ) ನಿಂದ ಜಿ.ವಿ.ಶ್ರೀರಾಮರೆಡ್ಡಿ(ಶಾಸಕರು ಮತ್ತು ಶ್ರೀ ಜಿ.ಎನ್.ನಾಗರಾಜ್, ಸಿಪಿಐ ನಿಂದ ಶ್ರೀ ಎಂ.ಸಿ.ವೆಂಕಟರಾಮು, ಲೋಕಶಕ್ತಿಯಿಂದ ಶ್ರೀ ಪುಟ್ಟಸ್ವಾಮಿ ಮತ್ತು ಶ್ರೀ ಕುಟ್ಟಿನೋ ಮತ್ತು ಬಂಡಾಯ ಸಾಹಿತಿ ಮತ್ತು ಪತ್ರಕರ್ತ ಶ್ರೀ ರಂಜಾನ್ ದರ್ಗಾ ಅವರುಗಳು ಮಾತನಾಡಿದರು.

'ಮೈಸೂರು ಹುಲಿ' ಎಂದೇ ಪ್ರಖ್ಯಾತನಾಗಿರುವ ಟಿಪ್ಪುಸುಲ್ತಾನ್‌ನ ಎರಡನೇ ಶತಮಾನೋತ್ಸವವನ್ನು ಆಚರಿಸಬೇಕಿರುವ ಈ ಸಂದರ್ಭದಲ್ಲಿ ಅವನ ವಿರುದ್ಧ ಅಪಪ್ರಚಾರವನ್ನು ಸಂಘ ಪರಿವಾರದವರು ಪ್ರಾರಂಭಿಸಿದ್ದಾರೆ. ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ವಿರುದ್ಧ ಅವಿರತ ಹೋರಾಟ ನಡೆಸಿ ತನ್ನ ಪ್ರಾಣವನ್ನೇ ತೆತ್ತ ದೇಶಪ್ರೇಮಿ ಟಿಪ್ಪು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಬ್ರಿಟೀಷರ ಜತೆ ಶಾಮೀಲಾಗಿ ಪಿತೂರಿ ನಡೆಸಿದ ಈ ಆರ್.ಎಸ್.ಎಸ್.ನ ದೇಶದ್ರೋಹಗಳು ಇಂದು ಟಿಪ್ಪುವಿನಲ್ಲಿ ತಪ್ಪು ಹುಡುಕಲು ಹೊರಟಿದ್ದಾರೆ. ಈ ಹಿನ್ನೆಲೆಯಲ್ಲಿ 18.1.99 ರಂದು ಸಿ.ಜಿ.ಕೃಷ್ಣಸ್ವಾಮಿಯವರು ಕಾಳಜಿ ವಹಿಸಿ ಕರೆದ ಸಭೆಯಲ್ಲಿ ಗಿರೀಶ್ ಕಾರ್ನಾಡ್, ಗಿರೀಶ್ ಕಾಸರವಳ್ಳಿ, ಕೆ.ಮರುಳಸಿದ್ದಪ್ಪ, ಸಮುದಾಯದ ಗುಂಡಣ್ಣ, ಸುರೇಂದ್ರ, ಪ್ರಯೋಗರಂಗದ ನಾಗರಾಜ ಮೂರ್ತಿ, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ, ದಲಿತ ಸಂಘರ್ಷ ಸಮಿತಿಯ ಲಕ್ಷ್ಮಿನಾರಾಯಣ, ಕಾಂಗ್ರೆಸ್ ವಕ್ತಾರ ಮೋಹನ್ ಕೊಂಡಜ್ಜಿ, ಜನತಾದಳದಿಂದ ಮಾಜಿ ಲೋಕಸಭಾ ಸದಸ್ಯ ಸಿ.ನಾರಾಯಣ ಸ್ವಾಮಿ, ಸಿಪಿಐ(ಎಂ) ನಿಂದ ಪಿ.ಜಗನ್ನಾಥ್, ಎಸ್.ವೈ.ಗುರುಶಾಂತ್, ಲೋಕಶಕ್ತಿಯ ನಾಗರಾಜ್, ಸಾಹಿತಿ ಶಿವಪ್ರಕಾಶ್ ಇವರುಗಳು ಭಾಗವಹಿಸಿದ್ದರು. 31.1.99 ರ 'ವಿವೇಕ'ದ ಸಮಾವೇಶ ರೂಪುಗೊಂಡದ್ದು ಈ ಸಭೆಯಲ್ಲೇ.

31.1.99 ರ ಸಮಾವೇಶದ ನಂತರ ಜರುಗಿದ ಚಾಲನಾ ಸಮಿತಿ ಸಭೆಯಲ್ಲಿ ಜಾತ್ಯಾತೀತ ಶಕ್ತಿಗಳೆಲ್ಲರೂ ಒಗ್ಗೂಡಿ ರಾಜ್ಯವ್ಯಾಪಿ ಪ್ರಚಾರ ನಡೆಸುವ ಕುರಿತು 21.2.99 ರಂದು ಬೆಂಗಳೂರಿನಲ್ಲಿ ಸಭೆ ಕರೆಯಲಾಗಿದೆ.

ವರದಿ: ಸುರೇಂದ್ರ

ಜಯಲಲಿತಾ ವಿರುದ್ಧ ಭ್ರಷ್ಟಾಚಾರ ಕೇಸುಗಳ ವರ್ಗಾವಣೆ ನೋಟಿಫಿಕೇಷನ್


ಬಿಜೆಪಿ ಸರಕಾರದ ಇನ್ನೊಂದು ಅನೀತಿಯುತ ಕ್ರಮ

ಎಐಡಿಎಂಕೆಯ ಮುಖ್ಯಸ್ಥೆ ಜಯಲಲಿತಾ ಹಾಗೂ ಆಕೆಯ ಸಂಪುಟದ ಮಾಜಿ ಸಹಯೋಗಿಗಳ ಮೇಲೆ ಇರುವ ವಿವಿಧ ಭ್ರಷ್ಟಾಚಾರ ಮೊಕದ್ದಮೆಗಳು ಚೆನ್ನೈಯಲ್ಲಿ ವಿಶೇಷ ನ್ಯಾಯಾಲಯಗಳಲ್ಲಿ ವಿಚಾರಣೆಯ ವಿವಿಧ ಹಂತಗಳಲ್ಲಿವೆ. ಕೇಂದ್ರ ಸರಕಾರ ಈಗ ಎರಡು ನೋಟಿಫಿಕೇಷನ್‌ಗಳನ್ನು ಹೊರಡಿಸಿ ಇವನ್ನೆಲ್ಲಾ ಚೆನ್ನೈನ ಸಾಮಾನ್ಯ ನ್ಯಾಯಾಲಯಗಳಿಗೆ ವರ್ಗಾಯಿಸಿದೆ.

ಈ ಮೊಕದ್ದಮೆಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳ ನೇಮಕವನ್ನು ಬಿಜೆಪಿಯ ಮಿತ್ರಪಕ್ಷ ಎಐಎಡಿಎಂಕೆ ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು. ಚೆನ್ನೈ ಹೈಕೋರ್ಟ್ ಈ ನೇಮಕವನ್ನು ಎತ್ತಿಹಿಡಿದಿತ್ತು. ಅವರು ಸುಪ್ರೀಂ ಕೋರ್ಟಿಗೆ ಹೋದರು. ಸುಪ್ರೀಂಕೋರ್ಟ್ ಕೂಡಾ ಈ ವಿಶೇಷ ನ್ಯಾಯಾಲಯಗಳ ಕಲಾಪಗಳನ್ನು ತಡೆಹಿಡಿಯಲು ನಿರಾಕರಿಸಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ಈ ಎರಡು ನೋಟಿಫಿಕೇಷನ್‌ಗಳು ಬಿಜೆಪಿ ನೇತೃತ್ವದ ಸರಕಾರ ಭ್ರಷ್ಟಾಚಾರ ವಿರುದ್ಧ ತಾನು ಹೋರಾಡುತ್ತೇನೆ ಎಂದು ಬಾಯಿಯಲ್ಲಿ ಹೇಳಿದರೂ ಎಂತಹ ಅನೀತಿಯುತ ಮಟ್ಟಕ್ಕೂ ಹೋಗಲು ಸಿದ್ಧವಿದೆಯೆಂಬುದನ್ನು ತೋರಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಈ ನೋಟಿಫಿಕೇಷನ್‌ಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು ಎಂದು ಅದು ಒತ್ತಾಯಿಸಿದೆ.

ವಾರದ ವ್ಯಂಗ್ಯ ಚಿತ್ರ



ಇ.ಎಂ.ಎಸ್ ಭವನ ನಿಧಿ



ಹಿಂದಿನ ಮೊತ್ತ	ರೂ. 8,59,760
ಅರವಿಂದಾಕ್ಷನ್, ಬಿಇಎಲ್, ಬೆಂಗಳೂರು	1000
ಹರಿಹರ ಫಾಲಿಫೈಬರ್ಸ್, ಹರಿಹರ	1000
ಧಾರವಾಡ ಜಿಲ್ಲಾ ಸಮಿತಿ ಮೂಲಕ	
ಡಿ.ಜೆ.ಗೋಂದಕರ್	200
ರವೀಂದ್ರಕುಮಾರ್ ಹೊನವಾಡ	100
ಹಿತೈಷಿಗಳು	100
ವಿಜಯ .ಸಿ	1000
ಕೆ.ಲಕ್ಷ್ಮಿನಾರಾಯಣ ರಾವ್, ಎಲ್‌ಐಸಿ, ಶಿವಮೊಗ್ಗ(ಮೊದಲ ಕಂತು)	2500
ಕೆ.ಜಿ.ಕೃಷ್ಣಮೂರ್ತಿ, ಎಲ್.ಐ.ಸಿ. ಶಿವಮೊಗ್ಗ, ಮೊದಲ ಕಂತು	1000
ಹಿತೈಷಿ, ಕೊಡಗು	2500
ವೀರೇಂದ್ರ ಶಿಂದ್ರ, ಬೆಂಗಳೂರು	101
ಒಟ್ಟು	ರೂ 8,69,261

ಹಿಂದೆ ಧಾರವಾಡ ಜಿಲ್ಲಾ ಸಮಿತಿಯಲ್ಲಿ ಪ್ರಕಟವಾದ ರೂ. 5500 ರಲ್ಲಿ ಕಾ. ಸಿ.ಆರ್. ಭಟ್ ಮತ್ತು ಸೀತಾ ಆರ್.ಭಟ್ ರೂ. 5000 ಕಾ. ವಿ.ಡಿ.ತುಪ್ಪದ ರೂ. 500

(ಡಿ.ಡಿ./ಚೆಕ್‌ಗಳನ್ನು ನೀಡುವವರು 'A.K.Gopalan Memorial Social Education Trust(R) ಹೆಸರಿನಲ್ಲಿ ಕಳುಹಿಸುವುದು)

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ